## ಶುಕ್ರವಾರ, ೨೪ನೇ ಜನವರಿ, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಸಮಾವೇಶಗೊಂಡಿತು
ಸಭಾಧ್ಯಕ್ಷ (ಗೌರವಾನ್ವಿತ ಡಾ॥ ರಾಜೇಂದ್ರ ಪ್ರಸಾದ್) ಅಧ್ಯಕ್ಷತೆ ವಹಿಸಿದ್ದರು.

ಮಾನ್ಯ ಅಧ್ಯಕ್ಷರು :

ನಾವು ನಡವಳಿಗಳನ್ನು ಈಗ ಪ್ರಾರಂಭಿಸೋಣ. ಮೊನ್ನೆ, ಸಭೆ ಸಮಾಪ್ತಿಗೊಂಡಾಗ, ಆಯವ್ಯಯ ಪತ್ರದ ಬಗ್ಗೆ ಚರ್ಚಿಸಲು ನಾವು ಸಮಿತಿಯಲ್ಲಿ ಆಸೀನರಾಗಿದ್ದೆವು. ಸದನದ ಮುಂದೆ ಮಂಡಿಸಬೇಕಾದ ಕೆಲ ನಿಲುವಳಿಗಳಿವೆ. ಆ ನಿಲುವಳಿಗಳನ್ನು ಮೊದಲು ಪ್ರಸ್ತಾವಿಸಿ ಇತ್ಯಾರ್ಥಗೊಳಿಸಬೇಕೆಂದು ನನ್ನ ಸಲಹೆ. ನಂತರ ಕಾಲಾವಕಾಶವಿದ್ದರೆ ಮತ್ತೆ ಸಮಿತಿಯಲ್ಲಿ ಆಯವ್ಯಯ ಪತ್ರದ ಬಗ್ಗೆ ಚರ್ಚಿಸೋಣ.

ಸದಸ್ಯರು ಇದನ್ನು ಅನುಮೋದಿಸುತ್ತಾರೆಂದು ನಾನು ನಂಬಿದ್ದೇನೆ.

**ಮಿ। ಸತ್ಯನಾರಾಯಣ ಸಿನ್ಹಾ** (ಬಿಹಾರ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ನಾವು ಸಭೆಯನ್ನು ಮುಂದೂಡಿದಾಗ, ಸಮಿತಿಯೊಳಗೆ ಸೇರಿದ್ದೆವು. ಈಗ ನಾವು ಔಪಚಾರಿಕವಾಗಿ ಸರ್ವಸದಸ್ಯರ ಸಭೆ ಕರೆಯುವಂತೆ ಅಗತ್ಯ ಪ್ರಸಾವಿಸುವುದು.

**ಮಾನ್ಯ ಅಧ್ಯಕ್ಷರು :** ಸಭೆಯು ಸಲಹೆಯನ್ನು ಅನುಮೋದಿಸುತ್ತದೆ ಎಂದು ನಂಬುತ್ತೇನೆ.

ನಿಲುವಳಿ ಅಂಗೀಕೃತವಾಯಿತು.

**ಮಾನ್ಯ ಅಧ್ಯಕ್ಷರು :**

ಸದನವು ಸಲಹೆಯನ್ನು ಅನುಮೋದಿಸಿರುವುದರಿಂದ ನಾವು ಸರ್ವಸದಸ್ಯರ ಸಭೆಯನ್ನು ಆಯೋಜಿಸಿ ನಿಲುವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸತ್ಯಾನಾರಾಯಣ ಸಿನ್ಹಾ ಅವರು ತಮ್ಮ ಹೆಸರಿನಲ್ಲಿರುವ ನಿಲುವಳಿಯನ್ನು ಪ್ರಸ್ತಾವಿಸುವಂತೆ ಕೇಳಿಕೊಳ್ಳುತ್ತೇನೆ.

**ಮಿ। ಸತ್ಯಾನಾರಾಯಣ ಸಿನ್ಹಾ :** ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ನಿಲುವಳಿಯನ್ನು ಪ್ರಸ್ತಾವಿಸಲು ಅನುಮತಿ ಕೋರುತ್ತೇನೆ.

ಸಂವಿಧಾನ ರಚನಾಸಭೆಯ ೧೨ನೇ ನಿಯಮದ ೧ನೇ ಉಪನಿಯಮಾನುಸಾರ ಉಪಾಧ್ಯಕ್ಷರೊಬ್ಬರನ್ನು ಸಭೆ ಚುನಾಯಿಸುವುದೆಂದು ತೀರ್ಮಾನಿಸಲಾಗಿದೆ.

ಮಾನ್ಯರೆ, ತಮ್ಮ ಅನುಮತಿ ಕೋರಿ ಕಳೆದ ಅಧಿವೇಶನದಲ್ಲಿ ನಾವು ಅಂಗೀಕರಿಸಿದ, ಉಪಾಧ್ಯಕ್ಷರಿಗೆ ಸಂಬಂಧಿಸಿದ ಪ್ರಕ್ರಿಯಾ ನಿಯಮವನ್ನು ಸಭೆಗೆ ತಿಳಿಸುತ್ತೇನೆ.

"ಸಭೆ, ಐವರು ಉಪಾಧ್ಯಕ್ಷರನ್ನು ಹೊಂದಿರುತ್ತದೆ. ಆ ಐವರಲ್ಲಿ ಇಬ್ಬರನ್ನು ಅಧ್ಯಕ್ಷರು ನಿಯಮಿಸಿದ ರೀತಿ, ಇಡೀ ಸಭೆಯ ಪೈಕಿ ಚುನಾಯಿಸಲಾಗುವುದು. ವಿಭಾಗಗಳಿಂದ ಚುನಾಯಿತರಾದ ಅಧ್ಯಕ್ಷರು ಸಭೆಯ ಪದನಿಮಿತ್ತ ಉಪಾಧ್ಯಕ್ಷರಾಗಿರುವರು".

ಮಾನ್ಯರೆ, ೧೬ನೇ ನಿಯಮಾನುಸಾರ, ಆ ಸಭೆಯ ಅಧ್ಯಕ್ಷತೆ ವಹಿಸಲು, ಉಪಾಧ್ಯಕ್ಷರು ಉಪಸ್ಥಿತರಿಲ್ಲದಾಗ, ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸಲು, ಯಾರೇ ಓರ್ವ ಸದಸ್ಯರನ್ನು ಸಭೆ ಆಯ್ಕೆ ಮಾಡಬಹುದು. ಆದುದರಿಂದ ಕೆಲಕಾಲ ತಮ್ಮ ಅನುಪಸ್ಥಿತಿ ಇದ್ದಾಗ್ಯೂ ಅಂತಹ ಸಂದರ್ಭಗಳಲ್ಲಿ, ಸಭೆಯು, ತನ್ನ ಕಾರ್ಯಕಲಾಪಗಳ ಅಧ್ಯಕ್ಷತೆ ವಹಿಸಲು ತಮ್ಮಲ್ಲೆ ಒಬ್ಬರು ಸದಸ್ಯರನ್ನು ಆಯ್ಕೆ ಮಾಡಬೇಕು. ಆದುದರಿಂದ, ಈ ಅಧಿವೇಶನದಲ್ಲಿ ಒಬ್ಬರನ್ನಾದರೂ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು ವಿಹಿತವೆನಿಸುತ್ತದೆ. ಆದುದರಿಂದ ನಾನು ಈ ನಿಲುವಳಿಯನ್ನು ಪ್ರಸ್ತಾವಿಸುತ್ತಿದ್ದೇನೆ. ಸಭೇ ಅಂಗೀಕರಿಸುವುದೆಂದು ನಂಬುತ್ತೇನೆ.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** : (ಸಂಯುಕ್ತ ಪ್ರಾಂತ್ಯಗಳು–ಸಾಮಾನ್ಯ) : ನಾನು ನಿಲುವಳಿಯನ್ನು ಅನುಮೋದಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ನಿಲುವಳಿಯನ್ನು ಪ್ರಸ್ತಾವಿಸಲಾಗಿದೆ. ಅನುಮೋದಿಸಲಾಗಿದೆ. ಇದನ್ನು ಕುರಿತು ಯಾವ ಚರ್ಚೆಯೂ ಅಗತ್ಯವಿರಲಾರದೆಂದು ಭಾವಿಸುತ್ತೇನೆ.

ನಿಲುವಳಿ ಅಂಗೀಕೃತವಾಯಿತು.

**ಮಾನ್ಯ ಅಧ್ಯಕ್ಷರು** : ಕಾರ್ಯದರ್ಶಿ ಇಂದು ಸಂಜೆ ೫ ಘಂಟೆಯವರೆಗೆ, ನಾಮಪತ್ರಗಳನ್ನು ಸ್ವೀಕರಿಸುವರು. ಚುನಾವಣೆ ಅಗತ್ಯವೆನಿಸಿದರೆ ನಾಳೆ ಬೆಳಗ್ಗೆ ೧೧ ಘಂಟೆಯಿಂದ ಮಧ್ಯಾಹ್ನ ೧೨ ಘಂಟೆಯ ವರೆಗೆ, ನೆಲದ ಅಂತಸ್ತಿನ, ೨೪ನೇ ನಂಬರ್ ಕೋಣೆಯಲ್ಲಿ (ಅಧೀನ ಕಾರ್ಯದರ್ಶಿಯವರ ಕೋಣೆಯಲ್ಲಿ) ನಡೆಯಲಿದೆ.

## ಸಲಹಾ ಸಮಿತಿಯ ಚುನಾವಣೆ

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** : ನನ್ನ ಹೆಸರಿನಲ್ಲಿರುವ ನಿಲುವಳಿಯನ್ನು ಪ್ರಸ್ತಾವಿಸಲು ಅನುಮತಿ ಕೋರುತ್ತೇನೆ. ಅದು ಹೀಗಿದೆ:

೧೯೪೬ರ ಮೆ ೧೬ರ ಕ್ಯಾಬಿನೆಟ್ ಮಿಷನ್ ಹೇಳಿಕೆಯಂತೆ, ಮುಂದೆ ನಿರೂಪಿಸಿದಂತೆ ಸಲಹಾ ಸಮಿತಿಯೊಂದನ್ನು ರಚಿಸಲು ಸಭೆ ತೀರ್ಮಾನಿಸಿದೆ.

೧(ಎ) ಸಲಹಾ ಸಮಿತಿಯು ೬೮ಕ್ಕೆ ಮೀರದಂತೆ ಸದಸ್ಯರನ್ನು ಒಳಗೊಂಡಿರುತ್ತದೆ. ಅದರಲ್ಲಿ ಸಭೆಯ ಸದಸ್ಯರಲ್ಲದವರೂ ಸೇರಿರಬಹುದು.

ಬಿ. (i) ಪ್ರಾರಂಭದಲ್ಲಿ ಅದು ೫೨ ಸದಸ್ಯರನ್ನೊಳಗೊಂಡಿರುತ್ತದೆ. ಜಂಟಿ ವರ್ಗಾವಣೀಯ ಮತದ ವಿಧಾನದಿಂದ, ಅನುಪಾತಾಧಾರಿತ ಪ್ರಾತಿನಿಧ್ಯ ತತ್ತ್ವದ ಮೇಲೆ ಅವರನ್ನು ಸಭೆ ಚುನಾಯಿಸಲಿದೆ.

ii) ೭ ಸದಸ್ಯರ ವರೆಗೆ, ಮಾನ್ಯ ಅಧ್ಯಕ್ಷರಿಗೆ ಯುಕ್ತವೆನಿಸಿದಂತೆ, ಸಭೆ ಸದಸ್ಯರನ್ನು ಚುನಾಯಿಸಬಹುದು.

ಸಿ) ಅಧ್ಯಕ್ಷರು ಒಂದು ಬಾರಿ ಅಥವಾ ಬೇರೆ ಬೇರೆ ಸಂದರ್ಭಗಳಲ್ಲಿ ೯ಕ್ಕೆ ಮೀರದಂತೆ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು.

೨. ವಾಯವ್ಯ ಬುಡಕಟ್ಟು ಪ್ರದೇಶಗಳು, ಈಶಾನ್ಯ ಬುಡಕಟ್ಟು ಪ್ರದೇಶಗಳು, ಹೊರಗಿಡಲ್ಪಟ್ಟ (ಹೊರಗುಳಿದ) ಪ್ರದೇಶಗಳು, ಭಾಗಶಃ ಹೊರಗಿಡಲ್ಪಟ್ಟ (ಹೊರಗುಳಿದ) ಪ್ರದೇಶಗಳ ಆಡಳಿತ ನಿರ್ವಹಣೆಗಾಗಿ ಯೋಜನೆ ತಯಾರಿಸಲು, ಸಲಹಾ ಸಮಿತಿಯು, ಉಪಸಮಿತಿಗಳನ್ನು ನೇಮಿಸಬೇಕು. ಅಂತಹ ಉಪಸಮಿತಿಗಳಲ್ಲಿ ಪ್ರತಿಯೊಂದು ಸಮಿತಿಯೂ, ನಿರ್ದಿಷ್ಟ ಬುಡಕಟ್ಟು ಪ್ರದೇಶದಿಂದ ಇಬ್ಬರಿಗೆ ಮೀರದಂತೆ ಸದಸ್ಯರನ್ನು, ಸಹಸದಸ್ಯರನ್ನಾಗಿ ಜೊತೆಗೆ ಸೇರಿಸಿಕೊಳ್ಳಬಹುದು. ಅವರು ಆ ಪ್ರದೇಶದ ಕಾರ್ಯಚಟುವಟಿಕೆಗಳಲ್ಲಿ ಉಪಸಮಿತಿಗೆ ಸಹಕರಿಸುವರು.

೩. ಸಲಹಾ ಸಮಿತಿಗೆ ಅಗತ್ಯವೆನಿಸಿದಂತೆ ಕಾಲಕಾಲಕ್ಕೆ ಇತರ ಉಪಸಮಿತಿಗಳನ್ನು ನೇಮಿಸಬಹುದು.

೪. ಸಲಹಾ ಸಮಿತಿಯು, ಅಂತಿಮ ವರದಿಯನ್ನು ಮೂರು ತಿಂಗಳ ಒಳಗೆ ಸಂವಿಧಾನ ರಚನಾಸಭೆಗೆ ಒಪ್ಪಿಸಬೇಕು. ಕಾಲಕಾಲಕ್ಕೆ ಮಧ್ಯಾಂತರ ವರದಿಯನ್ನು ಸಲ್ಲಿಸಬಹುದು.

೫. ಆಕಸ್ಮಿಕವಾಗಿ ತೆರವಾದ, ಸಲಹಾ ಸಮಿತಿಯ ಸ್ಥಾನಗಳನ್ನು ಅವು ಖಾಲಿಯಾದ ಕೂಡಲೆ, ಸಂಬಂಧಿತ ಸ್ಥಾನವು ಮೊದಲು ತುಂಬಲ್ಪಟ್ಟ ರೀತಿಯಲ್ಲೆ ಭರ್ತಿಯಾಗಬೇಕು.

೬. ಸಮಿತಿಯ ನಡವಳಿಗಳ ಬಗ್ಗೆ ಅಧ್ಯಕ್ಷರು ಸ್ಥಾಯಿ ಆದೇಶಗಳನ್ನು ನೀಡಬಹುದು.

ಮಾನ್ಯರೆ, ಮೇ ೧೬ರ ಹೇಳಿಕೆಯಲ್ಲಿರುವ ಯೋಜನೆಯಲ್ಲಿ ವಿವರಿಸಿರುವಂತೆ, ಸಮಿತಿಯು ಕಾರ್ಯ ನಿರ್ವಹಿಸುವುದು ಮಾತ್ರವಲ್ಲದೆ. ಆ ಯೋಜನೆಯ ಪದವಿನ್ಯಾಸವನ್ನು ಅಳವಡಿಸುತ್ತದೆ. ಅಲ್ಪಸಂಖ್ಯಾತರು, ನಾಗರಿಕರ ಹಕ್ಕುಗಳನ್ನು ಬುಡಕಟ್ಟು ಪ್ರದೇಶಗಳು, ಹೊರಗಿಡಲ್ಪಟ್ಟ (ಹೊರಗುಳಿದ) ಭಾಗಶಃ ಹೊರಗಿಡಲ್ಪಟ್ಟ (ಹೊರಗುಳಿದ) ಪ್ರದೇಶಗಳಿಗೆ ಸಂಬಂಧಿಸಿದ ಆಡಳಿತ ಪ್ರಶ್ನೆಗಳನ್ನು ನಿರ್ವಹಿಸಲು, ಒಂದು ಸಮಿತಿಗೆ ಅವಕಾಶ ಮಾಡಿಕೊಡುತ್ತದೆ. ನಮಗೆ ಸ್ವಾತಂತ್ರ್ಯವಿದ್ದಿದ್ದರೆ, ಈ ವಿಷಯಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಸಮಿತಿಯನ್ನು ರಚಿಸುವಂತೆ, ಸೂಚಿಸುತ್ತಿದ್ದೆವು. ಪ್ರಾಯಶಃ ವಾಯವ್ಯ ಸರಹದ್ದು ಪ್ರದೇಶಕ್ಕೂ ಈಶಾನ್ಯ ಸರಹದ್ದು ಪ್ರದೇಶಕ್ಕೂ ಎರಡು ಸಮಿತಿಗಳ ರಚನೆಯನ್ನು ಬಯಸುತ್ತಿದ್ದೆವು. ಆದರೆ ಯೋಜನೆಯಲ್ಲಿ ಒಂದು ಸಮಿತಿಯ ಪ್ರಸ್ತಾಪವಿರುವುದರಿಂದ ಅದರ ನಿರ್ದೇಶನದಿಂದ ಅಥವಾ ಪ್ರಸ್ತಾವದಿಂದ ಪಲ್ಲಟಗೊಳ್ಳುವುದು ಬೇಡೆಂದು ಆಲೋಚಿಸಿದೆವು. ಪ್ರತಿಯೊಂದು ವಿಷಯಕ್ಕೂ ಒಂದೊಂದು ಸಮಿತಿ ಇದ್ದಾಗ, ಅದರ ಗಾತ್ರಕ್ಕಿಂತ, ಈಗ ಇರುವುದು ಹಿರಿದಾಗಿದೆ. ಸಲಹಾ ಸಮಿತಿ ಎಂಬ ಹೆಸರಿನಲ್ಲಿ ಈ ಸಮಿತಿಯು ನಾಲ್ಕನೆಯ ವಾಕ್ಯಖಂಡದ ೧೫ನೇ ಖಂಡಿಕೆಯ ಅಡಿಯಲ್ಲಿ ನೇಮಕವಾಗುತ್ತಿದೆ. ಅದರ ವಿವರ ಹೀಗಿದೆ:

"ಒಂದು ಪ್ರಾರಂಭಿಕ ಸಭೆ ನಡೆಯಲಿದೆ. ಅದರಲ್ಲಿ ವ್ಯವಹಾರಗಳ ಸಾಮಾನ್ಯ ಕ್ರಮವನ್ನು ಚರ್ಚಿಸಲಾಗುವುದು, ಅಧ್ಯಕ್ಷರು ಮತ್ತು ಇತರ ಅಧಿಕಾರಿಗಳು ಚುನಾಯಿಸಲ್ಪಡುವರು. ನಾಗರಿಕರು ಅಲ್ಪಸಂಖ್ಯಾತರು, ಮತ್ತು ಬುಡಕಟ್ಟು ಹಾಗೂ ಹೊರಗುಳಿದ ಪ್ರದೇಶಗಳ ಹಕ್ಕುಗಳನ್ನು ಕುರಿತ ಸಲಹಾ ಸಮಿತಿಯು ರಚಿಸಲ್ಪಡುವುದು."

ಹೀಗಾಗಿ ಇಲ್ಲಿ ನಿಯಮಿತಗೊಳಿಸಿದಂತೆ, ಸಾಧಾರಣ ಕ್ರಮದ ರೀತ್ಯಾ, ಅಧ್ಯಕ್ಷರ ಆಯ್ಕೆಯಾದ ಕೂಡಲೆ ಈ ವಿಷಯವನ್ನು ಕುರಿತು ಚರ್ಚಿಸಬೇಕೆಂದು ನಿರೀಕ್ಷಿಸಲಾಗಿತ್ತು. ಗೈರುಹಾಜರಾದ ಸದಸ್ಯರ ಬಗ್ಗೆ ಗೌರವ ಭಾವನೆಯಿಂದ, ಹಾಗೆ ಮಾಡದೆ ವಿಮುಖರಾದೆವು. ಮುಸ್ಲಿಮ್ ಲೀಗ್ ಸದಸ್ಯರು ಪ್ರವೇಶಿಸಿ ಈ ಸಭೆಯ ಚರ್ಚೆಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡಲು ಇಷ್ಟ ಪಟ್ಟಿದ್ದೆವು. ಇಲ್ಲಿಯವರೆಗೆ ಆ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳು ಸಫಲವಾಗಿಲ್ಲವೆಂಬುದು ವಿಷಾದಕರ ಸಂಗತಿ. ಹೇಳಿಕೆ ಹಾಕಿಕೊಟ್ಟಂತೆ ಕ್ರಮಿಸಲು, ಈ ವಿಷಯದ ಪರ್ಯಾಲೋಚನೆ ಅಗತ್ಯವಾಗಿತ್ತು. ನಾವು ಅದನ್ನು ಮುಂದೂಡಿದೆವು; ಅಷ್ಟೆ ಅಲ್ಲ, ಕಾಂಗ್ರೆಸ್ ಒಂದು ಹೆಜ್ಜೆ ಮುಂದಿಟ್ಟಿತು. ಹೇಳಿಕೆಯ ಕೆಲ ವಿವಾದಾತ್ಮಕ ಖಂಡಗಳ ಬಗ್ಗೆ ಆಳುವ ಅರಸರ ಮತ್ತು ಮುಸ್ಲಿಮ್ ಲೀಗ್ ಪಕ್ಷದ ವ್ಯಾಖ್ಯಾನವನ್ನು ಒಪ್ಪಿಕೊಂಡಿತು. ಜೊತೆಗೆ ಡಿಸೆಂಬರ್ ೬ರಂದು ಬ್ರಿಟಿಷ್ ಸಚಿವ ಸಂಪುಟ ಕೈಗೊಂಡ ನಿರ್ಣಯದ ಬಹ್ವಂಶವನ್ನು ಒಪ್ಪಿಕೊಂಡಿತು. ವರ್ಗೀಕರಣ ಖಂಡಗಳನ್ನು ಕುರಿತು ಮುಸ್ಲಿಮ್ ಲೀಗ್ ನೀಡಿದ ವ್ಯಾಖ್ಯಾನವನ್ನು ಕಾಂಗ್ರೆಸ್, ಜನವರಿ ೫ರಂದು ನಿಸ್ಸಂದಿಗ್ಧವಾಗಿ ಒಪ್ಪಿಕೊಂಡಿರುವುದಾಗಿ ಘೋಷಿಸಿತು. ೨೦ರಂದು ಸಭೆ ಸಮಾವೇಶಗೊಂಡಿತು. ಈ ನಡುವೆ ೧೫ ದಿನಗಳ ಅಂತರವಿತ್ತು. ಈ ವಿಷಯ ಕುರಿತ ಪರಿಶೀಲನೆಯನ್ನು ಮುಂದೂಡಿದೆವು. ಮುಸ್ಲಿಮ್ ಲೀಗ್, ಸಭೆಗೆ ತನ್ನ ಪ್ರವೇಶವನ್ನು ಪುರಸ್ಕರಿಸುವ ನಿಲುವಳಿಯನ್ನು ಅಂಗೀಕರಿಸಲಿಲ್ಲ. ಮಾತ್ರವಲ್ಲದೆ, ಮುಸ್ಲಿಮ್‌ಲೀಗ್‌ನ ಆಲೋಚನೆಯನ್ನು ಗ್ರಹಿಸಿದುದಾಗಿ ಹೇಳಿಕೊಳ್ಳುವ ವ್ಯಕ್ತಿಗಳು ನೀಡುವ ಹೇಳಿಕೆಗಳು, ಇದಕ್ಕೆ ವ್ಯತಿರಿಕ್ತವಾದುದನ್ನು ಸೂಚಿಸುತ್ತವೆ. ಈ ಸಭೆಯ ಮುಂದೂಡಿಕೆ ಬಗ್ಗೆ ಅಥವಾ ಈ ಕ್ರಮಪತ್ರದಲ್ಲಿ ಸೂಚಿಸಿರುವ ಯಾವುದೇ

ಬಾಬಿನ ಬಗ್ಗೆ ಚರ್ಚೆಯನ್ನು ಕುರಿತು, ಮುಸ್ಲಿಮ್ ಲೀಗ್‌ನ ಯಾರೊಬ್ಬ ಜವಾಬ್ದಾರಿಯುತ ಪ್ರತಿನಿಧಿಯೂ ಸಹ, ಸಭೆಯ ಪದಾಧಿಕಾರಿಗಳಿಗೆ, ಕಾರ್ಯದರ್ಶಿಗೆ ಅಥವಾ ಯಾರೊಬ್ಬರಿಗಾದರೂ ಸಲಹೆ ಮಾಡಿಲ್ಲ. ಇಂತಹ ಸನ್ನಿವೇಶಗಳಲ್ಲಿ, ನಮಗಾಗಿ ನಿಯಮಿಸಿ, ನಿರ್ಣಯಿಸಿ, ರೂಪಿಸಲ್ಪಟ್ಟ ವ್ಯವಹಾರಗಳನ್ನು ನಾವು ಮುಂದುವರೆಸದೆ ವಿಧಿಯಿಲ್ಲ. ಈಗ ಅಳವಡಿಸುತ್ತಿರುವ ಕ್ರಮ ಯಾರಿಗಾದರೂ ತೊಂದರೆ ಇರುಸುಮುರುಸು ತರುವುದಾದರೆ, ಅದರ ಹೊಣೆ ಇದುವರೆಗೆ ಮೌನ ಸಾಧಿಸಿದವರ ಮೇಲೆ ಬೀಳುತ್ತದೆ. ಈ ಸಭೆಯ ವ್ಯವಹಾರಗಳಲ್ಲಿ ಭಾಗವಹಿಸಲು ಮುಸ್ಲಿಮ್ ಲೀಗ್‌ಗೆ ಏನೆಲ್ಲ ಮಾಡಬಹುದೋ ಕಾಂಗ್ರೆಸ್ ಮತ್ತು ಗೌರವಾನ್ವಿತ ಸಭಾಸದಸ್ಯರು ಅದಕ್ಕಿಂತಲೂ ಹೆಚ್ಚಿನದನ್ನೆ ಮಾಡಿರುವುದನ್ನು ಪ್ರತಿಯೊಬ್ಬ ಜವಾಬ್ದಾರಿಯುತ, ಪಕ್ಷಪಾತರಹಿತ ವ್ಯಕ್ತಿಯೂ ಒಪ್ಪಿಕೊಳ್ಳುವುದಾಗಿ ನಾನು ನಂಬುತ್ತೇನೆ. ಆದರೆ ಅವರು ಮೊದಲಿನಂತೆಯೇ ತಮ್ಮ ನಕಾರಾತ್ಮಕ ಧೋರಣೆಗೆ ಬದ್ಧವಾಗಿದ್ದಾರೆ. ನಮ್ಮ ಮುಂದಿರುವ ಅತಿ ದೊಡ್ಡ ಪವಿತ್ರ ಕಾರ್ಯದಲ್ಲಿ, ಸಹಯೋಗ ನೀಡುವ ಬಗ್ಗೆ ಅವರು ನಿರ್ಲಕ್ಷ್ಯ ತೋರುತ್ತಲೇ ಇದ್ದಾರೆ.

ಪತ್ರಿಕೆಗಳಲ್ಲಿ ಮತ್ತು ಸ್ಥಳೀಯ ಪತ್ರಿಕೆಯೊಂದರಲ್ಲಿ ಪ್ರಕಟಗೊಂಡಿರುವ ಲೇಖನಗಳ ಹಿನ್ನೆಲೆಯಲ್ಲಿ, ಈ ಕೆಲ ಆಲೋಚನೆಗಳನ್ನು ಮುಂದಿಡುವುದು ಅಗತ್ಯವೆಂದು ನಾನು ಭಾವಿಸುತ್ತೇನೆ. ಈ ಬಾಬು ಪ್ರಾರಂಭದಲ್ಲೆ ಚರ್ಚೆಗೆ ಬರಬೇಕಿತ್ತು. ಇದೇ ಸಂದರ್ಭದಲ್ಲಿ ನಾನೊಂದು ಮೃದುವಾದ ಪದವನ್ನು ಬಳಸಬಹುದಾಗಿದ್ದರೆ, ಇದನ್ನು ಮತ್ತೂ ಮುಂದೂಡಬೇಕೆಂದು ಯಾರಾದರೂ ಸಲಹೆ ಮಾಡಿದ್ದರೆ ಅದು ಅತಾರ್ಕಿಕ. ಸದನದ ಗೌರವಾನ್ವಿತ ಸದಸ್ಯರ ಮೃದುತರ ಭಾವವನ್ನು ಮೆಚ್ಚದೆ, ಅದನ್ನೊಂದು ದೌರ್ಬಲ್ಯವೆಂದು ಅನುಪಸ್ಥಿತ ಸದಸ್ಯರು ಭಾವಿಸಿದಂತಿದೆ. ಈ ಪ್ರಶ್ನೆಗೆ ಇನ್ನೊಂದು ಆಯಾಮವೂ ಇದೆ. ನಮ್ಮ ಮುಂದಿರುವ ಗುರಿ ತಲುಪಲು ನಾವು ಸಾಧಿಸುತ್ತಿರುವ ಪ್ರಗತಿ ಮತ್ತು ಗುರಿಗೆ ಎಷ್ಟು ಹತ್ತಿರ ಕ್ರಮಿಸಿದ್ದೇವೆಂಬುದನ್ನೇ ದೇಶದ ಕೋಟ್ಯಂತರ ಜನತೆ ನೋಡುತ್ತಲೇ ಇದೆ. ಪ್ರತಿಯೊಂದು ದಿನ ತಡವಾಗುತ್ತಿದ್ದಂತೆ, ಅವರಿಗೆ ನಿರಾಶೆ ತರುತ್ತಿದೆ. ಇನ್ನೊಂದೆಡೆ ಈ ಸಭೆ ಭಗ್ನಮನೋರಥವಾಗಿ ವಿಸರ್ಜಿಸಲ್ಪಡಬಹುದೆಂಬ ಅಪಪ್ರಚಾರ ರಭಸದಿಂದ ನಡೆಯುತ್ತಿದೆ. ಸಭೆಯ ಎಲ್ಲ ಪ್ರಯತ್ನಗಳು, ಪರಿಶ್ರಮ, ವ್ಯವಹಾರಗಳು ಕೈಗೂಡದೆ ವಿಫಲವಾಗುವುವೆಂಬ ಪ್ರಚಾರ ನಡೆಯುತ್ತಿದೆ. ಈ ಸಂದರ್ಭದಲ್ಲಿ, ಸಭೆಯ ಯಶಸ್ಸಿನಲ್ಲಿ ಯಾರಿಗಾದರು ಆಸಕ್ತಿ ಇದ್ದಲ್ಲಿ ಸದನದ ಸದಸ್ಯರ ಹೆಗಲೇರಿದ ಹೊಣೆಗಾರಿಕೆಯನ್ನು ಮನಗಾಣಬೇಕು. ಸದನದ ವ್ಯವಹಾರಗಳನ್ನು ಅನಿಶ್ಚಿತವಾಗಿ ಮುಂದೂಡುವುದು ಅದರಿಂದ ಸಾಧ್ಯವಾಗದು.

ಆ ಭರವಸೆಯನ್ನು ನೆಚ್ಚಿ, ಮುಂದೂಡುತ್ತ ಹೋಗಿ ಕೊನೆಯ ಕ್ಷಣದಲ್ಲಿ ಅದಕ್ಕೆ ಉಸಿರುಗಟ್ಟಲು ಅವಕಾಶ ನೀಡಬಾರದು. ಆದುದರಿಂದ, ನಾನು ಪ್ರಸ್ತಾಪಿಸಿದ ನಿಲುವಳಿಯನ್ನು ಗೌರವಾನ್ವಿತ ಸದಸ್ಯರು ಸರ್ವಾನುಮತದಿಂದ ಅಂಗೀಕರಿಸುವರೆಂದು ನಂಬುತ್ತೇನೆ.

ಮೂಲಭೂತ ಹಕ್ಕುಗಳು, ಅಲ್ಪಸಂಖ್ಯಾತರ ಹಕ್ಕುಗಳು ಬುಡಕಟ್ಟು ಪ್ರದೇಶಗಳು ಮತ್ತು ಹಿಂದುಳಿದ ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದಂತೆ ನಿರ್ಧಾರಣಾ ಉಪಬಂಧಗಳನ್ನು ರೂಪಿಸಲು ಅವಕಾಶ ಕಲ್ಪಿಸುವ ಬಗ್ಗೆ ಅವರಿಗೆ ತಿಳಿದಿದೆ. ಸಮಿತಿಯ ಮುಂದಿರುವ ಕರ್ತವ್ಯಗಳನ್ನು ಮಾನ್ಯ ಮಾಡಿ, ಪ್ರತಿನಿಧಿಗಳ ಸಂಖ್ಯೆಯನ್ನು ಗೊತ್ತು ಮಾಡಿದೆ. ನಮ್ಮದು ಬೃಹತ್ ರಾಷ್ಟ್ರ. ಇಲ್ಲಿಯ ನಿವಾಸಿಗಳ ಸಂಖ್ಯೆ ४೦೦ ದಶಲಕ್ಷ. ಈ ಸಂದರ್ಭದಲ್ಲಿ, ಯಾರೊಬ್ಬರೆ ಆಗಲಿ, ಇಂತಹ ಲಕ್ಷಣವುಳ್ಳ ಸಮಿತಿಯ ಸಂಖ್ಯಾಬಲವನ್ನು ಕಡಿತಗೊಳಿಸಲು ಎಷ್ಟೇ ಪ್ರಯತ್ನಿಸಿದರೂ ಕನಿಷ್ಠ ಮಿತಿಯಿಂದ ಕೆಳಗೆ ಹೋಗಲಾರದು. ಎಲ್ಲ ವರ್ಗಗಳಿಗೂ, ಎಲ್ಲ ಆಸಕ್ತಿಗಳಿಗೂ ಸ್ಪಂದಿಸಿ ನ್ಯಾಯವೊದಗಿಸುವ ಪ್ರಯತ್ನ ಮಾಡಿದ್ದೇವೆ. ಕಾರ್ಯಸಾಧ್ಯವಾಗುವಂತೆ, ಯುಕ್ತ ರೀತಿಯಲ್ಲಿ ಸಂಖ್ಯಾಬಲವನ್ನು ಮಿತಗೊಳಿಸಿದ್ದೇವೆ. ಇದರಲ್ಲಿ ೭೮ ಸದಸ್ಯರಿಗೆ ಭಾಗವಹಿಸುವ ಅವಕಾಶವಿದೆ. ಮೊದಲು ಇದರ ಸಂಖ್ಯೆ ೬೮ ಇತ್ತು. ನಾಗರಿಕರ ಹಕ್ಕು ರಕ್ಷಣೆಗೆ ಅವಕಾಶ ಕಲ್ಪಿಸಿಕೊಡುವುದು ಗೌರವಾನ್ವಿತ ಸದಸ್ಯರಿಗೆ

ತಿಳಿದಿದೆ. ಆ ಉದ್ದೇಶಕ್ಕಾಗಿ, ಸರ್ವಸದಸ್ಯರ ಸಭೆಯಿಂದ ಪ್ರಾತಿನಿಧ್ಯವನ್ನು ನಿರೀಕ್ಷಿಸುತ್ತೇವೆ. ಮೂಲಭೂತ ಹಕ್ಕುಗಳು ಎಲ್ಲರ ಹಿತಕ್ಕೆ ಸಂಬಂಧಪಟ್ಟಿವೆ. ಹಕ್ಕುಗಳ ವಿಷಯ ಬಂದಾಗ, ಅಲ್ಪಸಂಖ್ಯಾತರು, ಬಹುಸಂಖ್ಯಾತರೆಂಬ ಪ್ರಶ್ನೆ ಏಳುವುದಿಲ್ಲ. ನಾಗರಿಕರ ಹಕ್ಕುಗಳನ್ನು ಕಾಯ್ದುಕೊಳ್ಳಲು ಅಂತಹ ಸದಸ್ಯರಿರುತ್ತಾರೆಂದು, ಸರ್ಕಾರಿ ಕಾರ್ಯದರ್ಶಿ ಮೇಲ್ಮನೆಯಲ್ಲಿ (ಹೌಸ್ ಆಫ್ ಲಾರ್ಡ್ಸ್) ಮಾಡಿದ ಭಾಷಣದಲ್ಲಿ ಸ್ಪಷ್ಟ ಪಡಿಸಿದ್ದಾರೆ. ನಂತರ ಅಲ್ಪಸಂಖ್ಯಾತರ ಹಕ್ಕುಗಳನ್ನು ಕಾಯ್ದುಕೊಳ್ಳಲು, ಸದಸ್ಯರನ್ನು ಚುನಾಯಿಸಬೇಕು. ನಮ್ಮದು ಸಾಂಸ್ಕೃತಿಕ ಸಮೃದ್ಧಿಯುಳ್ಳ ರಾಷ್ಟ್ರ. ಭಾರತ ಎಂಬ ಸಮಗ್ರ ರಾಷ್ಟ್ರ ನಿರ್ಮಾಣಕ್ಕೆ ಅಗತ್ಯವಿರುವ ಹಲವಾರು ಪೂರಕ ಸಮೂಹಗಳು ಪರಸ್ಪರ ಸ್ಪಂದಿಸುವ ಸುಯೋಗ ನಮ್ಮದಾಗಿದೆ. ಹಾಗಾಗಿ, ಪ್ರಾರಂಭದಲ್ಲಿ ೫೨ ಸದಸ್ಯರಿಗೆ, ಈ ನಿಲುವಳಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಆದರೆ ಮುಂದೆ, ಶ್ರೀ ಮುನ್ಷಿಯವರು ಮಂಡಿಸಲಿರುವ ತಿದ್ದುಪಡಿಯಂತೆ, ಸದಸ್ಯರ ಸಂಖ್ಯೆ ೫೨ಕ್ಕೆ ಬದಲು ೫೦ಕ್ಕೆ ಇಳಿಯಲಿದೆ. ಇವರಲ್ಲಿ ಸಾಮಾನ್ಯ ವರ್ಗದಿಂದ ಕೇವಲ ಹನ್ನೆರಡೇ ಪ್ರತಿನಿಧಿಗಳು ಇರುತ್ತಾರೆ. ಮಿಕ್ಕವರು ಅಲ್ಪಸಂಖ್ಯಾತರು, ಬುಡಕಟ್ಟು ಮತ್ತು ಹೊರಗುಳಿದ ಪ್ರದೇಶಗಳನ್ನು ಪ್ರತಿನಿಧಿಸುತ್ತಾರೆ. ಅಲ್ಪಸಂಖ್ಯಾತರ ಪ್ರಾತಿನಿಧ್ಯ ಕೆಳಕಂಡಂತೆ ಇದೆ.

ಬಂಗಾಳ, ಪಂಜಾಬ್, ವಾಯವ್ಯ ಪ್ರಾಂತ್ಯ ಮತ್ತು ಬಲೂಚಿಸ್ತಾನ್ ಪ್ರಾಂತ್ಯಗಳ ಹಿಂದೂಗಳು............ ಪ್ರತಿನಿಧಿಗಳನ್ನು ಒಳಗೊಂಡಿರುತ್ತಾರೆ. ಅಂತೆಯೇ ಉತ್ತರ ಪ್ರದೇಶ, ಬಿಹಾರ ಕೇಂದ್ರೀಯ ಪ್ರಾಂತ್ಯ, ಮದರಾಸು, ಬಾಂಬೆ, ಅಸ್ಸಾಂ ಮತ್ತು ಒರಿಸ್ಸದ ೭ ಪ್ರಾಂತ್ಯಗಳ ಮುಸ್ಲಿಮರು ........ ೭ ಪ್ರತಿನಿಧಿಗಳನ್ನು ಹೊಂದಿರುತ್ತಾರೆ.

ತಳಸಮುದಾಯದವರು ಅಥವಾ ಪರಿಶಿಷ್ಟ ಜಾತಿಯವರಿಗೆ ................ ೭ ಪ್ರತಿನಿಧಿಗಳು ಸಿಕ್ಖರು ............ ೬ ಪ್ರತಿನಿಧಿಗಳನ್ನು ಹೊಂದಿರುತ್ತಾರೆ. ಭಾರತೀಯ ಕ್ರೈಸ್ತರು .......... ೪ ಪ್ರತಿನಿಧಿಗಳನ್ನು ಹೊಂದಿರುತ್ತಾರೆ. ಪಾರಸಿಕರು......................... ೩ ಪ್ರತಿನಿಧಿಗಳನ್ನು ಹೊಂದಿರುತ್ತಾರೆ. ಬುಡಕಟ್ಟು ಪ್ರದೇಶಗಳು ಮತ್ತು ಹೊರಗುಳಿದ ಪ್ರದೇಶಗಳು.................... ೧೩ ಪ್ರತಿನಿಧಿಗಳನ್ನು ಹೊಂದಿರುತ್ತವೆ.

ಇದರೊಡನೆ ಅಧ್ಯಕ್ಷರು ೧೦ ಸದಸ್ಯರು ನಾಮನಿರ್ದೇಶನ ಮಾಡಲಿದ್ದಾರೆ. ನಿಲುವಳಿಯಲ್ಲಿರುವ ಸಂಖ್ಯೆ ಇನ್ನೂ ಹೆಚ್ಚಿದೆ. ಶ್ರೀ ಮುನ್ಷಿಯವರು ಮಂಡಿಸಲಿರುವ ತಿದ್ದುಪಡಿಯಂತೆ ಈಗ ನಾಮನಿರ್ದೇಶಿತ ವಾಗಲಿರುವ ಸದಸ್ಯರಲ್ಲಿ ಐವರನ್ನು ಬುಡಕಟ್ಟು ಪ್ರದೇಶಗಳಿಗೂ, ೭ ಸದಸ್ಯರು–ಮುಸ್ಲಿಮರು–ಅಲ್ಪಸಂಖ್ಯಾತರಿರುವ ಪ್ರಾಂತ್ಯಗಳಿಗೂ ಉಳಿದ ೧೦ ಅಧ್ಯಕ್ಷರ ಆಯ್ಕೆಗೂ ಬಿಡತಕ್ಕವು. ಈ ಸಮಿತಿಯ ಯಶಸ್ವಿ ಕಾರ್ಯನಿರ್ವಹಣೆಗೆ ನೆರವಾಗುವಂತೆ ಮತ್ತು ಯುಕ್ತ ಹಾಗೂ ಸಮರ್ಪಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಮರ್ಥ ಕೊಡುಗೆ ನೀಡಬಲ್ಲ ಸದಸ್ಯರನ್ನು ಅಧ್ಯಕ್ಷರು ನಾಮನಿರ್ದೇಶನ ಮಾಡುವರು. ಹೀಗೆ ಸಮಿತಿಯ ರಚನೆಯಾಗುತ್ತದೆ. ಯಾವುದೇ ಸಂದರ್ಭದಲ್ಲೂ, ಸಮಿತಿಯ ಸಂಖ್ಯೆ ಎಷ್ಟೇ ಇರಲಿ, ಅಲ್ಪಸಂಖ್ಯಾತರು, ಹೊರಗುಳಿದ ಪ್ರದೇಶಗಳು ಮತ್ತು ಬುಡಕಟ್ಟು ಪ್ರದೇಶಗಳ ಪ್ರತಿನಿಧಿಗಳ ಧ್ವನಿಗೆ ಪ್ರಾಮುಖ್ಯ ದೊರೆಯುತ್ತದೆ. ಅವರು ತಮ್ಮ ನಿರ್ಧಾರಗಳನ್ನು ದಾಖಲು ಮಾಡುವ ಅವಕಾಶ ಅವರಿಗೆ ಲಭಿಸುತ್ತದೆ. ಯಾವ ವರ್ಗದಲ್ಲೂ ಬಹುಸಂಖ್ಯಾತರು ಇರುವುದಿಲ್ಲ. ಈ ಸಮಿತಿಯು, ಅಲ್ಪಸಂಖ್ಯಾತರ ಮತ್ತು ಹಿಂದುಳಿದ ಪ್ರದೇಶಗಳ ಅಹವಾಲುಗಳಿಗೆ ಸಂಪೂರ್ಣ ಸ್ಪಂದಿಸುತ್ತದೆ. ಅವರ ಸ್ಥಾನಮಾನಗಳನ್ನು ನೆಲೆಗೊಳಿಸಲು, ಅವರ ಹಕ್ಕುಗಳನ್ನು ಭದ್ರಪಡಿಸಲು ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವುದೆಂದು ನಾನು ನಂಬಿದ್ದೇನೆ. ಈ ನಿಲುವಳಿಯ ಎರಡನೇ ಖಂಡಿಕೆ, ವಾಯವ್ಯ ಬುಡಕಟ್ಟು ಪ್ರದೇಶಗಳ ಆಡಳಿತ ನಿರ್ವಹಣೆಗೆ ಅಂತೆಯೇ ಈಶಾನ್ಯ ಬುಡಕಟ್ಟು ಪ್ರದೇಶಗಳು, ಹೊರಗುಳಿದ ಮತ್ತು ಭಾಗಶಃ ಹೊರಗುಳಿದ ಪ್ರದೇಶಗಳ ಆಡಳಿತ ನಿರ್ವಹಣೆಗೆ, ಉಪಸಮಿತಿಗಳು ರಚನೆಯಾಗಬೇಕಾದ ಅಗತ್ಯವನ್ನು ಪ್ರಸ್ತಾವಿಸುತ್ತದೆ. ಸಂಬಂಧಿಸಿದ ಪ್ರದೇಶಗಳನ್ನು ಹತ್ತಿರದಿಂದ ಅಧ್ಯಯನ ಮಾಡಲು ಈ ಸಣ್ಣ ಉಪಸಮಿತಿಗಳನ್ನು ರಚಿಸುವುದು ಅಗತ್ಯ. ಸಮಸ್ಯೆಗಳನ್ನು ಅರ್ಹ ಸದಸ್ಯರು ಗಾಢವಾಗಿ ಅಧ್ಯಯನ ಮಾಡಿ, ಸ್ಥಳೀಯ ಅಭಿಪ್ರಾಯಗಳನ್ನು

ಪಡೆಯದೆ, ಆಯಾ ನಿರ್ದಿಷ್ಟ ಪ್ರದೇಶಗಳ ಅಗತ್ಯಗಳನ್ನು ಪೂರೈಸುವಂತಹ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದು. ಉಪಸಮಿತಿಗಳ ರಚನೆಯಲ್ಲದೆ ಒಂದು ನಿರ್ದಿಷ್ಟ ರಾಜ್ಯ ಕ್ಷೇತ್ರದಲ್ಲಿ, ತತ್ಕಾಲದಲ್ಲಿರುವ ಕೆಲ ಸಮಸ್ಯೆಗಳನ್ನು ಪರಿಶೀಲಿಸುವ ಅಗತ್ಯವಿರುವ ಇಬ್ಬರು ಸಹಸದಸ್ಯರ ನೆರವು ಪಡೆಯಲು ಈ ಉಪಸಮಿತಿಗಳಿಗೆ ನಿಲುವಳಿಯು ಅಧಿಕಾರ ವಹಿಸಿಕೊಡುತ್ತದೆ.

ಸಲಹಾ ಸಮಿತಿಯ ವರದಿ ಸಲ್ಲಿಸಲು ಕಾಲಮಿತಿಯನ್ನು ನಾಲ್ಕನೇ ಖಂಡ ನಿಯಮಿಸುತ್ತದೆ. ಈ ವರದಿ ೩ ತಿಂಗಳಲ್ಲಿ ಸಿದ್ಧವಾಗಬೇಕು. ಗೌರವಾನ್ವಿತ ಸದಸ್ಯರು, ಹೇಳಿಕೆಯ ೨೦ನೇ ಖಂಡಿಕೆಯನ್ನು ಅವಲೋಕಿಸಿದರೆ, ಈ ಪದಗಳು ಅವರ ಗಮನಕ್ಕೆ ಬರುತ್ತವೆ.

"ನಾಗರಿಕರ, ಅಲ್ಪಸಂಖ್ಯಾತರ, ಬುಡಕಟ್ಟು ಪ್ರದೇಶಗಳ ಮತ್ತು ಹೊರಗುಳಿದ ಪ್ರದೇಶಗಳ ಹಕ್ಕುಗಳಿಗೆ ಸಂಬಂಧಿಸಿದ ಸಲಹಾ ಸಮಿತಿಯಲ್ಲಿ ಬಾಧಿತ ಹಿತಾಸಕ್ತಿಗಳಿಗೆ ಸೂಕ್ತ ಪ್ರಾತಿನಿಧ್ಯ ಇರುತ್ತದೆ. ಆ ಪ್ರತಿನಿಧಿಗಳ ಪ್ರಕಾರ್ಯವೆಂದರೆ, ಮೂಲಹಕ್ಕುಗಳ ಪಟ್ಟಿ ಅಲ್ಪಸಂಖ್ಯಾತರ ರಕ್ಷಣಾ ಕಂಡಗಳು, ಬುಡಕಟ್ಟು ಮತ್ತು ಹೊರಗುಳಿದ ಪ್ರದೇಶಗಳ ಆಡಳಿತ ಯೋಜನೆ ಕುರಿತ ವರದಿಯನ್ನು ಕೇಂದ್ರ ರಚನಾಸಭೆಗೆ ಸಲ್ಲಿಸುವುದು ಮತ್ತು ಈ ಹಕ್ಕುಗಳನ್ನು ಪ್ರಾಂತೀಯ ಮತ್ತು ಕೇಂದ್ರ ಸಂವಿಧಾನಗಳಲ್ಲಿ (Central Union Constitution) ನಿಗಮಿತಗೊಳಿಸುವ ಬಗ್ಗೆ ಸಲಹೆ ನೀಡುವುದು".

ಸಲಹಾ ಸಮಿತಿಯ ವ್ಯವಹಾರಗಳು ತ್ವರಿತಗತಿಯಲ್ಲಿ ಸಾಗುವುದು ಅಗತ್ಯ. ಇದರಿಂದ, ಸಮಿತಿಯ ಶಿಫಾರಸುಗಳು ವಿಳಂಬವಿಲ್ಲದೆ, ಅನಗತ್ಯ ಕಾಲವ್ಯಯವಾಗದೆ ಸದನಕ್ಕೆ ತಲುಪಲು ಸಾಧ್ಯವಾಗುತ್ತದೆ. ಸಲಹಾ ಸಮಿತಿಯ ವ್ಯವಹಾರಗಳ ಫಲಶ್ರುತಿಯಾಗಿ ಕೇಂದ್ರೀಯ ಸಭೆಯ ಮುಂದೆ ಪ್ರಸ್ತಾವಗಳು ಬರುವವರೆಗೂ/ ಬಂದ ಹೊರತು, ಯಾವುದೇ ವರ್ಗ ಯಾ ಸಮೂಹವಾಗಲಿ ಅಥವಾ ಕೇಂದ್ರ ಸಭೆಯಾಗಲಿ (Central Union Assembly) ಯಾವ ಸಂವಿಧಾನವನ್ನೂ ರಚಿಸಲಾಗದು. ಕೇಂದ್ರ ಸಭೆ (Central Union Assembly) ವರದಿಯನ್ನು ಪರಿಶೀಲಿಸಬೇಕು. ಇದರಿಂದ ಪ್ರಾಂತೀಯ ಮತ್ತು ಸಮೂಹ ಸಂವಿಧಾನಗಳಿದ್ದರೆ ಅವುಗಳ ಮತ್ತು ಕೇಂದ್ರೀಯ ಸಂವಿಧಾನರಚನೆ ತ್ವರಿತವಾಗಿ ಪ್ರಾರಂಭವಾಗುವುದು ಸಾಧ್ಯವಾಗುತ್ತದೆ. ಆದುದರಿಂದ ಈ ಸಮಿತಿಯ ವರದಿಯು, ಅದಷ್ಟೂ ಬೇಗನೆ ತಲುಪಿದರೆ ಒಳಿತು. ಆ ಕಾರಣದಿಂದಲೆ ಈ ಉಪಬಂಧದ ರಚನೆಯಾಗಿದೆ.

ಪರಿಶೀಲನಾರ್ಹ ನಿಲುವಳಿಯ ವಾಸ್ತವಿಕ ನಿರೂಪಣೆ, ವಿಶ್ಲೇಷಣೆ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ವಿಶದೀಕರಣಕ್ಕೆ ನಾನು ಪ್ರಯತ್ನಿಸಿದ್ದೇನೆ. ಸಾಮಾನ್ಯ ಸ್ವರೂಪದ, ನನ್ನ ಕೆಲವು ಅನಿಸಿಕೆಗಳನ್ನು ಗೌರವಾನ್ವಿತ ಸದಸ್ಯರು ಮತ್ತು ಅಧ್ಯಕ್ಷರ ಅನುಮತಿ ಪಡೆದು ನಿವೇದಿಸಲು ಇಷ್ಟ ಪಡುತ್ತೇನೆ. ಸಂವಿಧಾನ ಕುರಿತ ಚರ್ಚೆ ಬಂದಾಗೆಲ್ಲ, ಎಲ್ಲೆಲ್ಲೂ ಅಲ್ಪಸಂಖ್ಯಾತರ ಸಮಸ್ಯೆಯೇ ಎದ್ದು ತೋರುತ್ತದೆ. ಇದೊಂದು ಬಂಡೆಗಲ್ಲಿನಂತೆ; ಅನೇಕ ಸಂವಿಧಾನಗಳು ಇದರ ಮೇಲೆ ಕುಸಿದಿವೆ. ನಮ್ಮ ಚರ್ಚೆಗಳ ಫಲವಾಗಿ ಅಸ್ತಿತ್ವಕ್ಕೆ ಬರುವ ಭಾರತ ಸರ್ಕಾರದ ಆರೋಗ್ಯ, ಶಕ್ತಿ ಮತ್ತು ವೀರ್ಯವತ್ತತೆಯೆಲ್ಲವೂ, ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಸಮರ್ಪಕ ಪರಿಹಾರ ಕ್ರಮದಿಂದ ದೊರೆಯುವುದು ಸಾಧ್ಯವಾಗುತ್ತದೆ. ಅಲ್ಪಸಂಖ್ಯಾತರ ಪ್ರಶ್ನೆಯನ್ನು ಉತ್ಪ್ರೇಕ್ಷಿಸುವುದು ಸಾಧ್ಯವಿಲ್ಲ. ಅದನ್ನು ಭೇದಭಾವ ಹುಟ್ಟುಹಾಕಲಷ್ಟೆ ಬಳಸಲಾಗುತ್ತಿದೆ. ಭಾರತ ದೇಶದ ವಿಭಿನ್ನ ವರ್ಗಗಳ ನಡುವೆ. ಬಿರುಕು ತಂದಿಡಲು ಅದರ ದುರುಪಯೋಗವಾಗುತ್ತಿದೆ. ಅದರ ಮೇಲೆ ಸಾಮ್ರಾಜ್ಯಶಾಹಿ ಆಡಳಿತ ಮೆರೆಯುತ್ತಿದೆ. ಅಂತಹ ಪ್ರವೃತ್ತಿಯನ್ನು ಕೆರಳಿಸುವಲ್ಲಿ ಆಸಕ್ತಿ ಹೊಂದಿದೆ. ಇದುವರೆಗೆ ಅಲ್ಪಸಂಖ್ಯಾತರು ಪ್ರಚೋದನೆಗೆ ಒಳಗಾಗಿದ್ದಾರೆ. ಸಾಮರಸ್ಯ ಮತ್ತು ಐಕಮತ್ಯವನ್ನು ಬಾಧಿಸುವ ರೀತಿಯಲ್ಲಿ ಪ್ರಭಾವಿತರಾಗಿದ್ದಾರೆ. ಈಗ ಹೊಸ ಅಧ್ಯಾಯವೊಂದರ ಪ್ರಾರಂಭ ಅವಶ್ಯಕ. ನಾವೆಲ್ಲರೂ ನಮ್ಮೆಲ್ಲರ ಜವಾಬ್ದಾರಿಯನ್ನು ಅರಿಯಬೇಕು. ಅಲ್ಪಸಂಖ್ಯಾತರು ಪೂರ್ಣ ತೃಪ್ತರಾದ ಹೊರತು, ನಾವು ಮುನ್ನಡೆಯಲಾರೆವು. ನಾವು ಶಾಂತಿಯನ್ನು

ಅಬಾಧಿತವಾಗಿ ನೆಲೆಗೊಳಿಸಲಾಗದು. ಆದುದರಿಂದ ಏನೆಲ್ಲ ಸಾಧ್ಯವೋ ಅದನ್ನು ಮಾಡಬೇಕು. ಈ ಉದ್ದೇಶಕ್ಕಾಗಿಯೇ ಒಂದು ಸಮಿತಿಯ ರಚನೆಯನ್ನು ನಾವು ಪ್ರಸ್ತಾವಿಸಿರಬೇಕಿತ್ತು. ಮೇ ೧೬ರ ಹೇಳಿಕೆಯಲ್ಲಿ ಅದರ ಉಲ್ಲೇಖವಿಲ್ಲದಾಗ್ಯೂ, ಅದರ ರಚನೆಯ ಅಗತ್ಯವಿತ್ತು. ಈ ಸದನದಲ್ಲಿ, ಗೌರವಾನ್ವಿತ ಸದಸ್ಯರು ಸರ್ವಾನುಮತದಿಂದ ಅಂಗೀಕರಿಸಿದ ನಿಲುವಳಿಯ ಧ್ಯೇಯೋದ್ದೇಶಗಳನ್ನು ಪರಾಂಬರಿಸಿದರೆ ೫ ಮತ್ತು ೬ನೇ ಖಂಡಗಳಲ್ಲಿ ಕೆಳಕಂಡ ಪದಗಳನ್ನು ಕಾಣಬಹುದು.

"ಈ ನಿಲುವಳಿಯಲ್ಲಿ ಭಾರತದ ಎಲ್ಲ ಜನರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ಸಮಾನ ಸ್ಥಾನಮಾನಗಳು ಸಮಾನಾವಕಾಶ ಎಲ್ಲವನ್ನು ಕಾನೂನು ಸಮ್ಮತವಾಗಿ ಒದಗಿಸುವ ಖಾತರಿ ನೀಡಲಾಗಿದೆ. ಅಂತೆಯೇ, ಕಾನೂನು ಮತ್ತು ಸಾರ್ವಜನಿಕ ನೈತಿಕತೆಗೆ ಬದ್ಧವಾಗಿ ಆಲೋಚನಾ ಸ್ವಾತಂತ್ರ್ಯ ಅಭಿವ್ಯಕ್ತಿ ಸ್ವಾತಂತ್ರ್ಯ, ಮತೀಯ ಶ್ರದ್ಧೆ, ಮತಾವಲಂಬನೆ, ಪೂಜೆ, ವೃತ್ತಿ, ಸಂಘಟನೆ ಮತ್ತು ಕ್ರಿಯಾ ಸ್ವಾತಂತ್ರ್ಯಕ್ಕೂ ಖಾತರಿ ನೀಡಲಾಗಿದೆ; ಮತ್ತು ಇದರಲ್ಲಿ ಅಲ್ಪಸಂಖ್ಯಾತರು, ಹಿಂದುಳಿದವರು, ಬುಡಕಟ್ಟು ಪ್ರದೇಶಗಳು, ತಳಸಮುದಾಯದವರು ಮತ್ತು ಇತರ ಹಿಂದುಳಿದ ವರ್ಗಗಳ ಹಿತರಕ್ಷಣೆ ಕಾಯ್ದುಕೊಳ್ಳುವ ಖಾತರಿ ನೀಡಲಾಗಿದೆ."

ಆದುದರಿಂದ ನಿಲುವಳಿಯ ಮೂಲತತ್ತ್ವಗಳನ್ನು, ಸದನವು ಈಗಾಗಲೆ ಅಂಗೀಕರಿಸಿದೆ ಮತ್ತು ಸರ್ವಾನುಮತದಿಂದ ನಿಲುವಳಿಯ ಅಂಗೀಕಾರವಾಗಿದೆ. ಇದು ಅಲ್ಪಸಂಖ್ಯಾತರಿಗೆ ಆಪ್ತವಾಗಿರಬೇಕು. ಹಕ್ಕುಗಳ ಸಾರಾಂಶ ಒಪ್ಪಿಗೆಯಾಗಿದೆ, ಅದು ಸ್ವ–ಇಚ್ಛೆಯಿಂದ ನೀಡಿದ ಒಪ್ಪಿಗೆ. ಈ ಸದನದ ಸರ್ವಾನುಮತ ಪಡೆದಿದೆ. ಅಲ್ಪಸಂಖ್ಯಾತರಿಗೆ ಸಂಪೂರ್ಣ ತೃಪ್ತಿ ನೀಡುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ನಂಬುತ್ತೇನೆ. ಗೌರವಾನ್ವಿತ ಸದಸ್ಯರಿಗೂ ಇದು ತಿಳಿದಿದೆ ಎಂದು ಭಾವಿಸುತ್ತೇನೆ; ಅಥವಾ ಅವರಿಗೆ ತಿಳಿದಿಲ್ಲವಾದರೆ, ಈಗ ನಾನು ತಿಳಿಸಲಿರುವುದು ಒಂದು ರಹಸ್ಯವನ್ನು ಬಹಿರಂಗಗೊಳಿಸದಂತಾಗುವುದಿಲ್ಲ. ಈ ಸದನದ ಬಲ ನಿಂತಿರುವುದು ಇಲ್ಲಿಯ ಪ್ರತಿಯೊಬ್ಬ ಅಲ್ಪಸಂಖ್ಯಾತರ ಆಶೋತ್ತರಗಳ ಮೇಲೆ. ಇದು ಅವರ ಸಂಪೂರ್ಣ ಸಮ್ಮತವನ್ನು ಪ್ರತಿನಿಧಿಸುತ್ತದೆ.

ತೃಪ್ತಿ ಸಮಾಧಾನದ ಮುಂದೆ, ಮಿಕ್ಕೆಲ್ಲ ಅಂಶಗಳನ್ನೂ ನಾವು ಗೌಣಗೊಳಿಸಿದ್ದೇವೆ. ಸಂವಿಧಾನದ ರಚನೆ ಒಂದು ಕಾರ್ಯಸಾಧ್ಯ ಪ್ರಯೋಗ, ನಾವು ಕೇವಲ ಸೈದ್ಧಾಂತಿಕ ಭ್ರಮೆಯಲ್ಲಿ ಕಳೆದು ಹೋಗಬಾರದು. ಸಮಸ್ಯೆಗಳನ್ನು ವಾಸ್ತವಿಕ ದೃಷ್ಟಿಕೋನದಿಂದ ಪರಿಶೀಲಿಸಬೇಕು; ನಾವು ತೆಗೆದುಕೊಳ್ಳುವ ನಿರ್ಧಾರ ಕೇವಲ ನ್ಯಾಯಸಮ್ಮತವಾಗಿರುವುದಲ್ಲದೆ, ಬಾಧಿತರೂ ಅದು ನ್ಯಾಯಸಮ್ಮತವಾಗಿದೆ ಎಂದು ಭಾವಿಸಬೇಕು. ಈ ಸಮಿತಿಯಲ್ಲಿ ವಿಭಿನ್ನ ಅಲ್ಪಸಂಖ್ಯಾತರ ಆಶೋತ್ತರಗಳಿಗೆ ಮಾನ್ಯತೆ ನೀಡಲಾಗುವುದೆಂದೂ, ಕೈಗೊಂಡ ನಿರ್ಧಾರಗಳೆಲ್ಲವೂ, ಈ ವರ್ಗಕ್ಕೆ ಸಂಪೂರ್ಣ ತೃಪ್ತಿ ತರುವುದೆಂದೂ ನಾವು ನಂಬುತ್ತೇವೆ.

ಈ ಸಂದರ್ಭದಲ್ಲಿ, ಇತ್ತೀಚಿನ ವರುಷಗಳಲ್ಲಿ ನಡೆದಿರುವ ಐತಿಹಾಸಿಕ ಬೆಳವಣಿಗೆಗಳನ್ನು ಅಲ್ಪಸಂಖ್ಯಾತರಿಗೆ ನೆನಪು ಮಾಡಬೇಕೆಂದು ಇಚ್ಛಿಸುತ್ತೇನೆ. ಗೌರವಾನ್ವಿತ ಸದಸ್ಯರು ತಿಳಿದಿರುವಂತೆ, ಮೊದಲ ಜಾಗತಿಕ ಯುದ್ಧ ಕೊನೆಗೊಳ್ಳುತ್ತಿದ್ದಂತೆ ಹಲವಾರು ರಾಜ್ಯಗಳು ಸ್ಥಾಪನೆಯಾದವು; ವಿಶೇಷತಃ ಪೌರಸ್ತ್ಯ ಯೂರೋಪಿನಲ್ಲಿ. ಈ ರಾಜ್ಯಗಳಲ್ಲಿ, ಅಲ್ಪಸಂಖ್ಯಾತರ ರಕ್ಷಣೆಗಾಗಿ ಸೌಲಭ್ಯಗಳನ್ನು ಆಯಾ ಸಂವಿಧಾನಗಳಲ್ಲಿ ನಿಗಮನಗೊಳಿಸಲಾಯಿತು. ಉದಾ: ಜೆಕೋಸ್ಲಾವಾಕಿಯಾ, ಆಸ್ಟ್ರಿಯಾ, ಬಲ್ಗೇರಿಯಾ, ಪೋಲೆಂಡ್ ಮತ್ತಿತರ ರಾಜ್ಯಗಳು. ಈ ಉಪಬಂಧಗಳು ಸಂವಿಧಾನಗಳಲ್ಲಿ ನಿಗಮಿತಗೊಂಡದ್ದು ಮಾತ್ರವಲ್ಲ, ಸಂಘಟಿತ ಶಕ್ತಿಗಳ ಮತ್ತು ಮಿತ್ರಶಕ್ತಿಗಳೆಂದು ಕರೆಯಿಸಿಕೊಂಡು ರಾಜ್ಯಗಳ ಮತ್ತು ನೂತನ ರಾಜ್ಯಗಳಾಗಿ ರೂಪುಗೊಂಡವುಗಳ ನಡುವೆ ಪ್ರಾಮಾಣಿಕವಾದ ನಿಬಂಧನೆಗಳಾಗಿ ಪರಿಣಮಿಸಿದ ಒಂದು ಒಡಂಬಡಿಕೆಯಾಯಿತು. ವಿಭಿನ್ನ ರಾಜ್ಯಗಳ ಅಲ್ಪಸಂಖ್ಯಾತರಿಗೆ ಮಿತ್ರ ಮತ್ತು ಸಂಘಟಿತ ಶಕ್ತಿಗಳು ಖಾತರಿ ನೀಡಿದವು. ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ

ಘೋಷಣೆಗಳನ್ನು ಮಾಡಲಾಯಿತು. ರಾಷ್ಟ್ರಗಳ ಸಂಘ ಘೋಷಿಸಿತು. ಈ ಸಂಘಟಿತ ಶಕ್ತಿಗಳೊಡನೆ ಬಡಂಬಡಿಕೆ ಮಾಡಿಕೊಂಡ ಹೊರಗಣ ಅಧಿಕಾರಿಗಳು ಆಶ್ವಾಸನೆ ನೀಡಿದರು. ಖಾತರಿ ನೀಡಿದರು. ಆದರೆ ಫಲಿತಾಂಶವೇನಾಯಿತು? ಈ ರಾಜ್ಯಗಳಲ್ಲಿ ದಯಾಹೀನವಾದ ದೌರ್ಜನ್ಯ, ತುಳಿತ, ಹಿಂಸೆ ಮತ್ತು ಅಮಾನವೀಯತೆಗೆ ಒಳಗಾದಂತೆ, ಅಲ್ಪಸಂಖ್ಯಾತರು ಬೇರೆಲ್ಲೂ ಇದಕ್ಕೆ ಮೀರಿ ಅನುಭವಿಸಿರಲಿಲ್ಲ. ಕೆಲವು ಆಶ್ವಾಸನೆಗಳು ಮಬ್ಬುಗಟ್ಟಿವೆ, ಮತ್ತೆ ಕೆಲವು ಕಾಣೆಯಾಗಿವೆ. ಅಲ್ಪ ಸಂಖ್ಯಾತರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಹೊರಗಣ ಶಕ್ತಿಗಳಿಗೆ ಮೊರೆ ಹೋಗುವುದು ಬೇಡ. ಅದು ಅವರಿಗೆ ಖಂಡಿತ ಎಂದಿಗೂ ನೆರವಾಗುವುದಿಲ್ಲ. ಇತಿಹಾಸದ ಪಾಠಗಳನ್ನು ಮರೆಯಲಾಗದು. ಅಂತಹ ಪಾಠ ಅಲ್ಪಸಂಖ್ಯಾತರ ಮಿದುಳಿನಲ್ಲಿ ಎದೆಯಾಳದಲ್ಲಿ ಸುಟ್ಟು ಭಸ್ಮವಾಗಬೇಕು. ಅಲ್ಪಸಂಖ್ಯಾತರು ಯಾರ ಸಾಂಗತ್ಯದಲ್ಲಿ ಇರುವರೋ ಅವರಿಂದಲೆ ತಮ್ಮ ರಕ್ಷಣೆಯನ್ನು ನಿರೀಕ್ಷಿಸಬೇಕು. ಕೇವಲ ಬಹುಸಂಖ್ಯಾತರ ಹಿತಾಸಕ್ತಿಗಳು ಮಾತ್ರವಲ್ಲದೆ ಅಲ್ಪಸಂಖ್ಯಾತರ ಹಿತಾಸಕ್ತಿಗಳೂ ಕೂಡ ಪರಸ್ಪರ ಸದ್ಭಾವನೆ, ವಿಶ್ವಾಸ, ಸೌಹಾರ್ದ ಮತ್ತು ಸಾಮರಸ್ಯದಿಂದ ಮಾತ್ರ ದೊರೆಯಬಲ್ಲುದು. ಇತಿಹಾಸದ ಈ ಪಾಠ ಅವಿಸ್ಮರಣೀಯವೆಂದು ನಾನು ಭಾವಿಸುತ್ತೇನೆ.

ಅಲ್ಪಸಂಖ್ಯಾತರ ಹತ್ತು ಹಲವು ಆಯಾಮಗಳನ್ನು ಕುರಿತಾಗಲಿ, ಮೂಲಭೂತ ಹಕ್ಕುಗಳ ಬಗ್ಗೆಯಾಗಲಿ ಪ್ರಬಂಧವನ್ನು ಮಂಡಿಸಲು ಪ್ರಯತ್ನಿಸುವ ಇರಾದೆ ನನಗಿಲ್ಲ. ಕಳೆದ ಹಲವಾರು ವರ್ಷಗಳಿಂದ ಈ ರಾಷ್ಟ್ರವನ್ನು ಛಿದ್ರಗೊಳಿಸಿರುವ ಒಂದು ವಿಕೃತ ಪ್ರವೃತ್ತಿಯನ್ನು ಪ್ರಸ್ತಾಪಿಸದೆ ಇರಲಾರೆ. ಸಮುದಾಯವೆಂಬ ಒಂದು ಅವ್ಯವಸ್ಥಿತವಾದ, ವಿವೇಚನಾರಹಿತವಾದ ಸಮಷ್ಟಿಯಲ್ಲಿ, ರಾಷ್ಟ್ರದ ಬೆನ್ನೆಲುಬಾದ, ಅದರ ಆಧಾರ ಸ್ತಂಭವಾದ ಎಲ್ಲ ಸಾಮಾಜಿಕ ಚಟುವಟಿಕೆಗಳ ಜೀವಜೀವಾಳವಾದ ಮತ್ತು ಯಾರ ಸಂತೋಷ ಸಂತೃಪ್ತಿ ಸಾಮಾಜಿಕ ವ್ಯವಸ್ಥೆಯ ಗುರಿಯಾಗಬೇಕೋ, ಆ ವ್ಯಕ್ತಿ ಕಳೆದುಹೋಗಿದ್ದಾನೆ (ನಗಣ್ಯನಾಗಿದ್ದಾನೆ) ಅಂತಹ ಒಬ್ಬ ನಾಗರಿಕ ಅಸ್ತಿತ್ವದಲ್ಲಿರುವುದನ್ನು ನಾವು ಮರೆತಿದ್ದೇವೆ. ನಾವು ಸಮುದಾಯವನ್ನಷ್ಟೆ ಆಲೋಚಿಸುವ ಅನಾರೋಗ್ಯಕರ ಮತ್ತು ಭಾಗಶಃ ಹೀಗಳೆಯುವ ಅಭ್ಯಾಸ ಮಾಡಿಕೊಂಡಿದ್ದೇವೆ. ವ್ಯಕ್ತಿಯ ಬಗ್ಗೆ ಆಲೋಚಿಸುವುದೇ ಇಲ್ಲ (ಘೋಷಾನುಮೋದನೆ) ಆದರೆ ಸಮುದಾಯದ ನಿರ್ಮಾತೃಗಳು ಸ್ವತಃ ನಾಗರಿಕರೆ. ಪ್ರತಿಯೊಬ್ಬ ವ್ಯಕ್ತಿಯೂ ಎಲ್ಲ ವ್ಯವಸ್ಥೆಗಳ ಕೇಂದ್ರಬಿಂದು, ಅಭಿವೃದ್ಧಿ, ಮುಂದುವರಿಕೆ, ಎಲ್ಲಕ್ಕೂ ಅಳವಡಿಸುವ ಸಾಧನ ಸಲಕರಣೆಗಳ ಜೀವವೇ ವ್ಯಕ್ತಿ. ಪ್ರತಿಯೊಬ್ಬ ವಿವೇಕಶಾಲಿ ರಾಜನೀತಿಜ್ಞದ ಗುರಿಯೂ ವ್ಯಕ್ತಿ ನಿರ್ದೇಶಿತ ಯೋಗಕ್ಷೇಮ ಮತ್ತು ಸಂತೋಷವೇ ಆಗಿರಬೇಕು. ಆದುದರಿಂದ ವ್ಯಕ್ತಿಯೇ ಗಣನೀಯನಾಗುತ್ತಾನೆಂಬುದನ್ನು ನೆನಪಿನಲ್ಲಿಡೋಣ. ಸಾಮಾಜಿಕ ಸ್ತೂಪದ ಬುನಾದಿಯೂ, ಶೃಂಗವೂ ವ್ಯಕ್ತಿಯೇ ಆಗಿರುತ್ತಾನೆ. ಆದುದರಿಂದ ಆತನ ಪ್ರಾಮುಖ್ಯ, ಘನತೆ, ಪಾವಿತ್ರ್ಯ ಎಲ್ಲವನ್ನೂ ಎಲ್ಲ ಕಾಲಕ್ಕೂ ನೆನಪಿನಲ್ಲಿಡಬೇಕು. ಇದನ್ನು ತಾವು ನೆನಪಿನಲ್ಲಿ ಇಟ್ಟಿರುವಿರಾದರೆ ಮೂಲಭೂತ ಹಕ್ಕುಗಳ ಪ್ರಾಮುಖ್ಯ ನಿಮಗೆ ಅರಿವಾಗಿ, ಅದನ್ನು ಗೌರವಿಸುತ್ತೀರಿ. ಏಕೆಂದರೆ, ಮಾನವ ಪ್ರಗತಿ ಹಕ್ಕುಗಳ ಗಣನೆಯನ್ನು ಅವಲಂಬಿಸಿರುತ್ತದೆ. ಅಟ್ಲಾಂಟಿಕ್ ಪ್ರಣಾಳಿಕೆ ಮತ್ತದರ ನಾಲ್ಕು ಸ್ವಾತಂತ್ರ್ಯಗಳು, ಪೇನ್ಸ್ ಮತ್ತು ವೆಲ್ಸ್‌ನಿಂದ ಕಳೆದ ವರ್ಷದ ಘೋಷಣೆಯ ವರೆಗೆ, ವ್ಯಕ್ತಿಯ ಹಕ್ಕುಗಳ ಬಗ್ಗೆ ಪ್ರಕಟಣೆಗೊಂಡ ಪ್ರಣಾಳಿಕೆಗಳಿಂದ ಮಾನವಜನಾಂಗದ ಇತಿಹಾಸದಲ್ಲಿ ಉದಾತ್ತ ಬೆಳವಣಿಗೆಯನ್ನು ಕಾಣಬಹುದಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ವಿಶಾಲ ದೃಷ್ಟಿ, ಕಾನೂನಿನ ಮುಂದೆ ಎಲ್ಲರೂ ಸಮಾನರೆಂಬ ಅರಿವು ಹಾಗೂ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ವಯಂಪೂರ್ಣತೆಯನ್ನು ಸಾಧಿಸುವ ನಾಗರಿಕ ಜಗತ್ತಿನ ನಿರ್ಮಾಣವೆ ಎಲ್ಲ ಮಾನವ ಚಟುವಟಿಕೆಗಳ ಧ್ಯೇಯೋದ್ದೇಶ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ನಮ್ಮ ರಾಷ್ಟ್ರದಲ್ಲೆ, ತಳಸಮುದಾಯ, ಪರಿಶಿಷ್ಟ ಜನಾಂಗ ಮತ್ತು ಹಿಂದುಳಿದ ಜನಾಂಗದವರ ಹಿತಾಸಕ್ತಿ ಕಾಯ್ದುಕೊಳ್ಳಬೇಕಿರುವ ಅಗತ್ಯ ಇದೆ. ನಮ್ಮ ಲೋಪದೋಷಗಳಿಗೆ ತಕ್ಕ ಪ್ರಾಯಶ್ಚಿತ್ತವನ್ನು ನಾವೇ ಮಾಡಿಕೊಳ್ಳಬೇಕು. ನಾನು 'ಅಕೃತ್ಯ' ಎಂಬ ಪದವನ್ನು ಬಳಸಲಾರೆ. ಅವರೆಲ್ಲರನ್ನು ಮೇಲೆ ತರಲು, ಏನೆಲ್ಲ ಸಾಧ್ಯವೋ ಅದನ್ನು ನಾವು

ಮಾಡಬೇಕಿದೆ. ಉಳ್ಳವರು ಮತ್ತು ಇಲ್ಲದವರ ನಡುವಣ ಅಂತರವನ್ನು ನಿವಾರಿಸುವ ನೈಜ ಅಗತ್ಯವಿದೆ. ಅದು ನಮ್ಮ ಮತ್ತು ಅವರ ಹಿತದೃಷ್ಟಿಯಿಂದಲೂ ಅಗತ್ಯ. ಒಂದು ಸರಪಳಿಯ ಬಲ ಅದರ ಅತ್ಯಂತ ಬಲಹೀನ ಕೊಂಡಿಯನ್ನು ಆಧರಿಸಿರುತ್ತದೆ. ಆದುದರಿಂದ, ಪ್ರತಿಯೊಬ್ಬ ದುರ್ಬಲ ವ್ಯಕ್ತಿಯೂ ಪುನಶ್ಚೇತನಗೊಳ್ಳುವ ವರೆಗೆ, ನಮ್ಮಲ್ಲಿ ಆರೋಗ್ಯಕರ ರಾಜಕೀಯ ನೆಲೆಗೊಳ್ಳದು. ಮಾನವ ಜನಾಂಗದ ಆದರ್ಶಗಳನ್ನು, ಸಲಹಾ ಸಮಿತಿ ಪಾಲಿಸುವುದೆಂದು ನಾನು ನಂಬುತ್ತೇನೆ. ಸಂವಿಧಾನ ರಚನೆಗೊಂದೇ ಅಲ್ಲದೆ ಸ್ವತಂತ್ರ ಭಾರತದ ನಿರ್ಮಾಣಕ್ಕೂ ಸಹ, ಸಹಕಾರಿಯಾಗುವಂತೆ ಈ ಸಭೆಯ ಮುಂದೆ, ಅಧಿಕಾರವನ್ನು ಹಕ್ಕುಗಳನ್ನು ಮಂಡಿಸಲು ಪ್ರಯತ್ನಿಸುತ್ತದೆ ಎಂದು ನಂಬುತ್ತೇನೆ. ನಾವಿಲ್ಲಿರುವುದು ಬರೆ ಔಪಚಾರಿಕ ಕರ್ತವ್ಯ ನಿರ್ವಹಣೆಗಲ್ಲ–ಒಂದು ವಾಸ್ತವಿಕ ಕರ್ತವ್ಯದ ಪೂರೈಕೆಗಾಗಿ. ಈ ಸಲಹಾ ಸಮಿತಿ ಜಾಗತಿಕ ವೇದಿಕೆಯನ್ನು ಆಕ್ರಮಿಸಿರುವ ವೈಮನಸ್ಯ ಹಾಗೂ ಸಮಿತಿಯು ಭೇದಭಾವವನ್ನು ನಿವಾರಿಸಿ ಒಮ್ಮತ, ಐಕಮತ್ಯ, ಸದ್ಭಾವನೆ ಮತ್ತು ವಿಶ್ವಾಸವನ್ನು ಮೂಡಿಸುವುದೆಂದು ನಂಬೋಣ. ಸಮಿತಿಯ ವ್ಯವಹಾರಗಳ ಪರಿಣಾಮವಾಗಿ ಸ್ವತಂತ್ರ ಭಾರತದ ನಿರ್ಮಾಣಕ್ಕೆ ಬುನಾದಿ ಸಿದ್ಧಗೊಳ್ಳುತ್ತದೆ. ಸ್ವತಂತ್ರ ರಾಷ್ಟ್ರಕ್ಕಾಗಿ ನಾವು ಜೀವಿಸಿರಬೇಕು; ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಮಡಿದವರೆಷ್ಟೋ ಮಂದಿಗಾಗಿ ಮತ್ತು ಇಲ್ಲಿಯ ಬದುಕೊಂದೆ ಅರ್ಥಪೂರ್ಣ ಎಂಬ ಕಾರಣಕ್ಕಾಗಿ ಜೀವಿಸಿರಬೇಕು.

**ಮಾನ್ಯ ಅಧ್ಯಕ್ಷರು** : ಸರ್ದಾರ್ ಹರ್ನಾಮ್ ಸಿಂಗ್ ಇದನ್ನು ಅನುಮೋದಿಸುತ್ತಾರೆ.

**ಸರ್ದಾರ್ ಹರ್ನಾಮ್ ಸಿಂಗ್** : (ಪಂಜಾಬ್–ಸಿಕ್ಖ್) :

ಮಾನ್ಯ ಅಧ್ಯಕ್ಷರೆ, ಮೇ ೧೬ರಂದು ಹೇಳಿಕೆಯ ಉಪಬಂಧಗಳ ಅಡಿಯಲ್ಲಿ ರಚಿಸಬೇಕಾದ ಸಲಹಾ ಸಮಿತಿ, ಅನೇಕ ಕಾರ್ಯಗಳಿಗಾಗಿ ಪ್ರಾಮುಖ್ಯ ಪಡೆಯುತ್ತದೆ. ಅನೇಕಾನೇಕ ವರುಷಗಳಿಂದ ರಾಷ್ಟ್ರದ ಮುನ್ನಡೆಗೆ ಅಡ್ಡಿ ತರುತ್ತಿರುವುದು, ಅಲ್ಪಸಂಖ್ಯಾತರ ಸಮಸ್ಯೆ ಎಂಬುದು ನಮ್ಮೆಲ್ಲರಿಗೂ ತಿಳಿದ ವಿಷಯವೆ. ಈ ಸಮಸ್ಯೆಯ ಸೂಕ್ತ ಪರಿಹಾರದಿಂದ ರಾಷ್ಟ್ರದ ಏಳಿಗೆಯಾಗುತ್ತದೆ ಎಂದು ನಾನು ನಂಬುತ್ತೇನೆ. ನಿಲುವಳಿಯ ಧ್ಯೇಯೋದ್ದೇಶಗಳಲ್ಲಿ ಮುಂದೆ ರಚಿಸಲಿರುವ ಭಾರತ ಸಂವಿಧಾನದಲ್ಲಿ, ಅಲ್ಪಸಂಖ್ಯಾತರಿಗೆ ಸಮರ್ಪಕ ಸೌಲಭ್ಯಗಳನ್ನು ಒದಗಿಸುವ ಗುರಿಯನ್ನು ವಿಶದ ಪಡಿಸಲಾಗಿದೆ. ೧೯೨೨ರಲ್ಲಿ, ಸಂವಿಧಾನ ರಚನಾಸಭೆಯನ್ನು ಆಯೋಜಿಸುವ ಬೇಡಿಕೆಯನ್ನು ಮುಂದಿಡಲಾಯಿತು. ಅಲ್ಲಿಂದ ಮುಂದೆ ಹಲವಾರು ನಿಲುವಳಿಗಳನ್ನು ಅಂಗೀಕರಿಸಲಾಯಿತು. ಕಾಂಗ್ರೆಸ್‌ನ ಮಟ್ಟಿಗೆ ಹೇಳುವುದಾದರೆ ಆ ಎಲ್ಲ ನಿಲುವಳಿಗಳಲ್ಲೂ ಅಲ್ಪಸಂಖ್ಯಾತರ ಹಿತರಕ್ಷಣೆಗೆ ಸೌಲಭ್ಯ ಕಲ್ಪಿಸಬೇಕೆಂದು ಕಾಂಗ್ರೆಸ್ ಒತ್ತಾಯ ಪಡಿಸುತ್ತ ಬಂದಿದೆ. ಆ ಸೌಲಭ್ಯಗಳು ಅಲ್ಪಸಂಖ್ಯಾತರಿಗೆ ತೃಪ್ತಿ ತರಬೇಕು. ಆ ಕಾರಣ ಭಾರತದ ಸಂವಿಧಾನ ರಚನಾಸಭೆಯ ಎಲ್ಲ ಸದಸ್ಯರಿಗೆ ಒಪ್ಪಿಗೆಯಾಗುವಂತಹ ಈ ಮಂಡಳಿಯ ರಚನೆಗೆ, ಸದನದಲ್ಲಿ ಕಾಂಗ್ರೆಸ್ ಪಕ್ಷ ಸಮ್ಮತಿಸಿರುವುದು ನನಗೆ ಸಂತಸ ತಂದಿದೆ. ಸಲಹಾ ಸಮಿತಿಯು ಪ್ರಸ್ತಾವಿಸಿರುವ ಕೋಮು ಸಮಸ್ಯೆಗೆ ಅಂತಿಮ ಪರಿಹಾರವೇನೆಂಬುದನ್ನು ಈ ಹಂತದಲ್ಲಿ ಯಾರೂ ಹೇಳಲಾರರು. ಸಲಹಾ ಸಮಿತಿಯು, ಅಲ್ಪಸಂಖ್ಯಾತರ ರಕ್ಷಣೆಗಾಗಿ ರಚಿಸಬೇಕಿರುವ ಖಂಡಗಳಿಗೂ ಈಗಿರುವ ಸಂಗತಿಗಳಿಗೂ ಕಿಂಚಿತ್ ಸಂಬಂಧವಿದೆ. ಅಲ್ಪಸಂಖ್ಯಾತರ ರಕ್ಷಣೆಯ ಖಂಡಗಳು, ಮತೀಯ/ಧಾರ್ಮಿಕ, ಸಾಂಸ್ಕೃತಿಕ ಆರ್ಥಿಕ ಆಡಳಿತ ಮತ್ತು ರಾಜಕೀಯ ವಲಯಗಳಿಗೆ ಸಂಬಂಧಿಸಿದವು. ಭಾರತದ ಸಮುದಾಯಗಳು ಈ ಹಿಂದೆ, ಅಲ್ಪಸಂಖ್ಯಾತರ ರಕ್ಷಣೆಗಾಗಿ, ಭಾರತ ಸರ್ಕಾರ ಅಧಿನಿಯಮದ ಉಪಬಂಧಗಳನ್ನು ಅಂತೆಯೇ ಉಳಿಸಿಕೊಳ್ಳುವುದಕ್ಕೆ ಪ್ರಾಮುಖ್ಯ ನೀಡಿದ್ದುವು. ಸಲಹಾ ಸಮಿತಿಯು, ಅದರ ಅನುಸಾರ ತನ್ನ ವರದಿಯನ್ನು ರಚಿಸುತ್ತದೆಯೋ ಇಲ್ಲವೋ ಎಂಬುದನ್ನು ಈ ಹಂತದಲ್ಲಿ ನಾನು ಹೇಳಲಾರೆ. ಆ ಉಪಬಂಧಗಳನ್ನು ನಾವೆಲ್ಲರೂ ಬಲ್ಲೆವು. ಭಾರತ ಸರ್ಕಾರ ಅಧಿನಿಯಮದ ೨೪೨ನೇ ಕಲಮಿನ ವ್ಯಾಪ್ತಿಗೆ ಆಂಗ್ಲೋ ಇಂಡಿಯನ್ನರು ಒಳಪಡುತ್ತಾರೆಂಬುದನ್ನು ಬಲ್ಲೆವು. ಇತರ ಕೆಲವು ಸಮುದಾಯಗಳು ತಮಗೆ ನೀಡಲಾಗಿರುವ ಮಾನ್ಯತೆಗೆ ಪ್ರಾಮುಖ್ಯ ನೀಡಿವೆ. ಇತರ ಸಮುದಾಯಗಳು ಪ್ರತ್ಯೇಕ ಮತದಾರರನ್ನು ಉಳಿಸಿಕೊಳ್ಳಬೇಕೆಂದು ಆಗ್ರಹ

ಪಡಿಸಿವೆ. ಈ ಉಪಬಂಧಗಳು ಕೆಲವು, ಹಿಂದೆ ತೊಂದರೆಯುಂಟು ಮಾಡಿರಬಹುದು. ಆದರೆ ಈ ಎಲ್ಲ ದೃಷ್ಟಿಕೋನಗಳನ್ನು ಮನಗಂಡು, ಅಲ್ಪಸಂಖ್ಯಾತರ ಹಿತರಕ್ಷಣೆಯ ಪ್ರಶ್ನೆಯನ್ನು ಸಲಹಾ ಸಮಿತಿ ಪರಿಶೀಲಿಸುವುದೆಂದು ನಾನು ನಂಬುತ್ತೇನೆ. ಈ ಸಲಹಾ ಸಮಿತಿಯ ವರದಿಯು ರಾಷ್ಟ್ರದ ಸಮಗ್ರ ಹಿತಾಸಕ್ತಿಯನ್ನೂ, ಅಲ್ಪಸಂಖ್ಯಾತ ರಹಿತವನ್ನು ಕಾಯ್ದುಕೊಳ್ಳುವಂತಹ ವರದಿ ಸಿದ್ಧಪಡಿಸುವುದೆಂದು ನಂಬುತ್ತೇನೆ.

ಸ್ವಾಮಿ, ಈ ಬಗ್ಗೆ ಸೂಕ್ತ ತಿಳಿವಳಿಕೆ ಪಡೆಯಲು ಮತ್ತು ಅದರ ಪ್ರಕಾರ್ಯಗಳನ್ನು ಅರಿಯಲು, ಮೌಲಾನಾ ಅಬುಲ್ ಕಲಂ ಆಝಾದ್, ಶ್ರೀ ಎಂ.ಎ. ಜಿನ್ನಾ ಮತ್ತು ಲಾರ್ಡ್ ಪೆಥಿಕ್ ಲಾರೆನ್ಸ್ ನಡುವೆ ನಡೆದ ಸುದೀರ್ಘ ಪತ್ರವ್ಯವಹಾರವನ್ನು ಅವಲೋಕಿಸಬೇಕು. ಮೌಲಾನಾ ಅಬುಲ್ ಕಲಂ ಆಝಾದ್ ಅವರು ಲಾರ್ಡ್ ಪೆಥಿಕ್ ಲಾರೆನ್ಸ್ ಅವರಿಗೆ ಬರೆದ ಪತ್ರಗಳ, ಪೈಕಿ ಒಂದರಲ್ಲಿ, ಕೋಮು ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಲು ಎಲ್ಲ ಬಾಧಿಕ ಪಕ್ಷಗಳ ಸಮ್ಮತಿಯ ಅಗತ್ಯವನ್ನು ಒತ್ತಿ ಹೇಳಿದ್ದರು. ವಾಸ್ತವವಾಗಿ ೧೯೪೬ರ ಮೇ ೧೨ರಂದು, ಕಾಂಗ್ರೆಸ್ ಎಲ್ಲರ ಒಪ್ಪಿಗೆಗೆ ಆಧಾರವಾಗುವಂತೆ ಅಷ್ಟಸೂತ್ರಗಳನ್ನು ರಚಿಸಿತು. ಅದರಲ್ಲಿ, ೬ನೇ ಸೂತ್ರದಂತೆ, ಅಲ್ಪಸಂಖ್ಯಾತರ ಸಮಸ್ಯೆಗೆ ಸಂಬಂಧಿಸಿದಂತೆ, ಸರ್ವಜನ ಸಮ್ಮತಿಯಿಂದ, ಸಮರ್ಪಕ ಪರಿಹಾರ ಹುಡುಕುವುದಕ್ಕೆ ಕಾಂಗ್ರೆಸ್ ಬದ್ಧವೆಂದು ತಿಳಿಸಲಾಗಿತ್ತು. ಆದುದರಿಂದ, ಈ ಸಲಹಾ ಸಮಿತಿ ಅಲ್ಪಸಂಖ್ಯಾತರ ಹಿತರಕ್ಷಣೆಯ ಹಾಗೂ ಮೂಲಭೂತ ಹಕ್ಕು ರಕ್ಷಣೆಯ ಕಾರ್ಯದಲ್ಲಿ ತೊಡಗುವಾಗ, ಅದರ ಕಾರ್ಯಕ್ಷೇತ್ರ ಸರ್ವವ್ಯಾಪಿಯಾಗಿರುವುದೆಂದು ನಂಬುತ್ತೇನೆ. ಅದರ ಕಾರ್ಯನಿರ್ವಹಣೆಯಿಂದ ದೊಡ್ಡವರು ಸಣ್ಣವರೆನ್ನದೆ, ಎಲ್ಲರ ಎಲ್ಲ ಆಶೋತ್ತರಗಳನ್ನು ನ್ಯಾಯಸಮ್ಮತವಾಗಿ ಪೂರೈಸುವ ನಿಟ್ಟಿನಲ್ಲಿ, ಶಿಫಾರಸ್ಸುಗಳನ್ನು ಮಾಡುವುದೆಂದು ಭಾವಿಸುತ್ತೇವೆ.

ಮಾನ್ಯರೆ, ಪಂಡಿತ್ ಗೋವಿಂದವಲ್ಲಭ ಪಂತ್ ಅವರ ನಿಲುವಳಿಯನ್ನು ನಾನು ಅನುಮೋದಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಕಾರ್ಯಕ್ರಮ ಪತ್ರದಲ್ಲಿ, ಹಲವಾರು ತಿದ್ದುಪಡಿಗಳಿಗೆ ನೀಡಿದ ನೋಟೀಸುಗಳ ಪಟ್ಟಿ ನನ್ನ ಮುಂದಿದೆ. ಪ್ರತಿಯೊಂದು ನಿರ್ದಿಷ್ಟ ಖಂಡದ ಬಗ್ಗೆಯೂ ತಿದ್ದುಪಡಿಯನ್ನು ಪ್ರಸ್ತಾವಿಸುವಂತೆ ಕೋರುವುದು ಸುಲಭವೆಂದು ಭಾವಿಸುತ್ತೇನೆ. ಆದುದರಿಂದ, ನಾನು ಖಂಡದ ಹೆಸರನ್ನು ಸೂಚಿಸಿದಾಗ, ಆದರ ಬಗ್ಗೆ ಸದಸ್ಯರು ತಮ್ಮ ತಿದ್ದುಪಡಿಗಳೇನಾದರೂ ಇದ್ದಲ್ಲಿ ಪ್ರಸ್ತಾವಿಸಲಿ.

ಮೊದಲನೆ ಖಂಡ ೧(ಎ) ಮಿ। ಮುನ್ಷಿಯವರು ಒಂದು ತಿದ್ದುಪಡಿಸಿ ನೋಟೀಸು ನೀಡಿದ್ದಾರೆ.

**ಮಿ। ದಾಂಬರ್ ಸಿಂಗ್ ಗುದುಂಗ್** : (ಬಂಗಾಲ–ಸಾಮಾನ್ಯ) :

ಮಾನ್ಯರೆ, ತಮ್ಮ ಗಮನಕ್ಕೆ ತರುವುದೇನೆಂದರೆ, ಯಾವುದೇ ತಿದ್ದುಪಡಿಯನ್ನು ಪ್ರಸ್ತಾವಿಸುವ ಮುನ್ನ ಅದನ್ನು ಕುರಿತ ನೋಟೀಸು ಜಾರಿ ಮಾಡಲು ಕಾಲಾವಕಾಶ ನೀಡಲಾಗಿದೆಯೇ ಎಂಬುದನ್ನು ತಿಳಿಯಬಹುದೆ? ನಿಲುವಳಿಯನ್ನು ಈಗಷ್ಟೆ, ಪ್ರಚುರ ಪಡಿಸಲಾಗಿದೆ. ಸದಸ್ಯರಿಗೆ ಕೆಲ ಕಾಲಾವಕಾಶ ಬೇಕು.

**ಮಾನ್ಯ ಅಧ್ಯಕ್ಷರು** : ನನಗೆ ತಿಳಿದಂತೆ, ಈ ನಿಲುವಳಿಯನ್ನು ಕುರಿತು, ಕೆಲದಿನಗಳ ಹಿಂದೆಯೇ ಸುತ್ತೋಲೆ ಕಳುಹಿಸಲಾಗಿತ್ತು.

**ಮಿ। ದಾಂಬರ್ ಸಿಂಗ್ ಗುರುಂಗ್** : ಆದರೆ, ಈಗಷ್ಟೆ ಇದನ್ನು ಇಲ್ಲಿಯ ಸದಸ್ಯರಲ್ಲಿ ವಿತರಣೆ ಮಾಡಲಾಗಿದೆ.

**ಮಾನ್ಯ ಅಧ್ಯಕ್ಷರು** : ಇಲ್ಲ, ಇಲ್ಲ ಪಂಡಿತ್ ಪಂತ್ ಅವರು ಪ್ರಸ್ತಾವಿಸಿದ ನಿಲುವಳಿಯನ್ನು, ಬಹುದಿನಗಳ ಹಿಂದೆಯೇ ಪ್ರಚಾರಕ್ಕೆ ತರಲಾಗಿತ್ತು.

**ಮಿ। ದಾಂಬರ್ ಸಿಂಗ್ ಗುರುಂಗ್** : ನಾನು ಹೇಳುವುದೇನೆಂದರೆ, ಇಲ್ಲಿ ಈಗ, ಮುಸ್ಲಿಮ್ ಲೀಗ್ ಹಾಜರಿಲ್ಲ. ಈ ನಿಲುವಳಿಯನ್ನು ಪಕ್ಷದ ಸಭೆಯಲ್ಲಿ, ಸುತ್ತೋಲೆಯ ರೂಪದಲ್ಲಿ ಪ್ರಚುರ ಪಡಿಸಲಾಗಿತ್ತು.

**ಮಾನ್ಯ ಅಧ್ಯಕ್ಷರು** : ಇಲ್ಲ. ತಪ್ಪು ಭಾವಿಸಿದ್ದೀರಿ ಎಂದೆನಿಸುತ್ತದೆ. ನಾನು ಪಂಡಿತ್ ಗೋವಿಂದವಲ್ಲಭ

ಪಂತ್‌ರ ನಿಲುವಳಿಯ ಬಗ್ಗೆ ಮಾತನಾಡುತ್ತಿದ್ದೇನೆ. ಅದರ ಬಗ್ಗೆ ಹಲವಾರು ದಿನಗಳ ಹಿಂದೆಯೇ, ಸದಸ್ಯರಿಗೆ ನೋಟೀಸು ಕಳುಹಿಸಲಾಗಿತ್ತು. ಬೇರಾವ ತಿದ್ದುಪಡಿಯನ್ನು ಇನ್ನೂ ಪ್ರಸ್ತಾವಿಸಿಲ್ಲ.

**ಮಿ| ದಾಬರ್ ಸಿಂಗ್ ಗುರುಂಗ್ :** ಆದರೆ ಈ ನಿಲುವಳಿಯನ್ನು ಈಗಷ್ಟೆ ಸದಸ್ಯರಿಗೆ ನೀಡಲಾಯಿತು.

**ಮಾನ್ಯ ಅಧ್ಯಕ್ಷರು :** ಈ ಸದನದಲ್ಲೆ? ನೀವು ಬೇರಾವುದೋ ನಿಲುವಳಿಯ ಬಗ್ಗೆ ಮಾತನಾಡುತ್ತಿದ್ದೀರಿ ಎಂದು ತೋರುತ್ತೆ. ಈ ನಿಲುವಳಿಯನ್ನು ಹಲವು ದಿನಗಳ ಹಿಂದೆಯೇ ಹಂಚಲಾಗಿತ್ತು. ಶ್ರೀ ಮುನ್ಷಿ..

**ಶ್ರೀ ಕೆ.ಎಂ. ಮುನ್ಷಿ :** (ಬಾಂಬೆ–ಸಾಮಾನ್ಯ) : ಮಾನ್ಯರೆ, ನಿಲುವಳಿಯ ೧ನೇ ಖಂಡಿಕೆಯ, ಉಪಖಂಡಿಕೆ 'ಎ'ನಲ್ಲಿ "೬೮" ಎಂಬ ಸಂಖ್ಯೆಗೆ ಬದಲಾಗಿ "೭೨" ಎಂಬ ಸಂಖ್ಯೆಯನ್ನು ಪ್ರತಿಯೋಜಿಸಬೇಕು. ಈಗಾಗಲೆ ಮಿ| ಗೋವಿಂದವಲ್ಲಭ ಪಂತ್ ಅವರು ತಿಳಿಸಿರುವಂತೆ, ನಿಲುವಳಿಯ ಬೇರೊಂದು ಭಾಗದಲ್ಲಿ ಉಪಬಂಧಿಸಿರುವಂತೆ, ಸ್ಥಾನಗಳನ್ನು ಭರ್ತಿ ಮಾಡಲು ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ. ಆದುದರಿಂದ ನಾನು ಈ ನಿಲುವಳಿಗೆ ತಿದ್ದುಪಡಿಯನ್ನು ಪ್ರಸ್ತಾವಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು :** ೧ನೇ ಖಂಡಕ್ಕೆ ಬೇರೇನಾದರೂ ತಿದ್ದುಪಡಿಯಿದೆಯೇ? ಯಾವುದೂ ಇಲ್ಲವಾದರೆ ನಾನು ಶ್ರೀ ಮುನ್ಷಿಯವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ತಿದ್ದಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು :** ಮುಂದಿನ ತಿದ್ದುಪಡಿಗೆ ಹೋಗೋಣ. ಶ್ರೀ ನಿಕೋಲ್ಸ್ ರಾಯ್ ಅವರು ತಿದ್ದುಪಡಿಗೆ ನೋಟೀಸು ನೀಡಿದ್ದಾರೆ.

**ಗೌರವಾನ್ವಿತ ರೆವರೆಂಡ್ ಜೆ.ಆರ್.ಎಂ. ನಿಕೊಲಸ್ ರಾಯ್ :** (ಅಸ್ಸಾಂ–ಸಾಮಾನ್ಯ) : ನಾನು ಪ್ರಸ್ತಾವಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಶ್ರೀ ಸಂತಾನಂ ತಿದ್ದುಪಡಿಯೊಂದಕ್ಕೆ ನೋಟೀಸು ಕಳುಹಿಸಿದ್ದಾರೆ.

**ಶ್ರೀ ಕೆ. ಸಂತಾನಂ :** (ಮದರಾಸ್–ಸಾಮಾನ್ಯ) : ನಾನು ಅದನ್ನು ಪ್ರಸ್ತಾವಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಹಾಗಿದ್ದರೆ, ಶ್ರೀ ಮುನ್ಷಿ...

**ಶ್ರೀ ಮುನ್ಷಿ :** ಮಾನ್ಯ ಅಧ್ಯಕ್ಷರೆ ಬಿ(೧) ಖಂಡಕ್ಕೆ ನಾನು ತಿದ್ದುಪಡಿ ಪ್ರಸ್ತಾವಿಸಲು ಅನುಮತಿ ಬೇಡುತ್ತೇನೆ. ನನ್ನ ತಿದ್ದುಪಡಿ ಹೀಗಿದೆ :

ನಿಲುವಳಿಯ ೧ನೇ ಖಂಡಿಕೆಯ ಬಿ(೧) ಉಪಖಂಡಿಕೆಯಲ್ಲಿ "೫೨ ಸದಸ್ಯರು" ಎಂದು ಪ್ರಾರಂಭವಾಗುವ ಪದಗಳು ಹೀಗಿವೆ:

"ಏಕೈಕ ವರ್ಗಾವಣೀಯ ಮತದ ವಿಧಾನದಿಂದ ಅನುಪಾತಾಧಾರಿತ ಪ್ರಾತಿನಿಧ್ಯದ ತತ್ತ್ವದ ಆಧಾರದ ಮೇಲೆ ಸಭೆಯಿಂದ ಚುನಾಯಿತರಾದ ೫೨ ಸದಸ್ಯರು"–ಇವಕ್ಕೆ ಬದಲಾಗಿ – ಪ್ರತಿಯೋಜಿಸಿ.

"ಕೆಳಕಂಡ ಸದಸ್ಯರು"

"ತಿದ್ದುಪಡಿಯಲ್ಲಿ ಹೆಸರುಗಳನ್ನು ಕೊಡಲಾಗಿದೆ. ಈಗ ಖಂಡ ಈ ರೀತಿ ಇರುತ್ತದೆ".

"ಪ್ರಾರಂಭದಲ್ಲಿ ಕೆಳಕಂಡ ಸದಸ್ಯರುಗಳನ್ನು ಅದು ಒಳಗೊಂಡಿರುತ್ತದೆ". ನಂತರ ಹೆಸರುಗಳಿರುತ್ತವೆ. ನಾನು ಹೆಸರುಗಳನ್ನು ಓದುತ್ತೇನೆ. ವಿಭಿನ್ನ ವರ್ಗಗಳು ಈಗಾಗಲೆ ಸದನದ ಮುಂದಿವೆ. ನಿಲುವಳಿಯನ್ನು ಪ್ರಸ್ತಾವಿಸಿದ ಪ್ರಧಾನ ಪ್ರಸ್ತಾವಕರು ಅದನ್ನು ಮಂಡಿಸಿದ್ದಾರೆ. ನಾನು ಆ ಹೆಸರುಗಳನ್ನು, ಅವುಗಳ ಸ್ಥಾನವನ್ನೂ ತಿಳಿಸುತ್ತೇನೆ.

ಶ್ರೀ ಜಯರಾಮ್‌ದಾಸ್ ದೌಲತ್‌ರಾಮ್ – ಸಿಂಧ್‌ನಿಂದ.

ಗೌರವಾನ್ವಿತ ಮಿ| ಮೆಹರ್ ಚಂದ್ ಖನ್ನ – ವಾಯವ್ಯ ಸರಹದ್ದು

ಡಾ| ಗೋಪಿಚಂದ್ ಭಾರ್ಗವ – ಪಂಜಾಬ್‌ನಿಂದ

ಭಕ್ಷಿ ಸರ್ ಟೇಕ್‌ಚಂದ್ – ಪಂಜಾಬ್‌ನಿಂದಲೆ
ಡಾ। ಪ್ರಫುಲ್ಲ ಚಂದ್ರ ಘೋಷ್ ಎ.ಕೆ. – ಬಂಗಾಳದಿಂದ
ಶ್ರೀ ಸುರೇಂದ್ರ ಮೋಹನ್ ಘೋಷ್ – ಬಂಗಾಳದಿಂದ
ಡಾ। ಶ್ಯಾಮಪ್ರಸಾದ ಮುಖರ್ಜಿ – ಬಂಗಾಳದಿಂದ

ನಂತರ ಪರಿಶಿಷ್ಟ ಜಾತಿಯವರನ್ನು ಪ್ರತಿನಿಧಿಸುವ ಸಮೂಹ:
ಸರ್ದಾರ್ ಪೃಥ್ವಿ ಸಿಂಗ್ ಆಜ಼ಾದ್
ಶ್ರೀ ಧರ್ಮ ಪ್ರಕಾಶ್
ಶ್ರೀ ಎಚ್.ಜೆ. ಖಾಂಡೇಕರ್
ಗೌರವಾನ್ವಿತ ಶ್ರೀ ಜಗಜೀವನ ರಾಂ
ಶ್ರೀ ಪಿ.ಆರ್. ಠಾಕೂರ್
ಡಾ। ಬಿ.ಆರ್. ಅಂಬೇಡ್ಕರ್
ಶ್ರೀ ವಿ.ಎ. ಮುನಿಸ್ವಾಮಿ ಪಿಳ್ಳೈ

ಮುಂದಿನ ಆರು ಹೆಸರುಗಳ ಸಮೂಹ ಸಿಖ್ಖರದು:
ಸರ್ದಾರ್ ಜೋಗೇಂದ್ರ ಸಿಂಗ್
ಗೌರವಾನ್ವಿತ ಸರ್ದಾರ್ ಬಲದೇವ್ ಸಿಂಗ್
ಸರ್ದಾರ್ ಪ್ರತಾಪ್ ಸಿಂಗ್
ಸರ್ದಾರ್ ಹರ್‌ನಾಮ್ ಸಿಂಗ್
ಸರ್ದಾರ್ ಉಜ್ಜಲ್ ಸಿಂಗ್
ಸರ್ದಾರ್ ಕರ್ತಾರ್ ಸಿಂಗ್

ಮುಂದಿನ ನಾಲ್ಕು ಹೆಸರುಗಳು ಭಾರತೀಯ ಕ್ರೈಸ್ತರದು:
ಡಾ। ಎಚ್.ಸಿ. ಮುಖರ್ಜಿ
ಡಾ। ಆಲ್ಬನ್ ಡಿ ಸೋಜ಼ಾ
ಶ್ರೀ ಸಾಲ್ವೆ
ಶ್ರೀ ರೋಚೆ ವಿಕ್ಟೋರಿಯಾ

ಮುಂದಿನ ಮೂರು ಹೆಸರುಗಳು ಆಂಗ್ಲೊ ಇಂಡಿಯನ್ನರದು:
ಶ್ರೀ ಎಸ್.ಎಚ್. ಪ್ರೇಟರ್
ಶ್ರೀ ಫ್ರಾಂಕ್ ರೆಜಿವಾಲ್ಡ್ ಅಂಥಣಿ
ಶ್ರೀ ಎಂ.ವಿ.ಎನ್. ಕಾಲಿನ್ಸ್
ಮುಂದಿನ ಮೂರು ಹೆಸರುಗಳು ಪಾರಸಿಕರದು:
ಸರ್. ಹೋಮಿ ಮೋದಿ
ಶ್ರೀ ಎಂ.ಆರ್. ಮಜ಼್ನಿ

ಶ್ರೀ ಆರ್.ಕೆ. ಸಿಧ್ವಾ

೩೧ನೇ ನಂಬರ್, ಶ್ರೀ ರೂಪ್‌ನಾಥ್ ಬ್ರಹ್ಮ – ಅಸ್ಸಾಂ ಪೀಠ ಭೂಮಿಯ ಬುಡಕಟ್ಟು ಜನಾಂಗವನ್ನು ಪ್ರತಿನಿಧಿಸುತ್ತಾರೆ.

೩೨ನೇ ನಂಬರ್ ಖಾನ್ ಅಬ್ದುಲ್ ಗಫಾರ್ ಖಾನ್–ವಾಯವ್ಯ ಬುಡಕಟ್ಟು ಪ್ರದೇಶವನ್ನು ಪ್ರತಿನಿಧಿಸುತ್ತಾರೆ.

ಆ ಪ್ರದೇಶವನ್ನು ಪ್ರತಿನಿಧಿಸುವ ಇಬ್ಬರು ಸದಸ್ಯರನ್ನು ಅಧ್ಯಕ್ಷರು, ನಾಮನಿರ್ದೇಶನ ಮಾಡಬೇಕು.

ಖಾನ್ ಅಬ್ದುಸ್ ಸಮದ್ ಖಾನ್– ಬಲೂಚಿಸ್ತಾನವನ್ನು ಪ್ರತಿನಿಧಿಸುತ್ತಾರೆ. ಗೌರವಾನ್ವಿತ ರೆವೆರೆಂಡ್ ಜೆ.ಜೆ.ಎಂ. ನಿಕೊಲ್ಸ್ ರಾಯ್–೩೫ನೇ ನಂಬರಿನಲ್ಲಿ ಹೆಸರಿನ ಅಕ್ಷರಬಂಧ ತಪ್ಪಾಗಿದೆ. ಅದು ಶ್ರೀ ಮಯಂಗ್ ನೋಕ್ಯಾ ಇರಬೇಕು.

ನನಗೆ ಅದರ ಉಚ್ಚಾರ ಸರಿಯಾಗಿ ತಿಳಿಯದು. ಅವರು ಈಶಾನ್ಯ ಬುಡಕಟ್ಟು ಪ್ರದೇಶಗಳನ್ನು ಪ್ರತಿನಿಧಿಸುತ್ತಾರೆ. ನಂತರ ಮುಂದಿನ ಮೂರು ಹೆಸರುಗಳು ಹೊರಗುಳಿದ ಮತ್ತು ಭಾಗಶಃ ಹೊರಗುಳಿದ ಪ್ರದೇಶಗಳನ್ನು ಪ್ರತಿನಿಧಿಸುವ ವ್ಯಕ್ತಿಗಳದು:–

ಶ್ರೀ ಫೂಲ್ ಭಾನ್ ಷಾ

ಶ್ರೀ ದೇವೇಂದ್ರನಾಥ್ ಸಮಂತ

ಶ್ರೀ ಜೈಪಾಲ್ ಸಿಂಗ್, ಬಿರಾರದ, ಹೊರಗುಳಿದ ಪ್ರದೇಶಗಳನ್ನು ಪ್ರತಿನಿಧಿಸುತ್ತಾರೆ. ಮತ್ತೆ ಮೂವರನ್ನು ಅಧ್ಯಕ್ಷರು ನಾಮನಿರ್ದೇಶನ ಮಾಡಬೇಕು.

ನಂತರ ಹನ್ನೆರಡು ಸಾಮಾನ್ಯ ಹೆಸರುಗಳಿವೆ:–

ಆಚಾರ್ಯ ಜೆ.ಬಿ. ಕೃಪಲಾನಿ

ಗೌರವಾನ್ವಿತ ಮೌಲಾನಾ ಅಬುಲ್ ಕಲಾಂ ಆಜ಼ಾದ್

ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್

ಗೌರವಾನ್ವಿತ ಶ್ರೀ ಸಿ. ರಾಜಗೋಪಾಲಾಚಾರಿಯರ್

ರಾಜಕುಮಾರಿ ಅಮೃತ್ ಕೌರ್

ಶ್ರೀಮತಿ ಹಂಸಾ ಮೆಹ್ತಾ

ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್

ಗೌರವಾನ್ವಿತ ಶ್ರೀಯುತ ಗೋಪಿನಾಥ್ ಬರ್ಡೋಲೋಯಿ

ಗೌರವಾನ್ವಿತ ಪುರುಷೋತ್ತಮ್‌ದಾಸ್ ಟಂಡನ್

ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್

ಶ್ರೀ ಕೆ.ಟಿ. ಷಾ ಮತ್ತು ಶ್ರೀ ಕೆ.ಎಂ. ಮುನ್ಷಿ

ಮಾನ್ಯರೆ, ನಾನು ಈ ನಿಲುವಳಿಯನ್ನು ಪ್ರಸ್ತಾಪಿಸುತ್ತೇನೆ.

ಆಚಾರ್ಯ ಜೆ.ಬಿ. ಕೃಪಲಾನಿ (ಸಂಯುಕ್ತ ಪ್ರಾಂತ್ಯ)

ಮಾನ್ಯರೆ, ನಾನು ಅದನ್ನು ಅನುಮೋದಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಬೇರೇನೂ ತಿದ್ದುಪಡಿ ಇಲ್ಲವೆ? ಶ್ರೀ ಮುನ್ಷಿ, ನಿಮ್ಮ ಹೆಸರಿನಲ್ಲಿ ಮತ್ತೊಂದು ತಿದ್ದುಪಡಿ ಇದೆ?

**ಶ್ರೀ ಕೆ.ಎಂ. ಮುನ್ಷಿ** : ಮಾನ್ಯರೆ, ಅದು ಈಗ ಬೇಕಿಲ್ಲ.

**ಮಾನ್ಯ ಅಧ್ಯಕ್ಷರು** : ಇನ್ನೂ ಕೆಲವಿವೆ. ಅವುಗಳನ್ನೂ ನೀವು ಪ್ರಸ್ತಾಪಿಸುವುದಿಲ್ಲವೆ?

**ಮಿ। ಕೆ.ಎಂ. ಮುನ್ಷಿ** : ಇಲ್ಲ.

**ಮಾನ್ಯ ಅಧ್ಯಕ್ಷರು :** ಇನ್ನೊಂದು ತಿದ್ದುಪಡಿ ಇದೆ.

ಅದರ ಬಗ್ಗೆ ರೆವರೆಂಡ್ ನಿಕೊಲಸ್ ರಾಯ್ ಅವರು ನೋಟೀಸು ಜಾರಿ ಮಾಡಿದ್ದಾರೆ.

**ಗೌರವಾನ್ವಿತ ರೆವರೆಂಡ್ ಜೆ.ಆರ್.ಎಂ. ನಿಕೊಲಸ್ ರಾಯ್ :** ಮಾನ್ಯರೆ, ನಾನು ಇನ್ನೊಂದು ಎರಡು ಹೆಸರುಗಳನ್ನು ಹೆಚ್ಚುವರಿಯಾಗಿ ಸೇರಿಸಲು ಬಯಸಿದ್ದೆ. ಆದರೆ ಈಗಾಗಲೆ ಅಂಗೀಕರಿಸಲ್ಪಟ್ಟಿರುವ ಸಂಖ್ಯೆಯನ್ನು ಅದು ಬಾಧಿಸುತ್ತೆ. ಆದುದರಿಂದ ನಾನು ಅದನ್ನು ಪ್ರಸ್ತಾವಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು :** ನಿಲುವಳಿಯನ್ನು ಅಂಗೀಕರಿಸಲಾಗಿದೆ. ತಿದ್ದುಪಡಿಗಳೂ ಅಂಗೀಕರಿಸಲ್ಪಟ್ಟಿವೆ. ಈಗ ವಿಷಯದ ಬಗ್ಗೆ ಚರ್ಚೆ.

**ರಾಯ್ ಬಹಾದುರ್ ಶ್ಯಾಮನಂದನ ಸಹಾಯ :** (ಬಿಹಾರ–ಸಾಮಾನ್ಯ) : ಮಾನ್ಯರೆ, ತಿದ್ದುಪಡಿ ಕುರಿತಂತೆ ನನ್ನದೊಂದು ಅಭಿಪ್ರಾಯ ಇದೆ. ೪೬(೨)ನೇ ನಿಯಮದಲ್ಲಿ ನಾವು ಸ್ಪಷ್ಟವಾಗಿ ಅಳವಡಿಸಿರುವುದೆಂದರೆ–

"ಸಮಿತಿಯು ಬೇರೆ ವಿಧಾನದಲ್ಲಿ ರಚನೆಯಾಗುವಂತೆ, ಮಂಡಿಸಿದ ನಿಲುವಳಿಯಲ್ಲಿ, ಅವಕಾಶವಿದ್ದ ಹೊರತು ಅಂತಹ ಪ್ರತಿಯೊಂದು ಸಮಿತಿಯ ಸದಸ್ಯರು, ಏಕೈಕ ವರ್ಗಾವಣೀಯ ಮತವಿಧಾನದಿಂದ ಅನುಪಾತಾಧಾರಿತ ಪ್ರಾತಿನಿಧ್ಯದ ತತ್ತ್ವದ ಮೇಲೆ ಚುನಾಯಿತರಾಗಬೇಕು" ಮಾನ್ಯರೆ, ಇದು ನಿಜಕ್ಕೂ ಅತ್ಯಂತ ಉದ್ಬೋಧಕವಾದ ಒಂದು ಉಪಬಂಧವೆಂಬುದು ನನ್ನ ನಿವೇದನೆ. ಈ ಉಪಬಂಧ ಸದನದ ಎಲ್ಲ ವರ್ಗಗಳಿಗೂ ತೃಪ್ತಿ ತರುವಂತಹುದು. ಈ ತೆರನಾದ ಸದನದಲ್ಲಿ ಸಮಿತಿಗಳ ರಚನೆಗೆ ಸೂಕ್ತ ಸದಸ್ಯರ ಆಯ್ಕೆ ಉಚಿತವೆಂದು ನನ್ನ ಅಭಿಪ್ರಾಯ. ಶ್ರೀ ಮುನ್ಷಿಯವರು ಉದ್ಧರಿಸಿದ ತಿದ್ದುಪಡಿಯಲ್ಲಿ ಹೆಸರುಗಳನ್ನು ಸ್ಪಷ್ಟವಾಗಿ ಸೂಚಿಸಲಾಗಿದೆ. ಸಹಜವಾಗಿಯೇ ಬೇರೆ ಹೆಸರುಗಳನ್ನು ಸೂಚಿಸುವುದಾದರೆ ಇವುಗಳನ್ನು ಮತಕ್ಕೆ ಹಾಕಬೇಕಾಗುತ್ತದೆ. ಆಗ ಚುನಾವಣಾ ಪ್ರಕ್ರಿಯೆ ಹೇಗಿರುತ್ತದೆ ಎಂಬುದು ನನ್ನ ಪ್ರಶ್ನೆ. ಈ ವಿಷಯದತ್ತ ತಮ್ಮ ವಿಶೇಷ ಗಮನವನ್ನು ಸೆಳೆಯಲು ಬಯಸುತ್ತೇನೆ. ಏಕೆಂದರೆ, ಮುಂದೆ ಇದೇ ಒಂದು ಪರಿಪಾಠವಾಗುತ್ತದೆ. ತುಂಬ ಸೂಕ್ಷ್ಮ ವಿಚಾರಗಳ ನಿರ್ವಹಣೆಯಲ್ಲಿ ಅದು ಸಹಕಾರಿಯಾಗದಿರಬಹುದು. ಆದುದರಿಂದ ಮೂಲ ನಿಲುವಳಿಯನ್ನು ಅಳವಡಿಸುವಂತೆ ನಿಮ್ಮಲ್ಲಿ ಮತ್ತು ಶ್ರೀ ಮುನ್ಷಿಯವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅನಂತರ ಹೆಸರುಗಳನ್ನು ಸೂಚಿಸಿ ಮತಕ್ಕೆ ಹಾಕಬಹುದು. ನಂತರ ಏಕೈಕ ವರ್ಗಾವಣೀಯ ಮತದ ಆಧಾರದ ಮೇಲೆ, ಅನುಪಾತಾಧಾರಿತ ಪ್ರಾತಿನಿಧ್ಯದ ತತ್ತ್ವವನ್ನು ಆಧರಿಸಿ ಮತದಾನ ನಡೆಯಬಹುದು. ಇದು ಬಹಳ ಮುಖ್ಯವಾದ ವಿಷಯ. ತಮ್ಮ ವೈಯಕ್ತಿಕ ಗಮನವನ್ನು ಮಾತ್ರವಲ್ಲದೆ ಇಡೀ ಸದನದ ಗಮನವನ್ನು ಇದರತ್ತ ಸೆಳೆಯಲು ಬಯಸುತ್ತೇನೆ. ಸದನದ ಪ್ರತಿಯೊಂದು ವರ್ಗದ ಗಮನಕ್ಕೂ ತರುತ್ತಿದ್ದೇನೆ. ಈಗಿರುವಂತಹ ಅನಾರೋಗ್ಯಕರ ಕ್ರಮಪಲ್ಲಟಕ್ಕೆ ಸದನದಲ್ಲಿ ಅವಕಾಶ ದೊರೆಯಬಾರದು.

**ಶ್ರೀ ಜೈಪಾಲ್ ಸಿಂಗ್ :** (ಬಿಹಾರ್–ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ಪಂಡಿತ್ ಗೋವಿಂದವಲ್ಲಭ ಪಂತ್ ಅವರ ನಿಲುವಳಿಯೊಂದಿಗೆ, ಹೆಸರುಗಳ ಜೋಡಣೆಯಾಗಿದೆ. ಬುಡಕಟ್ಟು ಜನಾಂಗದ ದೃಷ್ಟಿಕೋನದಿಂದ ಕೆಲವೊಂದು ವಿಷಯವನ್ನು ನಿವೇದಿಸಬೇಕೆನಿಸುತ್ತೆ. ಪಂಡಿತ್ ಪಂತರ ವ್ಯಂಗ್ಯೋಕ್ತಿಯ ಬಗ್ಗೆ ನನ್ನ ಆಕ್ಷೇಪವಿದೆ. ಬುಡಕಟ್ಟು ಪ್ರದೇಶಗಳು ಮತ್ತು ಅಲ್ಪಸಂಖ್ಯಾತರು ಸಹಾಯಕ್ಕೆಂದು ವಿದೇಶದತ್ತ ಮುಖ ಮಾಡಿರುವುದಾಗಿ ಅವರು ಹೇಳಿದರು.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್ :** ನಾನು ಆ ರೀತಿ ಹೇಳಿಯೇ ಇಲ್ಲ. ಆ ಮಾತುಗಳು ನನ್ನ ಬಾಯಿಯಲ್ಲಿ ಬಂದಂತೆ, ದಯವಿಟ್ಟು ಆರೋಪಿಸಬೇಡಿ.

**ಮಿ। ಜೈಪಾಲ್ ಸಿಂಗ್ :** ನಾವು ನಮ್ಮ ದೇಶವಾಸಿಗಳತ್ತ ನೋಡುತ್ತೇವೆ. ನಮಗೆ ನ್ಯಾಯ ದೊರಕಿಸುವಂತೆ ನಮ್ಮ ನಾಯಕರಿಗೇ ಮೊರೆಹೋಗುತ್ತೇವೆ. ನಾವು ವಿದೇಶಕ್ಕೆ ಹೋಗಿಲ್ಲ. ಮಾತುಕತೆಗೆಂದು ಲಂಡನ್‌ಗೆ ಹೋಗಲಿಲ್ಲ. ನಮ್ಮ ಹಕ್ಕಿಗಾಗಿ ಅವಕಾಶ ಕಲ್ಪಿಸುವಂತೆ, ಸಚಿವ ಸಂಪುಟವನ್ನು ಭೇಟಿ ಮಾಡಲು ಹೋಗಿರಲಿಲ್ಲ.

ಸಮಾನತೆಯ ಆಧಾರದ ಮೇಲೆ ನಮ್ಮ ಹಕ್ಕುಗಳನ್ನು ನಮಗೆ ನ್ಯಾಯಸಮ್ಮತವಾಗಿ ಒದಗಿಸುವಂತೆ, ನಮ್ಮ ದೇಶದ ನಾಯಕರನ್ನಷ್ಟೆ ಕೇಳುತ್ತಿದ್ದೇವೆ. ಕಳೆದ ೬ ಸಾವಿರ ವರುಷಗಳಿಂದ ನಮ್ಮನ್ನು ಹೇಯವಾಗಿ ನಡೆಸಿಕೊಂಡು ಬರಲಾಗುತ್ತಿದೆ.

**ಶ್ರೀ ಕಿರಣ್‌ಶಂಕರ್ ರಾಯ್ :** (ಬಂಗಾಳ-ಸಾಮಾನ್ಯ) : ಎಷ್ಟು ವರುಷಗಳಿಂದ?

**ಶ್ರೀ ಜೈಪಾಲ್ ಸಿಂಗ್ :** ಆರು ಸಾವಿರ ವರುಷಗಳಿಂದ, ಶ್ರೀ ಕಿರಣ್ ಶಂಕರ್ ರಾಯ್ ಆ ಅವಧಿಯಲ್ಲಿ ನೀವು, ಆದಿವಾಸಿಗಳಲ್ಲದವರು, ಈ ದೇಶದಲ್ಲಿ ವಾಸಿಸುತ್ತ ಬಂದಿದ್ದೀರಿ.

ಮಾನ್ಯರೆ, ಈ ಸಲಹಾ ಸಮಿತಿಯಲ್ಲಿ ನಡೆದಿರುವ ವಿಲೇವಾರಿ ಮತ್ತು ಹಂಚಿಕೆಯ ಬಗ್ಗೆ ಪ್ರಸ್ತಾವ ಮತ್ತು ಅನುಮೋದಕರು ತಿಳಿಸಿದ್ದಾರೆ. ಇದು ನಿರ್ದಿಷ್ಟವಾಗಿ ಬುಡಕಟ್ಟು ಜನಾಂಗದ ಅಳಿವು ಉಳಿವಿನ ಪ್ರಶ್ನೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ನಾನು ಅಭಿನಂದಿಸುತ್ತೇನೆ. ಸಂಖ್ಯಾತ್ಮಕವಾಗಿ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾನಗಳನ್ನು ಪಡೆದ, ಅಲ್ಪಸಂಖ್ಯಾತ ಕೋಮಿನವರಿಗೂ ನನ್ನ ಅಭಿನಂದನೆಗಳು. ಅದು ನಿರ್ವಿವಾದ. ಸಂಖ್ಯೆಗನುಗುಣವಾಗಿ, ಸಿಖ್ಖರು, ಕ್ರೈಸ್ತರು, ಆಂಗ್ಲೋ ಇಂಡಿಯನ್ನರು ಮತ್ತು ಪಾರಸಿಕರು ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾನಗಳನ್ನು ಪಡೆದಿದ್ದಾರೆ. ಅದಕ್ಕಾಗಿ ನಾನು ಅವರ ಬಗ್ಗೆ ಅಸೂಯೆ ಪಡುತ್ತಿಲ್ಲ. ಆದರೆ ಅವರು ಅಗತ್ಯಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಪಡೆದಿರುವಾಗ ನಮ್ಮವರೆ ಆದ ರಾಷ್ಟ್ರದ ಅಸಲಿ ಪ್ರಾಚೀನ ಜನಾಂಗವಾದ ನಮ್ಮ ವಿಷಯಕ್ಕೆ ಬಂದಾಗ, ವಸ್ತುಸ್ಥಿತಿಯೇ ಬೇರೆ. ಆದರೆ ನಾನು ಗೊಣಗುತ್ತಿಲ್ಲ, ನನ್ನ ಉದ್ದೇಶದ ಮಿತಿಯೊಳಗೆ ಪಂಡಿತ್‌ಜೀ ಒಬ್ಬರೆ ಸಾಕು. ಆದರೆ ಅವರು ಸದಸ್ಯರಲ್ಲ. ಪಂಡಿತ್ ಜವಾಹರ್‌ಲಾಲ್ ನೆಹರು ಅವರಿಗೆ, ಪ್ರತಿಯೊಬ್ಬ ಬುಡಕಟ್ಟು ನಿವಾಸಿಯ ಭವಿಷ್ಯವನ್ನು ವಹಿಸಿಕೊಡ ಬಯಸುತ್ತೇವೆ. ಆ ಜವಾಬ್ದಾರಿಯನ್ನು ನನಗಿಂತ ಅವರ ಮೇಲೇ ಹೊರಿಸಲು ಬಯಸುತ್ತೇವೆ. ನಾವು ಸಂಖ್ಯೆಯನ್ನು ಅವಲಂಬಿಸಿಲ್ಲವೆಂಬುದನ್ನು ನಿಮಗೆ ಸ್ಪಷ್ಟ ಪಡಿಸುತ್ತಿದ್ದೇವೆ. ಎಂದರೆ ಸಲಹಾ ಸಮಿತಿಯ ಚುನಾವಣೆಯಲ್ಲಿ ನಮ್ಮ ಪರ ಬೀಳುವ ಮತಗಳ ಸಂಖ್ಯೆಯನ್ನು ನಾವು ಅವಲಂಬಿಸಿಲ್ಲ. ನಾವು ಇದುವರೆಗೆ ಅಸ್ಪಷ್ಟತೆಗೆ ಸಿಲುಕಿದ್ದೇವೆ. ಮಾನ್ಯ ಅಧ್ಯಕ್ಷರೆ, ನಮ್ಮ ಹಕ್ಕು ಸ್ಥಾಪನೆಯ ಸಲುವಾಗಿ ನಮ್ಮ ಕ್ಷೇಮ, ನಮಗೆ ದೊರಕದೆ ಉಳಿದಿರುವುದರ ಬಗ್ಗೆ ನಿಮ್ಮ ಬಳಿಗೋ, ಸರ್ದಾರ್ ವಲ್ಲಭಭಾಯಿ ಪಟೇಲರ ಬಳಿಗೋ ನಿಯೋಗವನ್ನು ಕೊಂಡೊಯ್ಯಲಿಲ್ಲ. ಈ ಸದನದ ಮತ್ತು ಸಲಹಾ ಸಮಿತಿಯ ವಿವೇಚನೆಗೆ ಬಿಡುತ್ತೇನೆ; ಕಡೆಗೂ ೬ ಸಾವಿರ ವರುಷಗಳ ನಮ್ಮ ಯಾತನೆಯನ್ನು ನೀಗಿಸುವ ಜವಾಬ್ದಾರಿಯನ್ನು ಅವು ಹೊರುವುವೆಂದು ಆಶಿಸುತ್ತೇನೆ. ಒಮ್ಮೆ, ನಾನು ಬೇರೊಂದೆಡೆ, ಭಾರತ ದೇಶದ ಒಂದು ನಿರ್ದಿಷ್ಟ ಪಂಗಡಕ್ಕೆ ಅತಿಯಾದ ಮಾನ್ಯತೆ ದೊರೆಯುತ್ತಿದೆ ಎಂದು ಹೇಳಿದ್ದೆ. ಆ ಪಂಗಡ ನನ್ನ ಟೀಕೆಗಳಿಗೆ ಆಕ್ಷೇಪವೆತ್ತಿತ್ತು. ಈ ಸಲಹಾ ಸಮಿತಿಯಲ್ಲಿ ಅಥವಾ ಬೇರೆಲ್ಲಿಯಾದರೂ ಸಿಖ್ಖರಿಗೆ ೬೦ ಸ್ಥಾನಗಳು ಲಭಿಸಿದರೆ ಚಿಂತೆಯಿಲ್ಲ. ನಾನು ಅವರನ್ನು ಅಭಿನಂದಿಸುತ್ತೇನೆ. ಪಂಡಿತ್ ಗೋವಿಂದವಲ್ಲಭ ಪಂತರು ಹೇಳಿದಂತೆ, ಅಲ್ಪಸಂಖ್ಯಾತರ ಪ್ರಶ್ನೆಯನ್ನು ಉತ್ಪ್ರೇಕ್ಷಿಸಲಾಗದು ಎಂದು ತಿಳಿಸಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷಕ್ಕೆ ನಮ್ಮ ಧನ್ಯವಾದಗಳು. ಆದರೆ ಬುಡಕಟ್ಟು ಜನಾಂಗದವರ ಪ್ರಶ್ನೆ ಉತ್ಪ್ರೇಕ್ಷಿತವಾದುದೆ? ಅವರ ಸ್ಥಾನಮಾನಗಳನ್ನು ಅತಿಯಾಗಿ ಪುರಸ್ಕರಿಸಲಾಗಿದೆ ಎಂದು ತಾವು ಪ್ರಾಮಾಣಿಕವಾಗಿ ಹೇಳುವಿರಾ? ನಾವು ಇನ್ನೂ ಹೆಚ್ಚಿನ ಸ್ಥಾನಗಳಿಗೆ ಬೇಡಿಕೆ ಇಡುತ್ತಿಲ್ಲ. ನಾನು ಯಾವುದೇ ತಿದ್ದುಪಡಿಯನ್ನು ಪ್ರಸ್ತಾವಿಸಿಲ್ಲ. ಮುಂದೆಯೂ ನಾನು ಯಾವೊಂದೂ ತಿದ್ದುಪಡಿಯನ್ನು ಪ್ರಸ್ತಾವಿಸುವುದಿಲ್ಲ. ಆದರೆ ಈ ಸದನದ, ಸಾಧ್ಯವಾದರೆ ಈ ರಾಷ್ಟ್ರದ ಗಮನಕ್ಕೆ ತರಬಯಸುವುದಿಷ್ಟೆ; ನಾವು ನಮ್ಮನ್ನು ಪರೀಕ್ಷೆಗೆ ಒಡ್ಡಿದ್ದೇವೆ. ಇದುವರೆಗೆ, ಎಲ್ಲವೂ ಬ್ರಿಟಿಷರಿಂದಲೆ ಆದುದೆಂದು ಹೇಳುತ್ತಿದ್ದುದು, ಸುಲಭವಾಗಿತ್ತು. ಬ್ರಿಟಿಷರಿಂದಲೆ ನಿಮ್ಮ ಪ್ರದೇಶ ಭಾಗಶಃ ಯಾ ಪೂರ್ಣ ಹೊರಗುಳಿದ ಪ್ರದೇಶವಾಗಿತ್ತು. ನೀವು ಮೃಗಾಲಯದೊಳಗೆ ಇಟ್ಟಂತೆ ಆಗಿದ್ದಿರಿ. ಈಗ ನೀವು, ನಿಮ್ಮ ವರ್ತನೆ ಬದಲಾಗಿದೆಯೇ? ನಾನು ಈ

ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನನ್ನ ಹೆಸರು ಪಟ್ಟಿಯಲ್ಲಿದೆ. ಹಾಗಿರುವಾಗ, ಅದರಲ್ಲಿ ಬುಡಕಟ್ಟು ಜನಾಂಗದ ಯಾವ ಮಹಿಳೆಯ ಹೆಸರೂ, ಇಲ್ಲವೆಂದು ಬೆಟ್ಟುಮಾಡಿ ತೋರುವುದು ನನ್ನ ಜವಾಬ್ದಾರಿ, ಸದಸ್ಯರನ್ನು ಆಯ್ಕೆ ಮಾಡುವವರಿಗೆ, ಈ ಆಲೋಚನೆ ಹೊಳೆಯಲೇ ಇಲ್ಲ. ಇದು ಹೇಗಾಯಿತು? ಸಲಹಾ ಸಮಿತಿಯಲ್ಲಿ ಬುಡಕಟ್ಟು ಜನಾಂಗದ ಮಹಿಳೆಯ ಹೆಸರಿಲ್ಲ. ಆಕೆಯ ಹೆಸರು ಸೇರಿಸಬೇಕೆಂಬುದು ನನ್ನ ವಾದವಲ್ಲ. ಆದರೆ ಈ ಬಗ್ಗೆ ಗಂಭೀರವಾದ ಪರಿಶೀಲನೆ ನಡೆದಿಲ್ಲವೆಂಬುದು ಗಮನಾರ್ಹ. ಅಂತೆಯೇ, ಹದಿಮೂರೋ, ಇನ್ನೆಷ್ಟೋ ಸಂಖ್ಯೆಯನ್ನು ಗೊತ್ತು ಪಡಿಸಲಾಗಿದೆ. (ನಾನಿದನ್ನು ಪುನರುಚ್ಚರಿಸುತ್ತೇನೆ); ಇದು ನನಗೆ ಒಪ್ಪಿಗೆ. ಹೆಚ್ಚಿಗೆ ಹೇಳಬಯಸುವುದಿಲ್ಲ. ಆದರೆ ಈ ಸಂಖ್ಯೆಯ ಸೂಚನೆಯ ಹಿಂದಣ ಮೌಢ್ಯವನ್ನು ನಾನು ಬಯಲಿಗೆಳೆಯಲು ಬಯಸುತ್ತೇನೆ. ಬುಡಕಟ್ಟು ಜನಾಂಗದ ಸದಸ್ಯರ ನಾಮನಿರ್ದೇಶನದಲ್ಲೂ ಮೌಢ್ಯ ವ್ಯಕ್ತವಾಗುತ್ತದೆ. ನಾನಿಲ್ಲಿ ಕಚ್ಚಾಟಕ್ಕೆ ನಿಂತಿಲ್ಲ. ಭಾರತಾದ್ಯಂತ ಬುಡಕಟ್ಟು ಜನಾಂಗದ ಸಂಖ್ಯಾಬಲವನ್ನು ನಿರ್ಧರಿಸುವ ರೀತಿ ನೋಡಿ. ಪ್ರತಿ ದಶವಾರ್ಷಿಕ ಜನಗಣತಿಯಲ್ಲೂ ಪ್ರಮಾದ ಜರುಗಿದೆ. ಅವರ ಇತ್ತೀಚಿನ ಸಂಖ್ಯೆ ೨೫೪ ಲಕ್ಷ. ನಾನು ಅದನ್ನು ಅಂಗೀಕರಿಸುತ್ತೇನೆ. ಅದರಲ್ಲಿ ನಾವು ಗಮನಿಸಿದಂತೆ, ಮುಂಡಾ ಮಾತನಾಡುವ ಬುಡಕಟ್ಟು ಜನಾಂಗದವರು ಬಹುಪಾಲು ಸೇರಿದ್ದಾರೆ. ಅವರ ಸಂಖ್ಯೆಗೆ ೧೯೪೧ರ ಜನಗಣತಿಯ ಸಂಖ್ಯೆ ಸೇರಿಸಿದರೆ ೪೩ ಲಕ್ಷ ಆಗುತ್ತದೆ. ಗಾತ್ರದಲ್ಲಿ ನಂತರದ ಸ್ಥಾನ ಗಾಂಡ್ಸ್ ಜನಾಂಗಕ್ಕೆ. ಈಗ ನಮಗೆ ಗಾಂಡ್ ಜನಾಂಗಕ್ಕೆ ಸೇರಿದ ಒಬ್ಬರು ಸದಸ್ಯರ ಪ್ರಾತಿನಿಧ್ಯ ದೊರೆತಿದೆ. ಒಬ್ಬರಿದ್ದಾರೆ ಸಂತೋಷ. ಅವರ ನಂತರ ಭಿಲ್ಲರು, ೨೩ ಲಕ್ಷ. ಈ ಸಮಿತಿಯಲ್ಲಿ ಭಿಲ್ಲರ ಪ್ರಾತಿನಿಧ್ಯವಿಲ್ಲ. ಹಾಗೆಯೇ ಮುಂದುವರೆದರೆ ಆರ್ಯೋನ್ಸ್. ೧೧ ಲಕ್ಷ; ಸಮಿತಿಯಲ್ಲಿ ಆರ್ಯೋನ್‌ನ ಪ್ರಾತಿನಿಧ್ಯವಿಲ್ಲ. ಮಾನ್ಯ ಅಧ್ಯಕ್ಷರೆ, ವೇಳೆ ಅಮೂಲ್ಯ. ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಬೇರೊಂದೆಡೆ ಹೇಳಿದಂತೆ, ನಾವು ಕಳೆಯುವ ಪ್ರತಿಯೊಂದು ದಿನಕ್ಕೂ ಸುಮಾರು ೧೦ ಸಾವಿರ ರೂಪಾಯಿ ತರಬೇಕಾಗುತ್ತೆ. ೨೫ ದಶಲಕ್ಷ ಬುಡಕಟ್ಟು ಜನಾಂಗದವರ ಜೀವಕ್ಕೆ, ದಿನಂಪ್ರತಿ ೧೦ ಸಾವಿರ ರೂಪಾಯಿಗಿಂತ ಹೆಚ್ಚಿನ ಮೌಲ್ಯವಿರುತ್ತದೆ. ತಾವು ಅನುಮತಿ ಇತ್ತರೆ, ನನಗೆ ಮಾತನಾಡಲಿಕ್ಕೆ ಇದೊಂದು ಸಂದರ್ಭ. ನಾನು ಗಮನಿಸಿದಂತೆ, ಯಾವ ಕಾರಣಕ್ಕೋ ಏನೋ, ಮೂಲಭೂತ ಹಕ್ಕುಗಳ ಸಮಿತಿಯಲ್ಲಿ ಬುಡಕಟ್ಟು ಜನಾಂಗದ ಸದಸ್ಯನ ಪ್ರಾತಿನಿಧ್ಯವಿಲ್ಲ.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** : ಅದಕ್ಕೆಂದು ಪ್ರತ್ಯೇಕ ಸಮಿತಿ ಇಲ್ಲ. ಇರುವುದೊಂದೆ ಸಮಿತಿ.

**ಶ್ರೀ ಜೈಪಾಲ್ ಸಿಂಗ್** : ನಾಗರಿಕರ ಮೂಲಭೂತ ಹಕ್ಕುಗಳನ್ನು ಪರಿಶೀಲಿಸಲು, ಕೆಲವರನ್ನು ಸಮಿತಿಯಲ್ಲಿ ನೇಮಕ ಮಾಡುವಂತ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದೀರಿ.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** : ಇಲ್ಲ, ಅದು ಸಲಹಾ ಸಮಿತಿಯನ್ನು ಅವಲಂಬಿಸಿರುತ್ತೆ. ಅದು ತನ್ನಿಚ್ಛೆಯಂತೆ ಉಪಸಮಿತಿಗಳನ್ನು ರಚಿಸಬಹುದು.

**ಶ್ರೀ ಜೈಪಾಲ್ ಸಿಂಗ್** : ಒಳ್ಳೆಯದು. ನಾನದನ್ನು ಒಪ್ಪುತ್ತೇನೆ. ನಾನು ಹೇಳಿದಂತೆ, ಬುಡಕಟ್ಟು ಜನಾಂಗದ ಸಮೂಹವನ್ನು ಸೇರಿಸಲು ಬೇರಾವ ಮಾರ್ಗವೂ ಇಲ್ಲ. ೧೯೪೧ರ ಜನಗಣತಿಯಂತೆ ೧೭೭ ಬುಡಕಟ್ಟು ಪಂಗಡಗಳನ್ನು, ಪಟ್ಟಿ ಮಾಡಲಾಗಿದೆ. ಆ ಕಾರಣ, ೧೭೭ ಜನ ಸದಸ್ಯರನ್ನು ಸೇರಿಸುವುದು ಅಸಾಧ್ಯ. ಆದರೆ, ನಮಗೆ ನಿಗದಿಯಾದ ಸಂಖ್ಯೆಯನ್ನು ಸ್ವಾತಂತ್ರ್ಯ ದಿನದಂದು ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಹೇಳಿದಂತೆ ಸಮಸ್ಯೆಯನ್ನು ವಿವೇಚನಾಯುಕ್ತವಾಗಿಯೂ ಭಾವನಾತ್ಮಕವಾಗಿಯೂ ಪರಿಗಣಿಸಬೇಕೆಂಬುದನ್ನು, ಸದನಕ್ಕೆ ತಿಳಿಸುವುದು, ನನ್ನ ಜನಾಂಗದ ಪರವಾಗಿ ನನ್ನ ಹೊಣೆ ಎಂದು ಭಾವಿಸುತ್ತೇನೆ. ಸದನಕ್ಕೆ ಇದು ಪರೀಕ್ಷಾ ಕಾಲ: ನೋಡುವ, ಏನಾಗುತ್ತದೋ.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** : ಎಲ್ಲವೂ ಒಳ್ಳೆಯದೆ ಆಗುತ್ತದೆ.

**ಮಾನ್ಯ ಅಧ್ಯಕ್ಷರು :** ಕಾರ್ಯಕ್ರಮ ಪತ್ರದ ಇತರ ತಿದ್ದುಪಡಿಗಳ ಬಗ್ಗೆ, ಕಿಂಚಿತ್ ತಪ್ಪು ಗ್ರಹಿಕೆ ಇತ್ತು. ಬೇರಾವ ತಿದ್ದುಪಡಿಯೂ ಇರಲಾರದೆಂದು ನಾನು ಭಾವಿಸಿದ್ದೆ. ಇಲ್ಲಿ ಇನ್ನಷ್ಟು ತಿದ್ದುಪಡಿಗಳು ನನ್ನ ಮುಂದಿವೆ.

ಮಿಕ್ಕೆಲ್ಲ ತಿದ್ದುಪಡಿಗಳನ್ನು ಪ್ರಸ್ತಾವಿಸಬಹುದು.

**ಶ್ರೀ ಕೆ.ಎಂ. ಮುನ್ಷಿ :** 'ಬಿ' ಅಥವಾ 'ಸಿ' ಗೆ?

**ಮಾನ್ಯ ಅಧ್ಯಕ್ಷರು :** ಇಡೀ ನಿಲುವಳಿಗೆ ಸಂಬಂಧಿಸಿದ ಎಲ್ಲ ತಿದ್ದುಪಡಿಗಳು.

**ಶ್ರೀ ಕೆ.ಎಂ. ಮುನ್ಷಿ :** ನನ್ನ ಹೆಸರಿನಲ್ಲಿರುವ ಮುಂದಿನ ತಿದ್ದುಪಡಿ ಹೀಗಿದೆ:

"ನಿಲುವಳಿಯ ೧ನೇ ಖಂಡಿಕೆಯ (ಬಿ)(೧) ಉಪಖಂಡಿಕೆಯನ್ನು ಬಿಡಬೇಕು"

ಆ ಉಪಖಂಡಿಕೆ ಹೀಗಿದೆ:

"ಅಧ್ಯಕ್ಷರಿಗೆ ಸೂಕ್ತವೆನಿಸಿದಂತೆ ೭ ಸದಸ್ಯರ ವರೆಗೆ ಸಭೆಯು ಚುನಾಯಿಸಬಹುದು"

ಅಧ್ಯಕ್ಷರಿಂದ ಮಾಡಲ್ಪಡುವ ನಾಮನಿರ್ದೇಶನವನ್ನು ೭ಕ್ಕೆ ಹೆಚ್ಚಿಸಲು ನಂತರ ಅವಕಾಶ ಕಲ್ಪಿಸಲಾಗಿರುವುದು ಸಭೆಯ ಗಮನಕ್ಕೆ ಬಂದಿದೆ. ಎಂದರೆ ೯ರಿಂದ ೨೨ಕ್ಕೆ ಹೆಚ್ಚಿಸಲು ಅವಕಾಶವಿದೆ. ಆದುದರಿಂದ, ನಿಲುವಳಿಯ ೧ನೇ ಖಂಡಿಕೆಯ 'ಸಿ' ಉಪಖಂಡಿಕೆಗೆ ಸಂಬಂಧಿಸಿದಂತೆ ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ಸಂದರ್ಭದಲ್ಲಿ ಪ್ರಸ್ತಾವಿಸುತ್ತೇನೆ.

"ನಿಲುವಳಿಯ ೧ನೇ ಖಂಡಿಕೆಯ 'ಸಿ' ಉಪಖಂಡಿಕೆಯಲ್ಲಿ "೨೨" ಎಂಬ ಸಂಖ್ಯೆಯನ್ನು"೯"ಕ್ಕೆ ಬದಲಾಗಿ ಪ್ರತಿಯೋಜಿಸಬೇಕು. "ಅವರಲ್ಲಿ ೭ ಮುಸ್ಲಿಮರು ಮದರಾಸು, ಬಾಂಬೆ, ಸಂಯುಕ್ತ ಪ್ರಾಂತ್ಯ, ಬಿಹಾರ್, ಕೇಂದ್ರೀಯ ಪ್ರಾಂತ್ಯಗಳು, ಒರಿಸ್ಸ ಮತ್ತು ಅಸ್ಸಾಂ ಪ್ರಾಂತ್ಯಗಳನ್ನು ಪ್ರತಿನಿಧಿಸುತ್ತಾರೆ" ಎಂಬ ಪದಗಳನ್ನು ಸೇರಿಸಬೇಕು".

ಇದರ ಉದ್ದೇಶವೇನೆಂದರೆ ಹಿಂದೂ ಬಹುಸಂಖ್ಯಾತರ ಪ್ರಾಂತ್ಯಗಳೆಂದೂ, (ಮುಸ್ಲಿಮ್, ಅಲ್ಪಸಂಖ್ಯಾತ ಪ್ರಾಂತ್ಯವೆಂದೂ) ಕರೆಯಲ್ಪಡುವ ಪ್ರಾಂತ್ಯಗಳಲ್ಲಿ, ಮುಸ್ಲಿಮ್ ಅಲ್ಪಸಂಖ್ಯಾತರನ್ನು ಸಮಿತಿಗಳೆ ಚುನಾಯಿಸಬೇಕಾಗುತ್ತದೆ. ಅದು ಮೊದಲಿನ ಆಲೋಚನೆಯಾಗಿತ್ತು. ಆದರೆ ಪ್ರಾರಂಭಿಕ ಅಧಿವೇಶನವು ತಾತ್ಕಾಲಿಕವಾಗಿ ಮುಂದೂಡಲ್ಪಡುವುದರಿಂದ, ಮುಸ್ಲಿಮ್ ಲೀಗ್ ಪ್ರವೇಶಿಸಿದರೆ ಆಗ ಮತ್ತೆ ೭ ಸದಸ್ಯರ ಚುನಾವಣೆಗಾಗಿ ಮತ್ತೆ ಪ್ರಾರಂಭಿಕ ಸಭೆಯನ್ನು ಕರೆಯುವುದು ಕಷ್ಟವಾಗಬಹುದು. ಆ ಕಾರಣದಿಂದ ನಾನು ಈ ತಿದ್ದುಪಡಿಯನ್ನು ಪ್ರಸ್ತಾವಿಸುತ್ತಿದ್ದೇನೆ. ಪ್ರಾರಂಭಿಕ ಅಧಿವೇಶನವನ್ನು ಏಪ್ರಿಲ್‌ವರೆಗೆ ಅಥವಾ ಬೇರಾವ ತಾರೀಖಿನವರೆಗೆ ಮುಂದೂಡಿದರೆ, ಈ ನಡುವೆ ಮುಸ್ಲಿಮ್ ಲೀಗ್ ಪ್ರವೇಶಿಸಿದರೆ, ಏಳು ಹಿಂದೂ ಬಹುಸಂಖ್ಯಾತ ಪ್ರಾಂತ್ಯಗಳನ್ನು ಪ್ರತಿನಿಧಿಸುವ ೭ ಮುಸ್ಲಿಮ್ ಸದಸ್ಯರನ್ನು ಅಧ್ಯಕ್ಷರು ನಾಮನಿರ್ದೇಶನ ಮಾಡಬಹುದು. ನಂತರ ಅವರು ಸಮಿತಿಗೆ ಸೇರಬಹುದು. ಅವರನ್ನು ಸಭೆ ಅಂಗೀಕರಿಸಬಹುದೆಂದು ನನ್ನ ನಿವೇದನೆ. ಆದುದರಿಂದ ಎಲ್ಲ ತಿದ್ದುಪಡಿಗಳನ್ನು ಏಕಕಾಲಕ್ಕೆ ಪ್ರಸ್ತಾವಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು :** ಬೇರೇನಾದರೂ ತಿದ್ದುಪಡಿ ಇದೆಯೇ ಖಂಡಿಕೆ ೨? ಯಾವುದೂ ಇಲ್ಲ. ಖಂಡಿಕೆ೩?

ನನಗೆ ತಿಳಿದಂತೆ, ಸರ್. ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಒಂದು ತಿದ್ದುಪಡಿ ಮಂಡಿಸಲಿದ್ದಾರೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** (ಮದರಾಸ್–ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ಪ್ರಕ್ರಿಯಾ ನಿಯಮ ೪೮ರ ಅಡಿಯಲ್ಲಿ, ಒಂದು ಸಮಿತಿಯ ರಚನೆಗೆ, ಪ್ರಸ್ತಾವಿಸುವ ಪ್ರತಿಯೊಂದು ನಿಲುವಳಿಯಲ್ಲೂ, ಸಮಿತಿಯ ಸಭೆ ಸೇರಲು ಕೋರಂ ಎಷ್ಟಿರುವುದು ಅಗತ್ಯವೆಂಬುದನ್ನು ನಮೂದಿಸಿರಬೇಕು. ಈಗ ಪ್ರಸ್ತಾವಿಸಿರುವ ನಿಲುವಳಿಯಲ್ಲಿ ಇದರ ನಮೂದನೆಯಾಗಿಲ್ಲ. ಅದೊಂದು ಕಡ್ಡಾಯ ಉಪಬಂಧ. ಈ ಲೋಪ ನಿವಾರಣೆಗೆ, ೨೬ನೇ ನಿಯಮದ ಅಡಿಯಲ್ಲಿ, ನೂತನ ತಿದ್ದುಪಡಿಯನ್ನು ಪ್ರಸ್ತಾವಿಸುತ್ತಿದ್ದೇನೆ.

ಇದಕ್ಕಾಗಿ ನಾನು ಪೂರ್ವಭಾವಿ ನೋಟೀಸು ನೀಡಿಲ್ಲ–

ತಿದ್ದುಪಡಿ ಹೀಗಿದೆ:

"ನಿಲುವಳಿಯ ೩ನೇ ಖಂಡಿಕೆಯ ನಂತರ, ಮುಂಬರುವಂತೆ ೩(ಎ)ನೇ ಖಂಡಿಕೆಯಾಗಿ ಪ್ರಕ್ಷಿಪ್ತಗೊಳಿಸಬೇಕು; ಅದೇಂದರೆ "ಸಮಿತಿ ಅಥವಾ ಉಪಸಮಿತಿಗೆ, ಆಯಾ ಕಾಲದಲ್ಲಿ ಸಭೆ ಸೇರಲು, ಸಂಬಂಧಿತ ಸಮಿತಿಯ ಸಂಖ್ಯಾಬಲದ ಮೂರನೆ ಒಂದು ಭಾಗ ಕೋರಂ ಇರಬೇಕು"

**ಮಿ। ಕೆ.ಎಂ. ಮುನ್ಷಿ :** ನಾನು ೪ನೇ ಖಂಡಿಕೆಗೆ ಒಂದು ತಿದ್ದುಪಡಿಯನ್ನು ಪ್ರಸ್ತಾವಿಸಬೇಕಿದೆ. ಈಗಿನಂತೆ, ೪ನೇ ಖಂಡಿಕೆ ಹೀಗಿದೆ:

"ಸಲಹಾ ಸಮಿತಿಯು, ಸಂವಿಧಾನ ರಚನಾಸಭೆಗೆ ಮೂರು ತಿಂಗಳ ಒಳಗೆ ಅಂತಿಮ ವರದಿಯನ್ನು ಸಲ್ಲಿಸಬೇಕು ಹಾಗೂ ಮಧ್ಯಾಂತರ ವರದಿಯನ್ನು ಕಾಲಕಾಲಕ್ಕೆ ಸಲ್ಲಿಸುತ್ತಿರಬಹುದು"

ನನ್ನ ತಿದ್ದುಪಡಿ ಹೀಗಿದೆ:

೪ನೇ ಖಂಡಿಕೆಯಲ್ಲಿ "ಮೂರು ತಿಂಗಳು" ಮತ್ತು "ಮತ್ತು" ಎಂಬ ಪದಗಳ ನಡುವೆ "ಈ ನಿಲುವಳಿಯ ತಾರೀಖಿನಿಂದ" ಎಂಬ ಪದವನ್ನು ಸೇರಿಸಬೇಕು. ಮತ್ತೆ, "ವೇಳೆ/ಸಮಯ" ಪದದ ನಂತರ ಅಲ್ಪವಿರಾಮವನ್ನು, ಪೂರ್ಣವಿರಾಮಕ್ಕೆ ಬದಲಾಗಿ ಪ್ರತಿಯೋಜಿಸಿ" ಆದರೆ, ಮೂಲಭೂತ ಹಕ್ಕುಗಳ ಬಗ್ಗೆ ಮಧ್ಯಾಂತರ (ವರದಿಯನ್ನು) ೬ ವಾರಗಳ ಒಳಗೆ, ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಮಧ್ಯಾಂತರ ವರದಿಯನ್ನು ಆ ದಿನಾಂಕದಿಂದ ಹತ್ತು ವಾರಗಳ ಒಳಗೆ ಸಲ್ಲಿಸಬೇಕು" ಎಂಬ ಪದಗಳನ್ನು ಸೇರಿಸಬೇಕು.

ಮಾನ್ಯರೆ, ತಿದ್ದುಪಡಿಯಾದ ೪ನೇ ಖಂಡ ಹೀಗಿದೆ:

"ಸಲಹಾ ಸಮಿತಿಯು ತನ್ನ ಅಂತಿಮ ವರದಿಯನ್ನು ಕೇಂದ್ರ ಸಂವಿಧಾನ ರಚನಾಸಭೆಗೆ, ನಿಲುವಳಿಯ ದಿನಾಂಕದಿಂದ ಮೂರು ತಿಂಗಳ ಒಳಗೆ ಸಲ್ಲಿಸಬೇಕು. ಆದರೆ, ಮೂಲಭೂತ ಹಕ್ಕುಗಳ ಬಗ್ಗೆ ಮಧ್ಯಂತರ ವರದಿಯನ್ನು ಆರು ವಾರಗಳ ಒಳಗೆ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಮಧ್ಯಂತರ ವರದಿಯನ್ನು ಆ ದಿನಾಂಕದಿಂದ ಹತ್ತು ವಾರಗಳ ಒಳಗೆ ಸಲ್ಲಿಸಬೇಕು."

ಮುಂದಿನ ತಿದ್ದುಪಡಿ ೫ನೇ ಖಂಡಿಕೆಗೆ; ಅದು ಹೀಗಿದೆ: ೫ನೇ ಖಂಡಿಕೆಯಲ್ಲಿ, "ರೀತಿಯಲ್ಲಿ" ಎಂದು ಪ್ರಾರಂಭಿಸುವ ಪದಗಳಿಂದ ಖಂಡಿಕೆಯ ಕೊನೆಯವರೆಗೆ ಇರುವ ಪದಗಳ ಬದಲು ಅಧ್ಯಕ್ಷರಿಂದ ನಾಮನಿರ್ದೇಶನ ರೀತಿಯಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸಬೇಕು.

೫ನೇ ಖಂಡಿಕೆ, ತನ್ನ ಮೂಲರೂಪದಲ್ಲಿ ಹೀಗಿತ್ತು: "ಸಲಹಾ ಸಮಿತಿಯಲ್ಲಿ ಸ್ಥಾನಗಳು ತೆರವಾದೊಡನೆ, ಆ ಸ್ಥಾನಗಳನ್ನು ಮೊದಲು ಭರ್ತಿ ಮಾಡಿದ ರೀತಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು" ಆಕಸ್ಮಿಕ ಸಂದರ್ಭಗಳಲ್ಲಿ ಒಂದಿಷ್ಟು ಖಾಲಿ ಸ್ಥಾನ ಭರ್ತಿ ಮಾಡುವುದು ಇದರ ಉದ್ದೇಶ. ಪ್ರಾರಂಭಿಕ ಅಧಿವೇಶನ ಮುಂದೂಡಲ್ಪಟ್ಟಾಗ ಸಮಿತಿಯು ಕಾರ್ಯೋನ್ಮುಖವಾಗುತ್ತದೆ. ಒಂದು ವೇಳೆ ಈ ನಡುವೆ ಸ್ಥಾನ ತೆರವಾದರೆ, ಮುಂದಿನ ಸಂವಿಧಾನ ರಚನಾಸಭೆಯವರೆಗೆ ಖಾಲಿ ಸ್ಥಾನ ಭರ್ತಿ ಮಾಡುವುದು ಕಷ್ಟವಾದೀತು. ಆದುದರಿಂದ ಈ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡುವುದು ಸೂಕ್ತ; ಸ್ಥಾನ ತೆರವಾದೊಡನೆ ಅವರು ಅದನ್ನು ತುಂಬಬಹುದು. ಮಾನ್ಯರೆ, ಇವು ನಾನು ಪ್ರಸ್ತಾವಿಸಬೇಕೆಂದಿರುವ ತಿದ್ದುಪಡಿಗಳು.

**ಶ್ರೀ ಎಫ್.ಆರ್. ಅಂಥಣಿ :** (ಬಂಗಾಳ–ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ನನಗೆ ಈ ಚರ್ಚೆಯಲ್ಲಿ ಮಧ್ಯೆ ಪ್ರವೇಶಿಸಲು ಸುತರಾಂ ಇಷ್ಟವಿಲ್ಲ. ದುರದೃಷ್ಟವಶಾತ್ ಹಿಂದಿನ ಭಾಷಣಕಾರರೊಬ್ಬರ ಟೀಕೆ ನನ್ನನ್ನು ಪ್ರಚೋದಿಸಿತು. ಆಂಗ್ಲೋ ಇಂಡಿಯನ್ನರಿಗೆ ಅಗತ್ಯಕ್ಕಿಂತ ಮಿಗಿಲಾಗಿ ಪ್ರಾತಿನಿಧ್ಯ ನೀಡಲಾಗಿದೆ ಎಂದು ಅವರು ಆರೋಪಿಸಿದರು. ನಾನೊಂದು ಕೋಮಿನ ಮುಖಂಡನಾದರೂ, ಜಾತೀಯ ಭ್ರಮೆಗಳ ಬೆನ್ನಟ್ಟಿ ಹೋಗುವಂಥವನಲ್ಲ. ಅದರಲ್ಲಿ ನನಗೆ ಆಸಕ್ತಿ ಇಲ್ಲ. ಕೋಮುವಾದದ ಬೀದಿನಾಯಿ ಕಿತ್ತಾಟವೆಂದರೆ ನನಗೆ

ಮತ್ತಷ್ಟು ನಿರಾಸಕ್ತಿ. ರಾಜ್ಯಪತ್ರ ಮತ್ತು ಅದರ ಕರ್ತೃಗಳ ನೈಜ ಉದ್ದೇಶದ ಬಗ್ಗೆ, ಸದನದ ಕೆಲವು ಮಂದಿಯಲ್ಲಿ ತಪ್ಪು ಕಲ್ಪನೆ ಇದ್ದಂತೆ ತೋರುತ್ತದೆ. ಅಲ್ಪಸಂಖ್ಯಾತರಿಗಾಗಿ ಒಂದು ಸಲಹಾ ಸಮಿತಿಯ ಅಗತ್ಯವೇ ಇಲ್ಲವೆಂದಿದ್ದರೆ, ಆ ಭಾವನೆಯನ್ನು ನಾನು ಪುರಸ್ಕರಿಸುತ್ತೇನೆ. ಆದರೆ ಅಲ್ಪಸಂಖ್ಯಾತರಿಗೆಂದು ಒಂದು ಸಮಿತಿ ರಚನೆಯಾದಾಗ, ಇತರ ಅಲ್ಪಸಂಖ್ಯಾತರು ತಮ್ಮ ಹಕ್ಕೊತ್ತಾಯಕ್ಕೆ ಕಟ್ಟುಬಿದ್ದಿದ್ದಾರೆ–ಅದು ಆರೋಪಿತವೋ ನೈಜ ಹಕ್ಕೋ ಏನೇ ಆಗಿರಲಿ–ಕೆಲವು ಅಲ್ಪಸಂಖ್ಯಾತರು ಅದರಲ್ಲೂ ಸಣ್ಣ ಪ್ರಮಾಣದಲ್ಲಿರುವವರು ಆತ್ಮರಕ್ಷಣೆಗಾಗಿ, ಒಂದಿಷ್ಟು ಪ್ರಾತಿನಿಧ್ಯವನ್ನು ಬೇಡಬೇಕಾಗುತ್ತದೆ. ಶ್ರೀ ಜೈಪಾಲ್ ಸಿಂಗ್ ಅವರ ಒಂದು ಮಾತನ್ನು ನಾನು ಅನುಮೋದಿಸುತ್ತೇನೆ. ಅದೇಂದರೆ, ಪಂಡಿತ್ ಜವಾಹರ್‌ಲಾಲ್ ನೆಹರು ಅವರಂತಹ ಒಬ್ಬ ವರ್ಚಸ್ವಿ ನೇತಾರನ ಕೈಗೆ ತಮ್ಮ ಹಿತಾಸಕ್ತಿಗಳನ್ನು ಒಪ್ಪಿಸುವುದಕ್ಕೆ ಬಹುತೇಕ ಅಲ್ಪಸಂಖ್ಯಾತರು ಸಂತೋಷದಿಂದ ಸಿದ್ಧರಿದ್ದಾರೆ ಎಂಬುದಾಗಿ. ದುರದೃಷ್ಟವಶಾತ್, ಇಂತಹ ವಿಷಯಗಳು ಅಂತಹ ಉನ್ನತ ಮಟ್ಟದಲ್ಲಿ ನಿರ್ಧರಿಸಲ್ಪಡುತ್ತಿಲ್ಲ. ಈ ದೇಶದಲ್ಲಿ ಎಲ್ಲರಿಗೂ ಅವರಿಗಿರುವಂಥ ವರ್ಚಸ್ಸು ಇರಲಾರದು. ದುರದೃಷ್ಟವಶಾತ್, ಜಾತೀಯ ಮನೋಭಾವ ಹಿಂದಿಗಿಂತಲೂ ಇಂದು ಹೆಚ್ಚಾಗುತ್ತಿದೆ. ಲಾಲಸೆ ಹೆಚ್ಚುತ್ತಿದೆ, ಜನರಲ್ಲಿ ದುರಾಗ್ರಹ ಬೆಳೆಯುತ್ತಿದೆ, ಹಾಗಾಗಿ ಅನುಪಾತಾಧಾರಿತ ಪ್ರಾತಿನಿಧ್ಯ ಬೇಡಿಕೆಯ ಗೀಳನ್ನು ಒಂದಷ್ಟು ಅಳಿಸಬೇಕೆಂಬುದು ನನ್ನ ಇಚ್ಛೆ

ಮಾನ್ಯರೆ, ನಾವು ಒಂದು ನಿರ್ದಿಷ್ಟ ರಾಜ್ಯಪತ್ರದ ಬಗ್ಗೆ ಚರ್ಚಿಸುತ್ತಿದ್ದೇವೆ. ಕ್ಯಾಬಿನೆಟ್ ಮಿಷನ್ ಹೇಳಿಕೆಯ ೨೦ನೇ ಖಂಡಿಕೆಯ ಬಗ್ಗೆ ಆಲೋಚಿಸುತ್ತಿದ್ದೇವೆ. ಸರ್ ಸ್ಟಾಫರ್ಡ್ ಕ್ರಿಪ್ಸ್‌ನ ಅಧಿಕೃತ ವಿವರಣೆಯ ಉದ್ದೇಶವನ್ನು ಸ್ಪಷ್ಟ ಪಡಿಸಲಾಗಿತ್ತು. ಸಂಖ್ಯಾತ್ಮಕ ಅನುಪಾತದ ಬಗ್ಗೆ ಅವರಾಗಲಿ, ಕ್ಯಾಬಿನೆಟ್ ಮಿಷನ್ ಆಗಲಿ ಆಸಕ್ತಿ ತೋರಿರಲಿಲ್ಲ. ಈ ರಾಷ್ಟ್ರದಲ್ಲಿ, ಸಂಖ್ಯಾತ್ಮಕ ಅನುಪಾತವೆಂಬುದು ಒಂದು ನೆಚ್ಚಿನ ಘೋಷವಾಕ್ಯವಾಗಿದೆ. ಸಲಹಾ ಸಮಿತಿ ರಚನೆಯಾಗಿರುವುದು, ಅಲ್ಪಸಂಖ್ಯಾತರಿಗೆ ಅವಕಾಶ ಕಲ್ಪಿಸುವುದಕ್ಕಲ್ಲ, ಆದರೆ ಅಲ್ಪಸಂಖ್ಯಾತರ ಸೌಲಭ್ಯಗಳ ಮೇಲೆ ಪರಿಣಾಮ ಬೀರುವ ಸಣ್ಣ ಸಣ್ಣ ಅಲ್ಪಸಂಖ್ಯಾತರಿಗಾಗಿ ಎಂದು ಕ್ರಿಪ್ಸ್ ಅವರು ನಿರ್ದಿಷ್ಟವಾಗಿ ತಿಳಿಸಿದ್ದರು. ಭಾರತೀಯ ಕ್ರೈಸ್ತರು, ಆಂಗ್ಲೋ ಇಂಡಿಯನ್ನರು ಮತ್ತು ಬುಡಕಟ್ಟು ಪ್ರದೇಶದವರಿಗೆ ಪ್ರಾತಿನಿಧ್ಯ ದೊರಕಿಸಿ ಕೊಡಬೇಕೆಂಬುದು ಅವರ (ಕ್ಯಾಬಿನೆಟ್ ಮಿಷನ್‌ನ) ಉದ್ದೇಶವೆಂದು ಅವರು ನಿರ್ದಿಷ್ಟವಾಗಿ ತಿಳಿಸಿದ್ದರು. ಸ್ನೇಹ ಸೌಹಾರ್ದದ ವಾತಾವರಣವನ್ನು ನೆಲೆಗೊಳಿಸಲು, ಅಲ್ಪಸಂಖ್ಯಾತರಿಗೆ ನೀಡಿದ ಪ್ರಾತಿನಿಧ್ಯವನ್ನು ನಾವು ಅಂಗೀಕರಿಸಿದೆವು. ಆದರೆ, ನಮ್ಮ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಕೊಡುವಲ್ಲಿ, ಕ್ಯಾಬಿನೆಟ್ ಮಿಷನ್‌ನ ಉದ್ದೇಶ ಈಡೇರಲಿಲ್ಲವೆಂಬುದನ್ನು ಸ್ಪಷ್ಟ ಪಡಿಸಲಾಗಿತ್ತು. ನಮ್ಮ ಸಮುದಾಯದಲ್ಲಿ ಅಗತ್ಯಕ್ಕಿಂತ ಹೆಚ್ಚು ಪ್ರಾತಿನಿಧ್ಯವಿದೆ ಎಂಬ ಭಾವನೆಯನ್ನು ಸದನದ ಮನಸ್ಸಿನಿಂದ ಹೋಗಲಾಡಿಸಲಿಚ್ಛಿಸುತ್ತೇನೆ. ಸಲಹಾ ಸಮಿತಿಯ ಮೂಲಕ ಅಲ್ಪಸಂಖ್ಯಾತರ ಬಗ್ಗೆ ಕೈಗೊಳ್ಳುವ ನಿರ್ಧಾರದ ಮೇಲೆ ಪ್ರಭಾವ ಬೀರುವಂತೆ ನಿರ್ದಿಷ್ಟ ಸಣ್ಣ ಪ್ರಮಾಣದ ಅಲ್ಪಸಂಖ್ಯಾತರಿಗೆ ಎಂದರೆ ಭಾರತೀಯ ಕ್ರೈಸ್ತರು, ಆಂಗ್ಲೋ ಇಂಡಿಯನ್ನರು ಮತ್ತು ಬುಡಕಟ್ಟು ಪ್ರದೇಶ ನಿವಾಸಿಗಳಿಗೆ ಪ್ರಾತಿನಿಧ್ಯ ದೊರಕಿಸಿ ಕೊಡಬೇಕೆಂಬುದು ಕ್ಯಾಬಿನೆಟ್ ಮಿಷನ್‌ನ ಉದ್ದೇಶವಾಗಿತ್ತು. ಬೇರಾವ ಸಣ್ಣ ಅಲ್ಪಸಂಖ್ಯಾತರ ಹೆಸರು ನಮೂದನೆ ಆಗಿರಲಿಲ್ಲ. ಇತರ ಅಲ್ಪಸಂಖ್ಯಾತರ ಹೆಸರುಗಳನ್ನು ಸೇರಿಸುವುದರಿಂದ ಉದ್ದೇಶ ಈಡೇರಿತೆ, ಎಂಬುದರ ಬಗ್ಗೆ ಈ ಹಂತದಲ್ಲಿ ನಾನು ಪ್ರಸ್ತಾಪಿಸಲು ಇಚ್ಛಿಸುವುದಿಲ್ಲ. ಆದರೆ ಈ ಸೌಲಭ್ಯ ಕಲ್ಪಿಸುವಾಗ ಕ್ಯಾಬಿನೆಟ್ ಮಿಷನ್‌ನ ಮಿದುಳಲ್ಲಿ ಬೇರೇನೋ ಆಲೋಚನೆಗಳಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಅವರ ಮುಂದೆ ವಿಭಿನ್ನ ಅಲ್ಪಸಂಖ್ಯಾತರ ಸಮಸ್ಯೆ ಇತ್ತು. ಗಾತ್ರದಲ್ಲಿ ಸಣ್ಣಗಿದ್ದರೂ, ಅಂತಹ ಅಲ್ಪಸಂಖ್ಯಾತ ವರ್ಗಗಳು, ಸಾಮಾನ್ಯ ರಾಜಕೀಯ ಸಂರಚನೆಯಲ್ಲಿ ತಮ್ಮ ಪ್ರಮುಖ ಆಸಕ್ತಿಗಳನ್ನು ಕಾಯ್ದುಕೊಳ್ಳುವ ಉದ್ದೇಶವನ್ನು ಹೊಂದಿದ್ದವೆಂಬುದು ಕ್ಯಾಬಿನೆಟ್ ಮಿಷನ್‌ಗೆ ಅರಿವಾಯಿತು. ಅಲ್ಪಸಂಖ್ಯಾತರ ಬಗ್ಗೆ ಕೈಗೊಳ್ಳುವ ನಿರ್ಧಾರದ ಮೇಲೆ ಪ್ರಭಾವ ಬೀರುವ ಸಲುವಾಗಿ ಈ ಮೂರು ನಿರ್ದಿಷ್ಟ ಸಣ್ಣ ಅಲ್ಪಸಂಖ್ಯಾತ ವರ್ಗಕ್ಕೆ ಅವಕಾಶ ಒದಗಿಸುವುದಷ್ಟೆ,

ಸಲಹಾ ಸಮಿತಿಯ ರಚನೆಯ ಉದ್ದೇಶವಾಗಿತ್ತು.

**ಮಿ। ದಾಂಬರ್ ಸಿಂಗ್ ಗುರುಂಗ್ :** ಮಾನ್ಯ ಅಧ್ಯಕ್ಷರೆ, ಶ್ರೀ ಕೆ.ಎಂ. ಮುನ್ಷಿಯವರು ಪ್ರಸ್ತುತ ಪಡಿಸಿರುವ ಸಲಹಾ ಸಮಿತಿಯ ಸದಸ್ಯರ ಪಟ್ಟಿಯಲ್ಲಿ, ಗೋರ್ಖ ಪ್ರತಿನಿಧಿಯ ಹೆಸರೇ ಇಲ್ಲ. ಮೆ ೧೬ರ ಕ್ಯಾಬಿನೆಟ್ ಮಿಷನ್ ಹೇಳಿಕೆಯ ೨೦ನೇ ವಾಕ್ಯಖಂಡವನ್ನು ಇಲ್ಲಿ ಪ್ರಸ್ತಾಪಿಸಲು ಬಯಸುವುದಿಲ್ಲ. ಆದರೆ ಕೆಲದಿನಗಳ ಹಿಂದೆ ಧ್ಯೇಯೋದ್ದೇಶಗಳ ಬಗ್ಗೆ ಪಂಡಿತ್ ಜವಾಹರ್ ಲಾಲ್ ಅವರು ಪ್ರಸ್ತಾಪಿಸಿ, ಸಭೆ ಅಂಗೀಕರಿಸಿದ ನಿಲುವಳಿಯ ೭ನೇ ಖಂಡಿಕೆಯನ್ನು, ನಿರ್ದಿಷ್ಟವಾಗಿ ನಿಮ್ಮ ಗಮನಕ್ಕೆ ತರಬಯಸುತ್ತೇವೆ. ಅದು ಹೀಗಿದೆ:

"ಇದರಲ್ಲಿ ಅಲ್ಪಸಂಖ್ಯಾತರು, ಹಿಂದುಳಿದ ಮತ್ತು ಬುಡಕಟ್ಟು ಜನಾಂಗದವರು ತಳಸಮುದಾಯದವರು ಮತ್ತು ಹಿಂದುಳಿದ ವರ್ಗಗಳಿಗೆ ಸಮರ್ಪಕ ರಕ್ಷಣೆ ನೀಡಲಾಗಿದೆ".

ಅಲ್ಪಸಂಖ್ಯಾತರು, ಹಿಂದುಳಿದ ಮತ್ತು ಬುಡಕಟ್ಟು ಪ್ರದೇಶಗಳ ಜನರಿಗೆ, ಅವರ ಹಿತಾಸಕ್ತಿಯನ್ನು ರಕ್ಷಿಸುವ ರೀತಿ ನೀತಿ ಕುರಿತು. ಸಂವಿಧಾನ ರಚನಾಸಭೆಗೆ, ತಿಳಿಯಪಡಿಸುವುದು ಸಲಹಾ ಸಮಿತಿಯ ಕೆಲಸ. ಸಮಿತಿ ಪ್ರಾಯಶಃ ಈ ಎಲ್ಲ ವರ್ಗಗಳ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ ಎಂದು ಭಾವಿಸಬಹುದಾಗಿದೆ. ಮಾನ್ಯರೆ, ಸಲಹಾ ಸಮಿತಿಯಲ್ಲಿ ಗೋರ್ಖ ಪ್ರತಿನಿಧಿ ಇಲ್ಲವಾದರೆ, ಅವರ ಪರವಾಗಿ ಮಾತನಾಡುವವರು ಯಾರು? ಅವರ ಹಕ್ಕು, ಅವರ ಹಿತರಕ್ಷಣೆ ಹೇಗಾದೀತು? ಗೋರ್ಖಗಳು ಒಂದು ಪ್ರತ್ಯೇಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು. ಅವರು ಭಾರತದಲ್ಲಿರುವ ಅತಿ ಹಿಂದುಳಿದ ಜನಾಂಗವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಗೋರ್ಖಗಳಿಗೆ ಇಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆಯದಿದ್ದಲ್ಲಿ ಅದನ್ನು ಪಡೆಯುವ ಹಕ್ಕು ಅವರಿಗಿದೆ. ಅವರಷ್ಟು ಹೊರಗುಳಿದ ಮತ್ತು ಭಾಗಶಃ ಹೊರಗುಳಿದ ಪ್ರದೇಶವಾಸಿಗಳೆಂದು ಪರಿಗಣಿಸಬೇಕು. ಏಕೆಂದರೆ ೩ ಲಕ್ಷಕ್ಕೂ ಮಿಕ್ಕ ಗೋರ್ಖಗಳಿರುವ ಡಾರ್ಜಿಲಿಂಗ್, ಭಾಗಶಃ ಹೊರಗುಳಿದ ಪ್ರದೇಶ ೧೯೪೧ರ ಜನಗಣತಿಯಲ್ಲಿ ಬಂಗಾಲದ ಗುಡ್ಡಗಾಡವಾಸಿ ಗೋರ್ಖಗಳನ್ನು ಬುಡಕಟ್ಟು ಜನಾಂಗದವರೆಂದು ಕೂಡ ವರ್ಗೀಕರಿಸಲಾಗಿದೆ. ದಮನಕ್ಕೊಳಗಾದ ಮತ್ತು ಹಿಂದುಳಿದ ಜನಾಂಗಗಳ ಹಿತವನ್ನು ಕಾಯ್ದುಕೊಳ್ಳಲು ಇರುವ ಒಂದೇ ಸಂಸ್ಥೆಯಲ್ಲಿ, ಗೋರ್ಖಗಳಿಗೆ ಪ್ರಾತಿನಿಧ್ಯವಿಲ್ಲವೆಂದಾದರೆ, ಗೋರ್ಖಾ ಪಂಗಡಕ್ಕೆ ಸೇರಿದವನಾದ ನನಗೆ, ಈ ಸಂವಿಧಾನ ರಚನಾಸಭೆಯ ಸದಸ್ಯನಾಗಿ ಇದ್ದೂ ಏನೂ ಪ್ರಯೋಜನವಿಲ್ಲವಾಗಿದೆ. ಗೋರ್ಖಗಳು ಕತ್ತಿ ಹಿಡಿದು ಕಾದಾಡುವವರೆಂದು ಅಧ್ಯಕ್ಷ ಕೃಪಲಾನಿಯವರು ಹೇಳಿದರು. ನಾನು ಒಪ್ಪುತ್ತೇವೆ. ಭಾರತದ ಪ್ರಭುಗಳಿಗಾಗಿ ಗೋರ್ಖಗಳು ಕತ್ತಿ ಹಿಡಿದು ಹೋರಾಡಿದರು. ಈಗ ಗೋರ್ಖಗಳು ಸ್ವತಂತ್ರ ಭಾರತಕ್ಕಾಗಿ ಹೋರಾಡುತ್ತಾರೆ. ಹೋರಾಡಲೆಂದು ತೀರ್ಮಾನಿಸಿದ್ದಾರೆ. ಆದರೆ ಅದೇ ವೇಳೆ, ಅವರ ಪರಿಸ್ಥಿತಿಯನ್ನೂ ಪರಿಗಣಿಸಬೇಕೆಂದು ಈ ಸದನಕ್ಕೆ ವಿನಂತಿಸುತ್ತೇನೆ. ಶೈಕ್ಷಣಿಕವಾಗಿ ಅವರು ಹಿಂದುಳಿದವರು. ಆರ್ಥಿಕವಾಗಿ ದುರ್ಬಲರು. ಈ ಎಲ್ಲ ವಿಷಯಗಳನ್ನು ಗಣನೆಗೆ ತಂದುಕೊಂಡು, ಚರ್ಚಿಸಲು ಇರುವುದು ಈ ಸಲಹಾ ಸಮಿತಿಯೊಂದೆ. ಈ ಅಂಶವನ್ನು ಪರಿಶೀಲಿಸಬೇಕೆಂದು. ಸದನದಲ್ಲಿ ಕೋರುತ್ತೇನೆ.

**ಶ್ರೀ ಕೆ.ಎಂ. ಮುನ್ಷಿ :** ಮಾನ್ಯರೆ, ನಿಲುವಳಿಯ ಪ್ರಸ್ತಾವಕನಾಗಿ ನಾನು ಉತ್ತರಿಸಬಹುದೆ?

**ಮಾನ್ಯ ಅಧ್ಯಕ್ಷರು :** (ಶ್ರೀ ಸಂತಾನಂ ಅವರಿಗೆ) ನೀವು ಮಾತಾನಾಡಲು ಬಯಸುತ್ತೀರಾ?

**ಶ್ರೀ ಕೆ. ಸಂತಾನಂ :** ಮಾನ್ಯರೆ, ಈ ನಿಲುವಳಿಗೆ ಸಂಬಂಧಿಸಿದಂತೆ ನಾನು ಎರಡು ಅಂಶಗಳನ್ನು ಪ್ರಸ್ತಾಪಿಸಲು ಬಯಸುತ್ತೇವೆ. ಈ ಸಲಹಾ ಸಮಿತಿಯು ತನ್ನ ಕಾರ್ಯವ್ಯಾಪ್ತಿಯನ್ನು ಅನಗತ್ಯವಾಗಿ ವಿಸ್ತರಿಸಲಾರದೆಂಬುದನ್ನು ತಿಳಿಸಲು ಕಾತರನಾಗಿದ್ದೇನೆ. ಸಮಗ್ರ ಸಭೆಯ ಪ್ರಕಾರ್ಯ ಕ್ಷೇತ್ರವನ್ನು ಅದು ಆಕ್ರಮಿಸಬಾರದು. ಅಥವಾ ಅದರ ವಿಭಾಗಗಳಲ್ಲಿ ಒತ್ತುವರಿ ಮಾಡಬಾರದು. ಉದಾಹರಣೆಗೆ, ಜಂಟಿಗೆ ವ್ಯತಿರಿಕ್ತವಾಗಿ ಪ್ರತ್ಯೇಕ ಮತದಾರ ವ್ಯವಸ್ಥೆ, ಪ್ರಾತಿನಿಧ್ಯದ ಪಾತ್ರ. ಮೊದಲಾದ ವಿಷಯಗಳಲ್ಲಿ ಕೈಹಾಕಿದರೆ, ಸಭೆಯ ಕಾರ್ಯಕಲಾಪಗಳು ನಡೆಯುವುದು ದುಸ್ತರವಾಗುತ್ತದೆ. ಈ ವಿಷಯವನ್ನು ನಾನು ಬೆಳೆಸಲಾರೆ,

ಸಮಿತಿಯ ಕೆಲಸವನ್ನು ದುರ್ಭರಗೊಳಿಸಲಾರೆ. ಇದನ್ನು ಅದರ ಪರಿಗಣನೆಗೆ ಬಿಡುತ್ತೇನೆ.

ಎರಡನೆಯದಾಗಿ, ವರದಿಯನ್ನು ನಾವು ಪರಿಶೀಲಿಸಬೇಕಾದ ವಿಧಾನ. ಸಾಧಾರಣ ಸಂದರ್ಭದಲ್ಲಿ ಸಮಿತಿಯು ವರದಿಯನ್ನು ಸದನಕ್ಕೆ ಸಲ್ಲಿಸಬೇಕಾಗುತ್ತದೆ. ಆದರೆ ಸಭೆ ಸಮಾವೇಶಗೊಳ್ಳುವವರೆಗೆ ಕಾಯುವುದಾದರೆ, ಅದರ ಪರಿಶೀಲನೆಗೆ ೧೦–೧೫ ದಿನಗಳ ವರೆಗೆ ಕಾಯಬೇಕಾಗುತ್ತದೆ. ಸದನದ ವೇಳೆಯನ್ನು ವ್ಯರ್ಥಗೊಳಿಸಿದಂತಾಗುತ್ತದೆ. ಸದನದ ಅನುಮತಿ ಪಡೆದು, ವರದಿ ಕೈ ಸೇರುತ್ತಿದ್ದಂತೆ, ಅದಷ್ಟು ಸದನದ ಗಮನಕ್ಕೆ ತಂದು ಪ್ರಚುರ ಪಡಿಸಬೇಕೆಂದು  ನನ್ನ ಸಲಹೆ, ಇದರಿಂದ ಸಭೆ ಸಮಾವೇಶಗೊಳ್ಳುತ್ತಿದ್ದಂತೆ, ಆ ವರದಿಯ ಬಗ್ಗೆ ಮಾತನಾಡಲು ನಾವೆಲ್ಲರೂ ಸಿದ್ಧರಾಗಿ ಬರಲು ಸಾಧ್ಯವಾಗುತ್ತದೆ. ಸದನದ ವೇಳೆಯೂ ವ್ಯರ್ಥವಾಗುವುದಿಲ್ಲ. ಇಲ್ಲವಾದರೆ, ನ್ಯಾಯಸಮ್ಮತ ಆಕ್ಷೇಪಗಳಿಗೆ ಎಡೆ ಕೊಟ್ಟಂತಾಗುತ್ತದೆ. ಏಕೆಂದರೆ, ಒಂದು ಎರಡು ಅಥವಾ ಮೂರು ದಿನಗಳ ನೋಟೀಸು ನೀಡಿ ಚರ್ಚಿಸುವ ವಿಷಯ ಇದಲ್ಲ. ನಮಗೆ ಕನಿಷ್ಠ ೧೫ ದಿನಗಳ ನೋಟೀಸನ್ನಾದರೂ ನೀಡಬೇಕಾಗುತ್ತದೆ. ನೀವು ವರದಿಯನ್ನು ಸಭೆಯ ಮುಂದಿಡುವವರೆಗೆ ಕಾಯಬೇಕಾದರೆ ಕಾಯಬಹುದು. ಅದಕ್ಕಾಗಿ ತಗಲುವ ವೆಚ್ಚ, ಗೊಂದಲ ಎಲ್ಲವೂ ತಮಗೆ ತಿಳಿದಿರುವುದೆ.

ನಾನು ಈ ಎರಡು ಸಲಹೆಗಳನ್ನು ತಮ್ಮ ಪರಿಶೀಲನೆಗಾಗಿ ತರುತ್ತಿದ್ದೇನೆ.

**ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** : ನಾನೊಂದು ಕ್ರಿಯಾಲೋಪವೆತ್ತಲು ಬಯಸುತ್ತೇನೆ. ಶ್ರೀ ಮುನ್ಷಿಯವರು ತಿದ್ದುಪಡಿ ತಂದು ಪ್ರಸ್ತಾವಿಸಿದ ನಿಲುವಳಿಯಲ್ಲಿ, ಮುಂದಿನ ಸಮಿತಿಯ ಚುನಾವಣಾ ಪ್ರಕ್ರಿಯೆಯ ಬಗ್ಗೆ ಪ್ರಸ್ತಾಪವಿಲ್ಲ. ಅದರ ಕ್ರಮವೇನೆಂದು ತಿಳಿಸಿಲ್ಲ. ಏಕೆಂದರೆ ಏಕೈಕ ವರ್ಗಾವಣೀಯ ಮತ ವಿಧಾನದಿಂದ, ಅನುಪಾತಾಧಾರಿತ ಪ್ರಾತಿನಿಧ್ಯದ ತತ್ತ್ವವನ್ನು ಆಧರಿಸಿ, ಚುಣಾವಣೆ ನಡೆಸುವ ವಿಧಾನವನ್ನು ಶ್ರೀ ಮುನ್ಷಿಯವರ ತಿದ್ದುಪಡಿಯ ಫಲವಾಗಿ ಕೈಬಿಡಲ್ಪಟ್ಟಿದೆ. ಶ್ರೀ ಮುನ್ಷಿಯವರು ಈಗಾಗಲೆ ಸೂಚಿಸಿರುವ ಹೆಸರುಗಳ ಜೊತೆ ಒಂದೆರಡು ಹೆಸರುಗಳನ್ನು ಹೆಚ್ಚುವರಿಯಾಗಿ ಸೂಚಿಸಿದರೆ, ಆಗ ಚುನಾವಣಾ ಕ್ರಮವೆಂದು ಪ್ರಕ್ರಿಯಾ ನಿಯಮಗಳ ಅಡಿಯಲ್ಲಿ ವಿವರಿಸಿರುವ ಕ್ರಮಕ್ಕೆ ಶ್ರೀ ಮುನ್ಷಿಯವರ ಈ ತಿದ್ದುಪಡಿ ತಡೆಯೊಡ್ಡಬಹುದು. ತಾವು ಅದಕ್ಕೆ ಅನುಮತಿ ಕೊಡಲಾರಿರಿ ಎಂದು ನಂಬುತ್ತೇನೆ. ಆದುದರಿಂದ ತಿದ್ದುಪಡಿ ಮಾಡಲಾದ ನಿಲುವಳಿಯಂತೆ, ಈಗಾಗಲೆ ಸೂಚಿಸಲಾಗಿರುವ ಹೆಸರುಗಳ ಜೊತೆಗೆ, ಒಂದೆರಡು ಹೆಚ್ಚುವರಿ ಸದಸ್ಯರ ಹೆಸರನ್ನು ಸೂಚಿಸಿದರೆ. ಆಗ ಚುನಾವಣಾ ಕ್ರಮ ಹೇಗಿರುವುದೆಂಬುದನ್ನು ನಾವು ನಿರ್ಧರಿಸಬೇಕೆಂದು ಕೋರುತ್ತೇನೆ.

**ಶ್ರೀ ಕೆ.ಎಂ. ಮುನ್ಷಿ** : ಕ್ರಿಯಾಲೋಪಕ್ಕೆ ಸಂಬಂಧಿಸಿದಂತೆ, ೪೬ನೇ ನಿಯಮ ಸ್ಪಷ್ಟವಾಗಿದೆ. ಸದನವು ಚುನಾವಣಾ ಕ್ರಮವನ್ನು ಬದಲಿಸಲು ಸಮರ್ಥವಾಗಿದೆ. ನಿಯಮ ಈ ರೀತಿ ಇದೆ:

"ಸಮಿತಿಯ ರಚನೆಗೆ ಕಾರಣಭೂತವಾದ ನಿಲುವಳಿಯು ಅನ್ಯಥಾ ಗೊತ್ತು ಪಡಿಸಿದ ಹೊರತು ಅಂತಹ ಪ್ರತಿಯೊಂದು ಸಮಿತಿಯ ಸದಸ್ಯರು, ಏಕೈಕ ವರ್ಗಾವಣೀಯ ಮತದಾನ ವಿಧಾನದಿಂದ, ಅನುಪಾತಾಧಾರಿತ ಪ್ರಾತಿನಿಧ್ಯದ ತತ್ತ್ವದ ಮೇಲೆ ಚುನಾಯಿಸಲ್ಪಡುವರು"

ಆದುದರಿಂದ ಕ್ರಿಯಾಲೋಪವಿಲ್ಲವೆಂದು ಇದರಿಂದ ತಿಳಿದುಬರುತ್ತದೆ.

**ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** : ಶ್ರೀ ಸಂತಾನಂ ಅವರು ತಮ್ಮ ತಿದ್ದುಪಡಿಯನ್ನು ಪ್ರಸ್ತಾಪಿಸಿದ್ದರೆ. ೪೬(೨)ನೇ ನಿಯಮದಲ್ಲಿ ವಿಶದ ಪಡಿಸಿರುವ ಪ್ರಕ್ರಿಯೆಯನ್ನು ಅಳವಡಿಸಬಹುದೆಂದಷ್ಟೆ ತಿಳಿಸಲು ಬಯಸುತ್ತೇನೆ. ಅವರು ತಮ್ಮ ತಿದ್ದುಪಡಿಯಿಂದ, ಮೂಲ ನಿಲುವಳಿಗೆ ಬದಲಾಗಿ ೧೧ "ಸಾಧಾರಣ ಮತ ಹಂಚಿಕೆಯಿಂದ" ಎಂಬ ಪದಗಳನ್ನು ಪ್ರತಿಯೋಜಿಸಲು ಬಯಸಿದ್ದರು. ಆ ತಿದ್ದುಪಡಿಯನ್ನು ಶ್ರೀ ಸಂತಾನಂ ಅವರು ಮಂಡಿಸದ ಕಾರಣ ೪೬(೨)ನೇ ನಿಯಮ ಅನ್ವಯವಾಗುವುದಿಲ್ಲ.

**ಮಾನ್ಯ ಅಧ್ಯಕ್ಷರು** : ನನ್ನ ಅಭಿಪ್ರಾಯದಲ್ಲಿ ಶ್ರೀ ಮುನ್ಷಿಯವರು ಪ್ರಸ್ತಾವಿಸಿರುವ ತಿದ್ದುಪಡಿ

ಕ್ರಮಬದ್ಧವಾಗಿದೆಯೆಂದು ೪೬(೨)ನೇ ನಿಯಮ ಸ್ಪಷ್ಟ ಪಡಿಸುತ್ತದೆ.

**ಶ್ರೀಮತಿ ದಾಕ್ಷಾಯಿಣಿ ವೇಲಾಯುಧನ್** : (ಮದರಾಸ್–ಸಾಮಾನ್ಯ) :

ಮಾನ್ಯ ಅಧ್ಯಕ್ಷರೆ, ಮುಸ್ಲಿಮ್ ಪ್ರಾಂತ್ಯಗಳಲ್ಲಿ ೭ ಸದಸ್ಯರು ಹಿಂದೂಗಳನ್ನು ಪ್ರತಿನಿಧಿಸುವುದಕ್ಕೆ ಅವಕಾಶವಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಆ ಪಟ್ಟಿಯಲ್ಲಿ ಯಾವೊಬ್ಬ ಹರಿಜನನ ಹೆಸರೂ ಸೇರಿಲ್ಲ. ನಾವು ಹರಿಜನರು, ಹಿಂದೂ ಸಮುದಾಯಕ್ಕೆ ಸೇರಿದವರೆಂದು ಭಾವಿಸುತ್ತೇವೆ. ಆದುದರಿಂದ ಮುಸ್ಲಿಮ್ ಪ್ರಾಂತ್ಯದಲ್ಲಿ ಹಿಂದೂಗಳನ್ನು ಪ್ರತಿನಿಧಿಸಲು ನಮಗೆ ಎಲ್ಲ ಹಕ್ಕುಗಳೂ ಇವೆ. ಬೆಂಗಾಲ, ಸಿಂಧ್ ಅಥವಾ ಪಂಜಾಬ್ ಪ್ರಾಂತ್ಯಗಳಲ್ಲಿ ಹಿಂದೂಗಳನ್ನು ಪ್ರತಿನಿಧಿಸಲು ನಮಗೆ ಎಲ್ಲ ಹಕ್ಕುಗಳೂ ಇವೆ. ಪಟ್ಟಿಯಲ್ಲಿ ೭ ಹರಿಜನರ ಪ್ರಾತಿನಿಧ್ಯವಿದೆ ಎಂದು ಯಾರೋ ಹೇಳಿದರು. ಅದರರ್ಥ, ಬಹುಸಂಖ್ಯಾತ ಮುಸ್ಲಿಮರ ಪ್ರಾಂತ್ಯಗಳಲ್ಲಿ ಹಿಂದೂಗಳನ್ನು ಪ್ರತಿನಿಧಿಸುವ ಹಕ್ಕು ಹರಿಜನರಿಗೆ ಇಲ್ಲ ಎಂದಲ್ಲ. ಆದುದರಿಂದ ಈ ಸಭೆಯಲ್ಲಿ ಹರಿಜನರ ಹಾಜರಾತಿ ಕೇವಲ ಭಾರತದ ಹರಿಜನರನ್ನು ಪ್ರತಿನಿಧಿಸುವುದಕ್ಕೆಂಬ ಭಾವನೆ ಬರುವುದು ಬೇಡ. ಹಿಂದೂ ಸಮಾಜಕ್ಕೆ ನಾವು ಸೇರಿದವರೆಂದು ಪ್ರತಿವಾದಿಸಲು ಇಷ್ಟ ಪಡುತ್ತೇನೆ. ಒಬ್ಬ ಹರಿಜನ ಸದಸ್ಯನನ್ನು ತಮ್ಮ ಪಟ್ಟಿಯಲ್ಲಿ ಸೇರಿಸುವುದರ ಮೂಲಕ, ಮೇಲ್ವರ್ಗದ ಹಿಂದೂಗಳು ಆಶ್ವಾಸನೆಯನ್ನು ಪೂರೈಸುವುದು ಮುಸ್ಲಿಮ್ ಪ್ರಾಂತ್ಯಗಳನ್ನು ಪ್ರತಿನಿಧಿಸುವವರ ಕರ್ತವ್ಯ.

ನನ್ನ ಹೆಸರು ಪಟ್ಟಿಯಲ್ಲಿ ಸೇರಲಿ ಎಂಬ ಉದ್ದೇಶದಿಂದ ನಾನಿಲ್ಲಿ ಬಂದು ಮಾತನಾಡುತ್ತಿದ್ದೇನೆಂಬ ಭಾವನೆ ಯಾರಿಗೂ ಬರುವುದು ಬೇಡ. ನನಗೆ ಅದರಲ್ಲಿ ಆಸಕ್ತಿ ಇಲ್ಲ. ನಾನು ಆ ಪ್ರಾಂತ್ಯಗಳನ್ನು ಪ್ರತಿನಿಧಿಸಲಾರೆ. ಆದರೆ ಮುಸ್ಲಿಮ್ ಬಹುಸಂಖ್ಯಾತರಿರುವ ಪ್ರಾಂತ್ಯಗಳಲ್ಲಿ ಹರಿಜನರಿದ್ದಾರೆ. ಆ ಪ್ರಾಂತ್ಯಗಳ ಹಿಂದೂಗಳನ್ನು ಪ್ರತಿನಿಧಿಸಲು ಅವರಿಗೆ ಹಕ್ಕಿದೆ. ನಾವು ಅನುಸರಿಸಬೇಕಾದ ಮೂಲ ತತ್ತ್ವಗಳಿಗೆ, ನನ್ನ ಅಭಿಪ್ರಾಯ ವಿರುದ್ಧವಾಗಿಲ್ಲವೆಂಬುದನ್ನು ಈ ಸದನ ಗಣನೆಗೆ ತಂದುಕೊಳ್ಳುವುದೆಂದು ನಂಬಿದ್ದೇನೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು** : (ಒರಿಸ್ಸ–ಸಾಮಾನ್ಯ) : ನಾನಿಲ್ಲಿ ತಮ್ಮ ಮುಂದಿಡುವುದು, ಶ್ರೀ ಕೆ.ಎಂ. ಮುನ್ಷಿಯವರಿಂದ, ತಮ್ಮ ಸಲಹೆಯ ಮೂಲಕ ಒರಿಸ್ಸ ಪ್ರಾಂತ್ಯ ಅಲಕ್ಷ್ಯಕ್ಕೆ ಗುರಿಯಾಗಿದೆ ಎಂದು ಸದನಕ್ಕೆ ತಿಳಿಸುವುದಕ್ಕಾಗಿ. ನಾವು ಅಮಾಯಕರು, ಸಾಧು ಜನರು ಎಂದು ಯಾವಾಗಲೂ ಭಾವಿಸುವವರು. ನಾವು ಯಾವಾಗಲೂ ನಿರ್ಲಕ್ಷ್ಯಗೆ ಒಳಗಾಗುತ್ತಿದ್ದೇವೆ. ಈಗ ಒರಿಸ್ಸ ಪ್ರತಿನಿಧಿಗಳ ಹೆಸರಿನ ಸೇರ್ಪಡೆ, ಎಷ್ಟು ಮುಖ್ಯವಾದುದೆಂದು ಮನಗಂಡು, ಸದನವು ನನ್ನ ಮಾತನ್ನು ಒಪ್ಪುತ್ತದೆ ಎಂದು ಭಾವಿಸುತ್ತೇನೆ. ಮೊಟ್ಟಮೊದಲಿಗೆ, ಒರಿಸ್ಸದ $^{2}/_{3}$ ಭಾಗ ಹೊರಗುಳಿದ ಮತ್ತು ಭಾಗಶಃ ಹೊರಗುಳಿದ ಪ್ರದೇಶಗಳು. ಆದರೂ ಶ್ರೀ ಕೆ.ಎಂ. ಮುನ್ಷಿಯವರು ೧೩ ಸದಸ್ಯರ ಹೆಸರುಗಳನ್ನು ಸೂಚಿಸಿದ್ದಾರಾದರೂ, ಒರಿಸ್ಸದಿಂದ ಒಬ್ಬರಾದರೂ ಸದಸ್ಯರ ಪ್ರಾತಿನಿಧ್ಯವಿಲ್ಲ. ಸದನ ಗಮನಕ್ಕೆ ತಂದುಕೊಳ್ಳಬೇಕಾದ ಮತ್ತೊಂದು ಅಂಶವಿದೆ. ಶ್ರೀ ಮುನ್ಷಿಯವರ ಪಟ್ಟಿಯಲ್ಲಿ ಒರಿಸ್ಸದ ಒಬ್ಬ ಹಿಂದೂವಿನ ಪ್ರಾತಿನಿಧ್ಯವೂ ಇಲ್ಲ. ಆದರೂ ಮುಸ್ಲಿಂ ಸದಸ್ಯರೊಬ್ಬರಿಗೆ ಪ್ರಾತಿನಿಧ್ಯ ದೊರೆತಿದೆ. ಇದು ನಿಜಕ್ಕೂ ನ್ಯಾಯಸಮ್ಮತವಲ್ಲ. ಅಲ್ಲಿನ ಬಹುಸಂಖ್ಯಾತ ಪಕ್ಷವನ್ನು ಪ್ರತಿನಿಧಿಸುವವರೆ ಇಲ್ಲ. ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯವನ್ನು ಕೊಡುತ್ತೇವೆ. ಈ ಪ್ರಶ್ನೆಯನ್ನು ಸದನವು ಬಗೆಹರಿಸುತ್ತದೆ ಎಂದು ನಾನು ನಂಬುತ್ತೇನೆ. ನಾನು, ಪಂಡಿತ್ ಗೋವಿಂದವಲ್ಲಭ ಪಂತ್‌ರ ನಿಲುವಳಿಯನ್ನು ಪ್ರಸ್ತಾಪಿಸಬೇಕಿತ್ತು. ಆದರೆ ಶ್ರೀ ಮುನ್ಷಿಯವರ ನಿಲುವಳಿ ಕ್ರಮಬದ್ಧವಾಗಿದೆ ಎಂದು ತಾವು ಹೇಳಿದಿರಿ. ಆದುದರಿಂದ ನಾನದನ್ನು ವಿರೋಧಿಸಲಾದೆ. ಆದರೂ. ಶ್ರೀ ರಾಯ್ ಬಹಾದೂರ್ ಶ್ಯಾಮನಂದನ ಸಹಾಯ ಅವರು ಹೇಳಿದಂತೆ, ಅಂತ ಪ್ರಮುಖ ವಿಷಯಗಳಲ್ಲಿ, ನಾವು ಏಕೈಕ ವರ್ಗಾವಣೀಯ ಮತದಾನ ಕ್ರಮವನ್ನು ಅನುಸರಿಸಬೇಕು. ಇದು ಎಲ್ಲರಿಗೂ ತೃಪ್ತಿಯಾಗುವಂತೆ ಈ ಪ್ರಶ್ನೆಯನ್ನು ಬಗೆಹರಿಸುತ್ತದೆ.

**ಶ್ರೀ ಜೈರಾಮ್‌ದಾಸ್ ದೌಲತ್‌ರಾಮ್** : (ಸಿಂಧ್–ಸಾಮಾನ್ಯ) : ನಾನು ಆದಷ್ಟೂ ಸಂಕ್ಷಿಪ್ತವಾಗಿ

ಹೇಳಬಯಸುತ್ತೇನೆ. ಈ ಸಮಿತಿಯ ಪ್ರಾಮುಖ್ಯ ಮತ್ತು ಅದು ನಿರ್ವಹಿಸಬೇಕಾದ ವಿಷಯಗಳ ಸೂಕ್ಷ್ಮತೆಯನ್ನು ಗಮನಿಸಿದಾಗ ಅದರ ಕಾರ್ಯವ್ಯಾಪ್ತಿಯ ಮೇಲೆ ನಿರ್ಬಂಧ ಹೇರುವ ಯಾವುದೇ ಚರ್ಚೆ ಇಲ್ಲಿ ಸೂಕ್ತವಾಗಲಾರದೆಂದು ಭಾವಿಸುತ್ತೇನೆ. ಅದರಲ್ಲಿ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರನ್ನು ಸಾಧ್ಯವಾದಷ್ಟು ಸಮಗ್ರ ಭಾರತವನ್ನು ಪ್ರತಿನಿಧಿಸುವಂತೆ ಆಯ್ಕೆ ಮಾಡಲಾಗಿದೆ. ಮತ್ತು ಮೇ ೧೬ರ ಹೇಳಿಕೆಯಂತೆ ಮತ್ತು ಬೇರೆಡೆ ತಿಳಿಸಿದಂತೆ, ಅವರು ಸ್ವತಂತ್ರವಾಗಿ ಚರ್ಚಿಸಲು ಅವಕಾಶ ಕೊಡಬೇಕು ಹಾಗೂ ಅಲ್ಪಸಂಖ್ಯಾತರ ರಕ್ಷಣೆಗಾಗಿ ಯಾವೆಲ್ಲ ಉಪಬಂಧಗಳನ್ನು ವಾಕ್ಯಖಂಡಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ನಿರ್ಧರಿಸುವ ಸ್ವಾತಂತ್ರ್ಯ ಅವರಿಗಿರಬೇಕು. ವಿಷಯ ಎಷ್ಟು ಸೂಕ್ಷ್ಮವಾಗಿಯೂ, ಸಂದಿಗ್ಧವಾಗಿಯೂ ಇದೆ ಎಂದರೆ, ಆ ಬಗ್ಗೆ ಸಂಪೂರ್ಣ ಚರ್ಚೆಗೆ ತೊಡಗಿದಷ್ಟು, ಹೆಚ್ಚು ಹೆಚ್ಚು ಭಿನ್ನಾಭಿಪ್ರಾಯಗಳಿಗೆ ಎಡೆ ಕೊಡುತ್ತದೆ. ನಾನು ಅಭಿಪ್ರಾಯಗಳಿಗಷ್ಟೆ ನನ್ನ ಮಾತನ್ನು ಸೀಮಿತಗೊಳಿಸುತ್ತೇನೆ. ಸಲಹಾ ಸಮಿತಿಯು, ವಿಷಯವನ್ನು ಅಲ್ಪ ಸಂಖ್ಯಾತರ ದೃಷ್ಟಿಯಿಂದಲೂ, ಸಾಮಾನ್ಯ ದೃಷ್ಟಿಕೋನದಿಂದಲೂ ಪರಿಭಾವಿಸುತ್ತದೆ ಎಂದು ನಿರೀಕ್ಷಿಸುತ್ತೇವೆ. ಅಲ್ಪಸಂಖ್ಯಾತರ ಅಗತ್ಯಗಳನ್ನು ಸಮಗ್ರ ರಾಷ್ಟ್ರೀಯ ಭಾವನೆಗಳೊಡನೆ ಸಮನ್ವಯಗೊಳಿಸುವುದೆಂದು ನಂಬುತ್ತೇನೆ.

**ಶ್ರೀ ನಾಗಪ್ಪ :** (ಮದರಾಸ್–ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇವಲ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನಷ್ಟೆ. ಈ ೫೦ ಸದಸ್ಯರಲ್ಲಿ ಕೆಲವು ಕೋಮಿನವರಿಗೆ ಅಗತ್ಯಕ್ಕಿಂತ ಮೀರಿ ಪ್ರಾತಿನಿಧ್ಯ ದೊರೆತಿದೆ. ಇಲ್ಲಿ ತಿಳಿಸಿರುವಂತೆ, ಎಲ್ಲರಿಗೂ ಸಮಾನ ಪ್ರಾತಿನಿಧ್ಯ ಸಿಕ್ಕಿರುವುದಾದರೆ, ಹಿಂದೂಗಳು ೭, ಮುಸ್ಲಿಮರು ೭ ಮತ್ತು ಪರಿಶಿಷ್ಟ ವರ್ಗಗಳು ೭ ಎನ್ನುವುದಾದರೆ, ಈ ಸಂಖ್ಯೆಗಳನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಯಿತೋ ನನಗೆ ತಿಳಿಯದು ಉದಾಹರಣೆಗೆ: ಏಳು ಮುಸ್ಲಿಮ್ ಬಹುಸಂಖ್ಯಾತರ ಪ್ರಾಂತ್ಯಗಳಿವೆ ಎನ್ನುವುದಾದರೆ, ಅಲ್ಲಿರುವ ಹಿಂದೂಗಳ ಹಿತರಕ್ಷಣೆಯಾಗಬೇಕಾದುದು ಅವಶ್ಯಕ. ಹಿಂದೂ ಬಹುಸಂಖ್ಯಾತರ ಪ್ರಾಂತ್ಯಗಳಲ್ಲಿ, ತಮ್ಮ ಹಿತರಕ್ಷಣೆಗಾಗಿ ೭ ಮುಸ್ಲಿಮ್ ಪ್ರತಿನಿಧಿಗಳಿರುವುದೇನೋ ಸರಿ. ಆದರೆ, ಅಲ್ಲಿ ಹರಿಜನರಿಗೆ ರಕ್ಷಣೆ ಒದಗಿಸುವವರಾರು? ಅವರು ಪ್ರತಿಯೊಂದು ಪ್ರಾಂತ್ಯದಲ್ಲೂ ಅಲ್ಪಸಂಖ್ಯಾತರಾಗಿದ್ದಾರೆ. ಮೇಲಾಗಿ ಮುಸ್ಲಿಮ್ ಬಹುಸಂಖ್ಯಾತರಿರುವ ಈ ಪ್ರಾಂತ್ಯಗಳ ಜನಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಇಲ್ಲಿರುವ ಎಲ್ಲ ಹಿಂದೂಗಳನ್ನೂ ಒಟ್ಟಿಗೆ ಪರಿಗಣಿಸಿದರೆ, ಅವರಿಗಿಂತ ಹರಿಜನರದೇ ಮೇಲುಗೈ. ಇದೇ ಮಾತು ಹಿಂದೂಗಳಿಗೂ ಅನ್ವಯಿಸುತ್ತದೆ. ಈ ನಡುವೆ ಪಾರಸಿಕರೆಂಬ ಹೊಸ ಅಲ್ಪಸಂಖ್ಯಾತ ವರ್ಗವನ್ನು ಇದರ ಪರಿಧಿಯ ಒಳಕ್ಕೆ ತರಲಾಗಿದೆ. ಇಲ್ಲಿಯವರೆಗೆ, ಆ ಸಮುದಾಯ ಅಲ್ಪಸಂಖ್ಯಾತರ ಹಣೆಪಟ್ಟಿ ಅಂಟಿಸಿಕೊಂಡಿರಲಿಲ್ಲ. ಏಕಾಏಕಿ ಅಲ್ಪಸಂಖ್ಯಾತ ಸಲಹಾ ಸಮಿತಿಯೊಳಗೆ, ಇದೊಂದು ನಿರ್ದಿಷ್ಟ ಸಮುದಾಯ ಅಲ್ಪಸಂಖ್ಯಾತ ವರ್ಗವೆಂದು ಪರಿಗಣಿಸಲ್ಪಟ್ಟಿದೆ. ಪಾರಸಿಕರು ಯಾವ ರಕ್ಷಣೆ ಬೇಡುತ್ತಾರೋ ತಿಳಿಯದು. ಅದು ಸಮಾಜದಲ್ಲಿ ಸುಸ್ಥಿತಿಯಲ್ಲಿದೆ – ಆರ್ಥಿಕವಾಗಿ, ಶೈಕ್ಷಣಿಕವಾಗಿ, ಈ ನಿರ್ದಿಷ್ಟ ಕೋಮು ಯಾವ ನಿರ್ದಿಷ್ಟ ರಕ್ಷಣೆಯನ್ನು ಬೇಡುತ್ತದೆ? ಅಂತೆಯೇ ಆಂಗ್ಲೋ ಇಂಡಿಯನ್ ಸಮುದಾಯ. ಅವರ ಸಂಖ್ಯೆ ಬಹಳ ಕಡಿಮೆ. ಆದರೆ ಸಮಿತಿಯಲ್ಲಿ ಅವರ ಪ್ರಾತಿನಿಧ್ಯ ಅತಿ ಹೆಚ್ಚು. ತಳಸಮುದಾಯದವರ ಪ್ರಾತಿನಿಧ್ಯ ೭ಕ್ಕೆ ಬದಲು ೧೧ ಇರಬೇಕಿತ್ತೆಂಬುದು ನನ್ನ ಸಲಹೆ. ಈ ಹಂತದಲ್ಲಿ ಇದಾವುದೂ ಸಾಧ್ಯವಾಗದಿದ್ದರೆ. ಈಗ ಚುನಾಯಿತರಾಗಿರುವ ಸದಸ್ಯರೆಲ್ಲರೂ ಒಟ್ಟಾಗಿ ಒಂದು ನಿರ್ದಿಷ್ಟ ಕೋಮಿನ ಅಹವಾಲುಗಳನ್ನು ಮುಂದಿಡಲು ಹೋಗಬಾರದೆಂಬುದು ನನ್ನ ಕೋರಿಕೆ. ಅವರಲ್ಲಿ ಏಕೋಭಾವ ಇರಬೇಕು. ಎಲ್ಲ ಸಮುದಾಯಗಳ ಒಳಿತಿಗಾಗಿ ಶ್ರಮಿಸಬೇಕು. ಎಲ್ಲ ಕೋಮುಗಳ ಸಾಮರಸ್ಯಕ್ಕಾಗಿ ಶ್ರಮಿಸಬೇಕು. ಈ ಉದ್ದೇಶದಿಂದ, ತಮ್ಮ ಸಂಖ್ಯೆಗನುಗುಣವಾಗಿ ಸಾಕಷ್ಟು ಪ್ರಾತಿನಿಧ್ಯ ದೊರಕದಿರುವ ಕೋಮುಗಳ ರಕ್ಷಣೆಗಾಗಿ ನಿಲ್ಲಬೇಕು. ನಮ್ಮ ಗುರಿಯನ್ನು ಘೋಷಿಸಿ, ಕೆಲವು ದಿನಗಳ ಹಿಂದೆಯಷ್ಟೆ ನಿಲುವಳಿಯನ್ನು ಅಂಗೀಕರಿಸಿದ್ದೇವೆ. ನಮ್ಮ ಸಂವಿಧಾನ ರಚನೆಗೆ ಪ್ರೇರಣೆ ಏನೆಂಬುದನ್ನೂ ಘೋಷಿಸಿದ್ದೇವೆ. ನಮ್ಮ ಭಾವನೆಗಳಿಗೆ ನಾವು ಬದ್ಧರಾಗಿರಬೇಕು. (೫೦

ಪ್ರತಿನಿಧಿಗಳಲ್ಲಿ ಹರಿಜನರು ಕೇವಲ ಏಳು ಇದ್ದಾಗ್ಯೂ) ಪ್ರತಿಯೊಂದು ಸಮುದಾಯವೂ ತನ್ನ ಸ್ಥಾನ ಮಾನವನ್ನು ಗಳಿಸುವಂತಾಗಬೇಕು. ಹರಿಜನರ ಪ್ರಾತಿನಿಧ್ಯ ಕೇವಲ ⁰/₂ ಭಾಗದಷ್ಟೆ ಇದೆ. ಅವರು ತಮ್ಮ ಕೋಮಿನ ಹಕ್ಕೊತ್ತಾಯಿಸಿ ಹೋರಾಟ ನಡೆಸಬಹುದು. ಆದರೂ ಅವರು ಅಲ್ಪಸಂಖ್ಯಾತರೆ. ಅವರ ದನಿ ಕೇಳಿಸದೆ ಹೋಗಬಹುದು. ಆದ್ದರಿಂದ ಸಮಿತಿಯಲ್ಲಿ ಬಹುಸಂಖ್ಯಾತರಾಗಿ ಚುನಾಯಿಸಲ್ಪಟ್ಟವರು ಹರಿಜನರನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಂತೆ ಅವರಿಗೆ ವಿನಂತಿಸುತ್ತೇನೆ. ಅವರ ಬೇಡಿಕೆಗಳು ಯುಕ್ತವಾಗಿದ್ದರೆ. ಅವುಗಳನ್ನು ಸಂಪೂರ್ಣ ಈಡೇರಿಸಲು ಆಗದಿದ್ದರೂ. ಕನಿಷ್ಠ ಬೇಡಿಕೆಗಳನ್ನಾದರೂ ಪೂರೈಸಲು ಮುಂದಾಗುವಿರೆಂದು ನಂಬುತ್ತೇವೆ. ಈ ಭರವಸೆಯನ್ನು ಹೊತ್ತು, ಚುನಾಯಿತ ಸದಸ್ಯರನ್ನು ನಾನು ಅಭಿನಂದಿಸುತ್ತೇನೆ. ಯುಗ ಯುಗಾಂತರದಿಂದ ಸಂಕಷ್ಟಕ್ಕೆ ಗುರಿಯಾಗಿರುವ ಸಮುದಾಯಗಳ ಅರ್ಹತಾನುಸಾರ ಅವರಿಗೆ ನ್ಯಾಯ ದೊರಕಲೆಂದು ಆಶಿಸುತ್ತೇನೆ.

**ಗೌರವಾನ್ವಿತ ರೆವರೆಂಡ್ ಜೆ.ಆರ್.ಎಂ. ನಿಕೊಲಸ್ ರಾಯ್ :** ಮಾನ್ಯರೆ, ಇಲ್ಲಿ ಪಟ್ಟಿ ಮಾಡಿರುವುದು ೫೦ ಸದಸ್ಯರ ಹೆಸರುಗಳನ್ನು. ಈ ಪಟ್ಟಿಗೆ ಇನ್ನೆರಡು ಹೆಸರುಗಳನ್ನು ಸೇರಿಸಲು ಬಯಸಿದ್ದೆ. ಶ್ರೀ ಮುನ್ಷಿಯವರೊಡನೆ ಈ ಬಗ್ಗೆ ಚರ್ಚಿಸಿದೆ. ನಂತರ ಈಗಾಗಲೆ ಸಿದ್ಧಗೊಂಡಿರುವ ಪಟ್ಟಿಯನ್ನು ಕೆಡಿಸುವುದು ಬೇಡವೆಂದು ನಿರ್ಧರಿಸಿದೆ. ಮಾನ್ಯರೆ, ನಾನು ಹೇಳುವುದಿಷ್ಟೆ. ಅಸ್ಸಾಂನಲ್ಲಿ ಅಲ್ಪಸಂಖ್ಯಾತರು ಬಹಳಷ್ಟು ಇದ್ದಾರೆ. ಭಾರತದ ಇತರ ಭಾಗಗಳಲ್ಲಿರುವ ಬುಡಕಟ್ಟು (ಗುಡ್ಡಗಾಡು) ಪ್ರದೇಶಗಳಿಗಿಂತ ಇಲ್ಲಿರುವುದು ಭಿನ್ನವಾಗಿದೆ. ಪ್ರತಿಯೊಂದು ಪ್ರದೇಶಕ್ಕೂ ಅದರದೆ ಜೀವನ ಶೈಲಿ ಮತ್ತು ಸಂಸ್ಕೃತಿ ಇರುತ್ತದೆ. ಅವುಗಳೆಲ್ಲವನ್ನೂ ಈ ಸಮಿತಿಯಲ್ಲಿ ಪ್ರತಿನಿಧಿಸಬೇಕಾದ ಆಗತ್ಯವಿದೆ. ಆದರೆ ೩ನೇ ಕಂಡಿಕೆಯಲ್ಲಿ ನಾನು ಕಂಡಂತೆ, ಉಪಸಮಿತಿಗಳ ರಚನೆಯಾದ ಮೇಲೆ ಅವು ಇಬ್ಬರನ್ನು ಸಹಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಪ್ರಾಯಶಃ ಇದರಿಂದ ತೊಡಕು ನಿವಾರಣೆಯಾಗುತ್ತದೆ. ನಾನು ಆ ಕಂಡಿಕೆಯನ್ನು ಓದುತ್ತೇನೆ.

"ವಾಯವ್ಯ ಬುಡಕಟ್ಟು, ಈಶಾನ್ಯ ಬುಡಕಟ್ಟು, ಪೂರ್ಣ ಹೊರಗುಳಿದ ಮತ್ತು ಭಾಗಶಃ ಹೊರಗುಳಿದ ಪ್ರದೇಶಗಳ ಆಡಳಿತ ವ್ಯವಹಾರಗಳಿಗಾಗಿ ಯೋಜನೆಗಳನ್ನು ರೂಪಿಸಲು ಉಪಸಮಿತಿಗಳನ್ನು ಸಲಹಾ ಸಮಿತಿ ನೇಮಕ ಮಾಡುತ್ತದೆ. ಆ ಉಪಸಮಿತಿಗಳು ಇಬ್ಬರಿಗಿಂತ ಮೀರದಂತೆ ಆಯಾ ಕಾಲಕ್ಕೆ ಆಯಾ ಪ್ರದೇಶಕ್ಕೆ ಸಂಬಂಧಿಸಿದಂತೆ, ನೆರವಿಗಾಗಿ ನೇಮಕ ಮಾಡಿಕೊಳ್ಳುತ್ತವೆ.

ನಿಸ್ಸಂದೇಹವಾಗಿ, ಕೆಲ ಕ್ರಮದಿಂದ ಬುಡಕಟ್ಟು ಪ್ರದೇಶಕ್ಕೆ ಪ್ರಾತಿನಿಧ್ಯ ದೊರಕಲು ಸಹಾಯವಾಗುತ್ತದೆ. ಪ್ರದೇಶವಾಸಿಗಳ ಬಯಕೆ ಏನೆಂಬುದನ್ನು ಸಮಿತಿಗೆ ತಿಳಿಸಲು ಸಹಕಾರಿಯಾಗುತ್ತದೆ. ಮಾನ್ಯರೆ, ಸಭೆಯ ಮುಂದಿರಿಸಿದ ನಿಲುವಳಿ ಸಮರ್ಪಕವಾಗಿದೆ.

ಇನ್ನೊಂದು ವಿಷಯವನ್ನು ತಿಳಿಸಲು ಇಚ್ಛಿಸುತ್ತೇನೆ. ಈ ಪಟ್ಟಿಗೆ ಇನ್ನೊಬ್ಬ ಭಾರತೀಯ ಕ್ರೈಸ್ತನ ಹೆಸರನ್ನು ಸೇರಿಸಿದ್ದರೆ ಉತ್ತಮವೆಂದು ನಾನು ಅಂದುಕೊಂಡಿದ್ದೆ. ಒರಿಸ್ಸಗೆ ಈ ವಿಷಯದಲ್ಲಿ ಪ್ರಾತಿನಿಧ್ಯವೇ ದೊರಕಿಲ್ಲವೆಂಬುದು ನನ್ನ ಗಮನಕ್ಕೆ ಬಂದಿದೆ.

**ಓರ್ವ ಗೌರವಾನ್ವಿತ ಸದಸ್ಯ :** ಆಂಧ್ರದಲ್ಲೇನಾಗಿದೆ?

**ಗೌರವಾನ್ವಿತ ಜೆ.ಜೆ.ಎಂ. ನಿಕೋಲ್ಸ್ ರಾಯ್ :** ಒರಿಸ್ಸ ಪ್ರಾಂತ್ಯಕ್ಕೆ ಪ್ರತಿನಿಧಿಯಾಗಿ, ಒಬ್ಬ ಭಾರತೀಯ ಕ್ರೈಸ್ತ ಪ್ರತಿನಿಧಿಯ ಹೆಸರನ್ನು ಸೇರಿಸಬೇಕೆಂಬುದು ನನ್ನ ಇಚ್ಛೆ. ಒರಿಸ್ಸದ ಕ್ರೈಸ್ತ ಸಮುದಾಯದ ಪ್ರಾತಿನಿಧ್ಯವನ್ನು ಗಮನದಲ್ಲಿಟ್ಟುಕೊಂಡು, ಅಧ್ಯಕ್ಷರು ಈ ಬಗ್ಗೆ ಪರಿಶೀಲಿಸಬೇಕು. ಈ ಪಟ್ಟಿಯಲ್ಲಿರುವ ನಾಲ್ವರು ಭಾರತೀಯ ಕ್ರೈಸ್ತರ ಹೆಸರುಗಳೊಡನೆ ಇನ್ನೊಂದು ಹೆಸರು ಹೆಚ್ಚುವರಿಯಾಗಿ ಸೇರುತ್ತದೆಯಷ್ಟೆ. ಈ ಕೋರಿಕೆ ಈಡೇರಿದರೆ, ನಿಲುವಳಿ, ಸದನಕ್ಕೆ ಒಪ್ಪಿಗೆಯಾಗುವುದೆಂದು ಭಾವಿಸುತ್ತೇನೆ. ಇದು ಸಾಧ್ಯವಾದಷ್ಟು ಸಮರ್ಪಕ ರೀತಿಯಲ್ಲಿ ರಚನೆಯಾದಂತಾಗುತ್ತದೆ. ಕೆಲವು ಅಲ್ಪಸಂಖ್ಯಾತ ವರ್ಗಗಳಿಗೆ ಪ್ರಾತಿನಿಧ್ಯ ದೊರಕದಿರುವಾಗ, ಅಧ್ಯಕ್ಷರ

ನಾಮನಿರ್ದೇಶನದ ಮೂಲಕ ದೊರಕಿಸಿಕೊಳ್ಳಬಹುದು. ಜೊತೆಗೆ ಉಪಸಮಿತಿಗಳು ಸಹ ಸದಸ್ಯರು ನೇಮಕ ಮಾಡುವುದರಿಂದಲೂ ದೊರಕುತ್ತದೆ.

**ಶ್ರೀ ಬಿ.ದಾಸ್** : ಕಳೆದ ಮೂರು ದಿನಗಳಲ್ಲಿಯ ಈ ಸದನದ ಹಾಗೂ ನವದೆಹಲಿಯ ವಾತಾವರಣ ನನಗೆ ೧೯೩೦–೩೧ರ ವಾತಾವರಣವನ್ನು ನೆನಪಿಗೆ ತರುತ್ತವೆ. ನನ್ನ ಅನುಭವದಿಂದ ಹೇಳಬಹುದಾದರೆ, ಹಿಂದಿಗಿಂತ ಈಗ ಅಲ್ಪಸಂಖ್ಯಾತರಿಗೆ ಹೆಚ್ಚು ಪ್ರಾಧಾನ್ಯ ದೊರೆತಿದೆ. ಗೊಣಗಾಟಗಳು ಇದ್ದೇ ಇರುತ್ತವೆ. ಅತಿ ದುರದೃಷ್ಟಕರ ಸಂಗತಿ ಎಂದರೆ, ಅಲ್ಪಸಂಖ್ಯಾತರು ಕೇವಲ ನ್ಯಾಯ, ಸಮಾನತೆ, ಮತ್ತು ನಿಷ್ಪಕ್ಷಪಾತ ಧೋರಣೆಯನ್ನು ಮಾತ್ರವಲ್ಲದೆ. ಮೂರನೆ ಪಕ್ಷದ ದಬ್ಬಾಳಿಕೆಯಿಂದ ರಕ್ಷಣೆ ಮತ್ತು ಪ್ರಾಶಸ್ತ್ಯವನ್ನು ಬೇಡುತ್ತಿವೆ. ಮುಖ್ಯ ವಿಷಯಗಳ ಮೇಲೆ ಅಲ್ಪಸಂಖ್ಯಾತರ ಸಮಸ್ಯೆಗಳು ನೆರಳಾಡಬಾರದು. ಮುಖ್ಯ ವಿಷಯವೆಂದರೆ ಭಾರತದ ಸ್ವಾತಂತ್ರ್ಯ.

ಹಿಂದೆ ಮಾತನಾಡಿದವರು ಒಂದು ವಿಷಯದ ಮೇಲೆ ಒತ್ತು ನೀಡಿದರು. ಹಿಂದೂ/ಪ್ರಾಂತ್ಯಗಳಲ್ಲಿ ಬಹುಸಂಖ್ಯಾತರು ಬಹುಸಂಖ್ಯೆಯಲ್ಲಿರುವ ಕೋಮಿಗೆ ಸಲಹಾ ಸಮಿತಿಯಲ್ಲಿ ಪ್ರಾತಿನಿಧ್ಯ ದೊರಕಿಲ್ಲವೆಂಬುದು ಅವರ ವಾದ. ನಾನು ಅವರೊಡನೆ ಸಹಮತ ಹೊಂದಿದ್ದೇನೆ. ಒರಿಸ್ಸದ ಹಿಂದೂ ಜನತೆಯ ಪ್ರಾತಿನಿಧ್ಯಕ್ಕಾಗಿ ಒತ್ತಾಯ ಪಡಿಸುತ್ತೇನೆ. ಒರಿಸ್ಸಾ, ಚರ್ಚೆಯಲ್ಲಿ ಭಾಗವಹಿಸಬೇಕು. ಅಲ್ಲಿರುವ ಅಲ್ಪಸಂಖ್ಯಾತರ ಅನುಚಿತ ಹೊಣೆಯನ್ನು ತಾನು ಹೊರಬೇಕಾಗಿರುವುದರ ಬಗ್ಗೆ ಮಾತನಾಡಬೇಕು.

ಸಲಹಾ ಸಮಿತಿ ಮುಂದೆ ಬಿಕ್ಕಟ್ಟಿಗೆ ಸಿಲುಕುತ್ತದೆ. ನಾನು ಅದರ ನಿರ್ಧಾರಗಳನ್ನು ನಿರೀಕ್ಷಿಸುತ್ತಿಲ್ಲ. ನಾನು ಆ ಸಲಹಾ ಸಮಿತಿಯ ಸದಸ್ಯನಲ್ಲ. ಆದರೆ ಅಲ್ಪಸಂಖ್ಯಾತರು ರಾಷ್ಟ್ರಮಟ್ಟದಲ್ಲಿ ರಕ್ಷಣೆ, ಆರ್ಥಿಕ ಅನುಕೂಲಗಳು, ಮೀಸಲಾತಿ ಮತ್ತು ಮಾನ್ಯತೆಯನ್ನು ಬೇಡುತ್ತಾರೆ. ಈ ರೀತಿಯ ಭಾರತ ಸೂತ್ರವನ್ನು ಒರಿಸ್ಸದಂತಹ ಬಡ ಪ್ರಾಂತ್ಯಗಳು ನಿಭಾಯಿಸಲು ಸಾಧ್ಯವಿಲ್ಲ. ಆದರೂ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದವರಿಗೆ ಕನಿಷ್ಠ ಮೊತ್ತದ ಹಣ ವಿನಿಯೋಗಿಸಬೇಕಾಗುತ್ತದೆ. ಒರಿಸ್ಸದಿಂದ ಬೇರ್ಪಡುವ ಮೊದಲು ಬಿಹಾರ್‌ನಲ್ಲಿದ್ದ ಕನಿಷ್ಠ ಮಾನಕ ಇಂದು ಒರಿಸ್ಸದ ಗರಿಷ್ಠ ಮಾನಕವಾಗುತ್ತಿದೆ. ಒರಿಸ್ಸದ ತಲಾವಾರು ಆದಾಯ ೨ ರೂಪಾಯಿ ೮ ಆಣೆಯೋ ಏನೋ ಇರಬಹುದು. ಇತರ ಪ್ರಾಂತ್ಯಗಳಲ್ಲಿ ತಲಾವಾರು ಆದಾಯ ೨೦ ರೂಪಾಯಿ ಹಾಗೂ ಅದಕ್ಕಿಂತ ಹೆಚ್ಚಿರಬಹುದು. ನಾನಿಲ್ಲಿ, ಒಬ್ಬ ಹಿಂದೂ ಪ್ರತಿನಿಧಿಯಾಗಿ ಸಲಹಾ ಸಮಿತಿಯಲ್ಲಿರಬೇಕೆಂದು ವಾದ ಮಾಡುತ್ತಿಲ್ಲ

ಸ್ವತಂತ್ರ ಭಾರತದಲ್ಲಿ ಪ್ರಾಂತ್ಯಗಳು, ಅಧಿಕಾರ ಉಳಿಕೆ ಹೊಂದಲಿರುವ ನೋಟ ನನ್ನ ಕಣ್ಣ ಮುಂದಿದೆ. ರಕ್ಷಣೆ ಮತ್ತು ಮಾನ್ಯತೆಯ ಸದ್ದುಗದ್ದಲದಲ್ಲಿ ಅನಾನುಕೂಲಗಳ ಹೊರೆಯನ್ನು ಸಣ್ಣಪುಟ್ಟ ಪ್ರಾಂತ್ಯಗಳ ಮೇಲೆ ಹೊರಿಸುವ, ಆಡಳಿತ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅತಿ ದೊಡ್ಡ ಸಮಸ್ಯೆಯನ್ನು ಬಡಪ್ರಾಂತ್ಯಗಳ ಮೇಲೆ ಇರಿಸುವ ಪರಿಸ್ಥಿತಿಯನ್ನು ಈ ಸದನದ ನನ್ನ ಸಹಸದಸ್ಯರು ಒಪ್ಪುತ್ತಾರಾ? ಅದು ಆಡಳಿತವನ್ನೇ ಮುರಿಯಬಹುದು.

ಹಿಂದೂಗಳು ಬಹ್ವಂಶ ಇರುವ ಪ್ರಾಂತ್ಯಗಳಲ್ಲಿ ಹಿಂದೂಗಳಿಗೆ ವ್ಯಾಪಕ ಪ್ರಾತಿನಿಧ್ಯವನ್ನು ಸಲಹಾ ಸಮಿತಿ ಕಲ್ಪಿಸಬೇಕು. ಇದರಿಂದ ಈ ರಾಜ್ಯಗಳ ಹಣಕಾಸು ಮತ್ತು ಆರ್ಥಿಕ ಸ್ಥಿತಿಗತಿಗಳು ತಿಳಿಯುತ್ತವೆ. ಒರಿಸ್ಸದಲ್ಲಿ ನಮ್ಮ ಆರ್ಥಿಕ ಸ್ಥಿತಿಗಳನ್ನು ಅರಿಯದ ಸದಸ್ಯರು ಸಲಹಾ ಸಮಿತಿಯಲ್ಲಿದ್ದು ಕೊಡುವ ನಿರ್ಧಾರಗಳನ್ನು ನಾವು ನೇರವಾಗಿ ವಿರೋಧಿಸಬೇಕು. ನಾವು ಯಾವುದೇ ರಕ್ಷಣೆ ಆರ್ಥಿಕ ಅಥವಾ ಇನ್ನಿತರ ರಕ್ಷಣೆ ಹಾಗೂ ಅನುಚಿತ ಹೊರೆಗಳನ್ನು ನಾವು ಅಂಗೀಕರಿಸುವುದಿಲ್ಲ.

**ಶ್ರೀ ಸತ್ಯನಾರಾಯಣ ಸಿನ್ಹಾ** : ಮುಂದಿನ ಪ್ರಶ್ನೆಗೆ ಹೋಗಬೇಕೆಂಬ ನಿಲುವಳಿಯನ್ನು ನಾನು ಪ್ರಸ್ತಾವಿಸುತ್ತಿದ್ದೇನೆ.

**ಶ್ರೀ ಬಿ.ಕೆ. ಸಿಧ್ವಾ :** (ಸಿ.ಪಿ. ಮತ್ತು ಬೆರಾರ್–ಸಾಮಾನ್ಯ) : ಮಾನ್ಯರೆ, ನಾನು ಕೆಲವು ಮಾತುಗಳನ್ನಾಡಬಹುದೆ?

**ಮಾನ್ಯ ಅಧ್ಯಕ್ಷರು :** ವಿಷಯದ ಸಮಾಪ್ತಿಗೆ ನಿಲುವಳಿ ಮಂಡಿಸಲಾಗಿದೆ. ನಿಲುವಳಿ ಹೀಗಿದೆ. ವಿಷಯವನ್ನು ಸಮಾಪ್ತಿಗೊಳಿಸೋಣ.

ನಿಲುವಳಿ ಅಂಗೀಕರಿಸಲಾಗಿದೆ.

**ಮಾನ್ಯ ಅಧ್ಯಕ್ಷರು :** ಶ್ರೀ ಪಂತ್ ಅದು ನಿಮ್ಮ ನಿಲುವಳಿ ತಿದ್ದುಪಡಿಯನ್ನು ಒಪ್ಪುತ್ತೀರಾ?

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್ :** ಮಾನ್ಯರೆ ಶ್ರೀ ಮುನ್ಷಿಯವರು ಪ್ರಸ್ತಾವಿಸಿದ ತಿದ್ದುಪಡಿಗಳನ್ನು ನಾನು ಅಂಗೀಕರಿಸುತ್ತೇನೆ. ಒಟ್ಟಾರೆ, ನನ್ನ ನಿಲುವಳಿಗೆ ಸಿಕ್ಕ ಪ್ರತಿಕ್ರಿಯೆ ನಿರೀಕ್ಷೆಗೆ ಮೀರಿದ್ದು. ಪ್ರತ್ಯೇಕ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವ ವಿಷಯ ಸೂಕ್ಷ್ಮವಾದುದು. ಅಂತಹ ಸಮಸ್ಯೆಗಳಲ್ಲಿ ಕೆಲವು ಇರುಸುಮುರುಸು ತರುವಂಥ ಅಂಶಗಳಿವೆ. ಅವನ್ನು ಸುಲಭವಾಗಿ ಬಗೆಹರಿಸಲಾಗದು. ಅದನ್ನು ತೀರಾ ವ್ಯಕ್ತಿಗತವಲ್ಲದ ನೆಲೆಯಲ್ಲಿ ಎದುರಿಸಲಾಗದು. ಶ್ರೀ ಜೈಪಾಲ್ ಸಿಂಗ್ ಅವರು ಮಾತನಾಡಿದುದಕ್ಕಿಂತ ಖಾರವಾಗಿ ಯಾರೇ ಟೀಕೆ ಮಾಡಿದ್ದರೂ ನಾನು ಅಚ್ಚರಿಗೊಳ್ಳುತ್ತಿರಲಿಲ್ಲ. ಅವರು ಸಿಡಿಮಿಡಿಗೊಳ್ಳುತ್ತಿದ್ದುದನ್ನು ನಾನು ಕಂಡೆ, ಆ ಸಿಡಿತ ಅವರ ಆಲೋಚನಾ ದಾರಿದ್ರ್ಯಕ್ಕೆ ತಕ್ಕ ಪರಿಹಾರದಂತಿತ್ತು. ನಾನು ಬುಡಕಟ್ಟು ಜನಾಂಗದವರ ವಿರುದ್ಧ ಯಾವುದೇ ಸಲಹೆ ನೀಡಿರಲಿಲ್ಲ. ಅವರಿಗೆ, ನಮ್ಮಿಂದ ಯಥೋಚಿತ ಸೇವೆ ಸಹಕಾರ ದೊರೆತಿಲ್ಲ. ನಾವು ಅವರಿಗೆ ಕರ್ತವ್ಯಬದ್ಧರಾಗಿದ್ದೇವೆ ಎನಿಸುತ್ತದೆ. ಅವರ ಸಾಮಾನ್ಯ ಜೀವನ ಸ್ತರವನ್ನು ಉನ್ನತಗೊಳಿಸಲು ಏನೆಲ್ಲ ಮಾಡಬೇಕೋ, ಮಾಡಿಯೇ ತೀರಬೇಕು. ನನ್ನ ಮತ್ತು ಅವರ ನಡುವೆ ಯಾವುದೇ ವಿವಾದವಿಲ್ಲ. ಹೊರಗಣ ಅಧಿಕಾರವನ್ನು ಹಕ್ಕು ರಕ್ಷಣೆಗಾಗಿ ನೆಚ್ಚುವುದು ಅವಿವೇಕವೆಂದು ನಾನು ಸೂಚಿಸಿದಾಗ, ಯಾರೇ ಒಬ್ಬ ವ್ಯಕ್ತಿ, ಸಮೂಹ ಅಥವಾ ವರ್ಗ ನನ್ನ ಮನಸ್ಸಿನಲ್ಲಿರಲಿಲ್ಲ.

ಒಂದು ಮುಖ್ಯವಾದ, ಅಷ್ಟೇ ಭಾವಾವೇಶಕ್ಕೆ ಒಳಪಡಿಸುವ ವಿಷಯದ ಬಗ್ಗೆ ಎಚ್ಚರಿಕೆಯ ನುಡಿಯನ್ನಾಡಲು ಬಯಸಿದ್ದೆ. ಇತ್ತೀಚಿನವರು ಬೆಳವಣಿಗೆಯ ಬಗ್ಗೆ ಹೋಲಿಕೆ ನೀಡಿ ಉಲ್ಲೇಖಿಸಿದ್ದು ಪ್ರಾಯಶಃ ವಿಷಾದನೀಯ ಎನಿಸುತ್ತೆ. ಪೋಲೆಂಡ್, ಬಲ್ಗೇರಿಯಾ, ಜೆಕೋಸ್ಲಾವಾಕಿಯಾ. ಆಸ್ಟ್ರಿಯಾ ಮತ್ತಿತರ ಪೌರಸ್ತ್ಯ ರಾಷ್ಟ್ರಗಳ ಅನುಭವಗಳು ನೆನಪಿನಲ್ಲಿಡಬೇಕಾದವೆಂದು ನಾನು ನಂಬುತ್ತೇನೆ. ನಾವು ನಮ್ಮದೇ ಸಂವಿಧಾನ ರಚಿಸುತ್ತಿರುವಾಗ ಈ ಅಂಶ ಪ್ರಸ್ತುತವಾಗುತ್ತದೆ. ಅನುಪಾತಾಧಾರಿತ ಪ್ರಾತಿನಿಧ್ಯದ ತತ್ತ್ವದ ಮೇಲೆ ಚುನಾವಣೆ ನಡೆಯಬೇಕಿತ್ತೆಂದು ಸಲಹೆ ಮಾಡಲಾಯಿತು. ವಾಸ್ತವವಾಗಿ ಅದೇ ತತ್ತ್ವದ ಮೇಲೆ ಚುನಾವಣೆ ನಡೆದದ್ದು. ನನ್ನ ಪ್ರಸ್ತಾವನಾ ಭಾಷಣದಲ್ಲಿ ಸೂಚಿಸಿದಂತೆ ಪ್ರತಿಯೊಂದು ಸಮೂಹದ ಸದಸ್ಯರೂ ಅವರವರ ಗುಂಪಿನೊಳಗೆ ತತ್ತ್ವಶಃ ಅವರವರ ಕೋಮಿನ ಗೆಳೆಯರಿಂದಲೆ ಚುನಾಯಿತರಾದದ್ದು. ಸಲಹಾ ಸಮಿತಿಯು, ಬಲು ದೊಡ್ಡ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಬಗೆಹರಿಸಲು ಹೊರಟಿರುವ ಸಮಯದಲ್ಲಿ ಇದೇ ಸಭೆಯ ಅನುಮೋದನೆ ಪಡೆಯಲು ಬಯಸಿದೆವು. ಸಮಿತಿಯನ್ನು ಇಡೀ ಸಭೆ ಅನುಮೋದಿಸಿದುದರಿಂದ, ಸಮಿತಿಯ ಪ್ರತಿಯೊಬ್ಬ ಸದಸ್ಯನಲ್ಲೂ ಅದು ಆತ್ಮವಿಶ್ವಾಸ ಮೂಡಿಸಬೇಕೆಂಬುದು ನಮ್ಮ ಬಯಕೆಯಾಗಿತ್ತು. ಹಾಗಾಗಿ ಸಮಿತಿಗೆ ನೈತಿಕ ತಳಹದಿ ಹಾಕಿಕೊಡಲೆಂದೆ ಈ ಕ್ರಮವನ್ನು ಅನುಸರಿಸಿದ್ದು. ನಾನಾಗಲೆ ಹೇಳಿದಂತೆ ಚುನಾವಣೆ ಸರ್ವಾನುಮತದಿಂದ ನಡೆಯಿತು. ಇಲ್ಲಿ ಹಾಜರಿಲ್ಲದ ಸದಸ್ಯರನ್ನುಳಿದು ಮಿಕ್ಕೆಲ್ಲ ಸದಸ್ಯರು ಸಭೆಯಲ್ಲಿ ಒಪ್ಪಿಗೆ ನೀಡಿದ್ದರು. ಈ ಹೆಸರುಗಳನ್ನು ಸಭೆಯ ಮುಂದಿಡುವ ಮುನ್ನ, ಪ್ರತಿಯೊಂದು ಸಮೂಹದ ಸದಸ್ಯರು ತಮ್ಮವರನ್ನೇ ವೈಯಕ್ತಿಕವಾಗಿ (ಪ್ರತ್ಯೇಕವಾಗಿ) ಆಯ್ಕೆ ಮಾಡಿದ್ದರು. ಇದಕ್ಕಿಂತಲೂ ಉತ್ತಮ ರೀತಿಯಲ್ಲಿ ಚುನಾವಣೆಯನ್ನು ಬೇರಾವ ರೀತಿಯಲ್ಲಿ ನಡೆಸಬೇಕಿತ್ತೋ ನನಗೆ ತಿಳಿಯದು. ಸಲಹಾ ಸಮಿತಿಯ ವ್ಯವಹಾರಗಳ ಚಾಲನೆಗೆ ಇದೊಂದು ಶುಭ ಪ್ರಾರಂಭ. ಪ್ರತಿಯೊಂದು ಉದ್ದೇಶಿತ ಗುಂಪು ಕೂಡ, ಪ್ರತ್ಯೇಕವಾಗಿ ಆಯ್ಕೆ ಮಾಡಿ. ಇಲ್ಲಿ ಸಭೆಯ ವ್ಯಕ್ತಿಗತ ಹಾಗೂ ಸಮಗ್ರ ಅನುಮೋದನೆ ಪಡೆದು ಕಾರ್ಯ ಪ್ರಾರಂಭಿಸುತ್ತಿರುವುದು

ಒಂದು ಶುಭ ಲಕ್ಷಣವೆ ಸರಿ. ಪ್ರತಿಯೊಬ್ಬ ಚುನಾಯಿತ ಸದ್ಯರಿಗೂ ತಮ್ಮ ತಮ್ಮ ಸ್ಥಾನ ಅಚ್ಚುಮೆಚ್ಚಾಗಿ ಪ್ರಶಂಸಾರ್ಹವಾಗಲಿದೆ ಎಂದು ಭಾವಿಸುತ್ತೇನೆ. ಕೆಲವು ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಕ್ವಚಿತ್ ಲೋಪಗಳ ಬಗ್ಗೆ ತಿಳಿಸಲಾಗಿದೆ. ಇವಷ್ಟು ಸದಸ್ಯರನ್ನು ಈ ಸಮಿತಿಗೆ ಪ್ರಯೋಜನವಾಗುವಂತೆ ಸೇರಿಸಿಕೊಳ್ಳಬಹುದಿತ್ತು ಎಂಬುದನ್ನು ನಾನು ಒಪ್ಪುತ್ತೇನೆ. ಇಲ್ಲಿ ಸಾರ್ವಜನಿಕ ಭಾವನೆಗಳಿಗೆ ಸ್ಪಂದಿಸುವ ಪ್ರತಿಭಾವಂತರು ನಮ್ಮೊಡನಿದ್ದಾರೆ. ಪ್ರತಿಯೊಬ್ಬರನ್ನು ನಾವು ಚುನಾಯಿಸಬಹುದು. ಪ್ರತಿಯೊಬ್ಬರೂ ಸಮಿತಿಗೆ ಅಮೂಲ್ಯ ಕೊಡುಗೆ ನೀಡಬಲ್ಲವರಾಗಿದ್ದರು. ಆದರೆ ಇಂತಹ ವಿಷಯಗಳಲ್ಲಿ ಕಾರ್ಯಸಾಧ್ಯವಾಗದ ಕೆಲವೊಂದು ತೊಂದರೆಗಳಿವೆ. ಸಂರಚನೆ, ತನ್ನ ಭಾರಕ್ಕೇ ತಾನು ಕುಸಿಯದಂತೆ ನೋಡಿಕೊಳ್ಳಬೇಕು, ಅತಿಯಾಗಿ, ಸಮರ್ಥ ಸದಸ್ಯರಿರುವುದೂ ತೊಡಕೆ. ಜನಪ್ರಗತಿಗೆ, ತೊಡಕುಗಳನ್ನು ತಾಳಿಕೊಳ್ಳುವುದಕ್ಕೆ. ಸಾಧ್ಯವಾಗುವಂತೆ, ಕೆಲವೊಮ್ಮೆ ಪ್ರತಿಭೆಗೂ ಒಂದು ಮಿತಿಯನ್ನು ಹಾಕಿಕೊಳ್ಳಬೇಕಾಗುತ್ತೆ. ಹಾಗಿಲ್ಲದೆ. ನೀವು ಭ್ರಮಾವಿಷ್ಟರಾಗಿದ್ದರೆ, ಪ್ಲೇಟೋ ರೂಪಿಸಿದ ಗಣತಂತ್ರವನ್ನು ಪಡೆಯಲು ಹೊರಟರೆ ಏನನ್ನೂ ಸಾಧಿಸಲಾಗದು. ಈ ಕಟುಸತ್ಯ ನಮ್ಮನ್ನು ಸುಮಾರು ೭೦ರ ಸದಸ್ಯತ್ವಕ್ಕಷ್ಟೆ ಮಿತಗೊಳಿಸಿದೆ. ಗಂಭೀರ ಸಮಸ್ಯೆಗಳ ಪರಿಹಾರ ಹುಡುಕುವುದಕ್ಕೆ ಆ ಸಂಖ್ಯೆ ಸಹ ದೊಡ್ಡದೆ. ಆದುದರಿಂದ, ಇಲ್ಲಿ ನೀಡಿದ ಎಲ್ಲ ಸಲಹೆಗಳನ್ನೂ ನಾವು ಪರಾಮರ್ಶಿಸಿಲ್ಲವೆಂದಲ್ಲ. ನಾವು ಸಮಿತಿಯ ಸದಸ್ಯರ ಸಂಖ್ಯೆಯನ್ನು ನಿಯಂತ್ರಣದಲ್ಲಿ ಇಟ್ಟಿದ್ದು ಇತರ ಗೌರವಾನ್ವಿತ ಸದಸ್ಯರ ನೆರವು ಪಡೆಯಲು ಇಚ್ಛಿಸುವುದಿಲ್ಲ ಎಂಬ ಕಾರಣಕ್ಕಾಗಿ ಅಲ್ಲ. ಆದರೆ ಸಮಿತಿಗೆ, ಇದಕ್ಕಿಂತಲೂ ಹೆಚ್ಚಿನ ಭಾರವನ್ನು ಹೊರುವುದು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ ಸಭೆಯ ಯಾವ ವರ್ಗದಿಂದಲೂ ಇದರ ಬಗ್ಗೆ ತಪ್ಪು ಕಲ್ಪನೆ ಇರುವುದು ಬೇಡ. ಎಷ್ಟೇ ಆದರೂ ಅಂತಹ ಸಮಿತಿಗಳಲ್ಲಿ ಕೈಗೊಂಡ ನಿರ್ಧಾರಗಳು, ಸಾಧಾರಣ ಮತಗಳಿಂದ ಅಂಗೀಕೃತವಾಗಲಾರವು. ಪ್ರತಿಯೊಬ್ಬರೂ ತಮ್ಮ ಸಮೂಹದ ಇತರ ಸಹಸದಸ್ಯರ ಅಭಿಪ್ರಾಯಗಳನ್ನು ಪರಾಮರ್ಶಿಸಬೇಕಾಗುತ್ತದೆ. ಎಲ್ಲದರಲ್ಲೂ ಕೊಡು–ಕೊಳ್ಳುವ ಹೊಂದಾಣಿಕೆ ಮನೋಭಾವ ಇರಬೇಕು. ಆದುದರಿಂದ ಕೈಗೊಂಡ ನಿರ್ಧಾರಗಳ ಬಗ್ಗೆ ಸಹಮತ ಇರಬೇಕೆಂದು ನಾವು ನಿರೀಕ್ಷಿಸುತ್ತೇವೆ. ಇಂತಹ ಸಮಿತಿಗಳಲ್ಲಿ ಬಹುಸಂಖ್ಯಾತ ಮತಗಳಷ್ಟೆ ಲೆಕ್ಕಕ್ಕೆ ಬರುವುದಿಲ್ಲ. ವಿಭಿನ್ನ ಸಮಿತಿಗಳಿಗೆ ಗೊತ್ತು ಪಡಿಸಿದ ಸಂಖ್ಯೆ, ಅವರ ಜನಸಂಖ್ಯೆಗೆ ಕಟ್ಟುನಿಟ್ಟಾಗಿ ಅನುಗುಣವಾಗಿಲ್ಲವೆಂದು ಕೆಲವು ಗೌರವಾನ್ವಿತ ಸದಸ್ಯರು ವಾದ ಮಾಡಬಹುದು. ಅದನ್ನು ನಾನು ಒಪ್ಪುತ್ತೇನೆ. ಇಂತಹ ವಿಷಯಗಳಲ್ಲಿ ಲಕ್ಷೋಪಲಕ್ಷ ಜನಸಂಖ್ಯೆಗೆ ಅನುಗುಣವಾಗಿ, ಅನುಪಾತಾಧಾರಿತ ಪ್ರಾತಿನಿಧ್ಯವನ್ನು ನಿರ್ಧರಿಸುವ ಮಾನದಂಡವಿಲ್ಲ. ಅವರಲ್ಲಿ ವಿಭಿನ್ನ ಆಸಕ್ತಿಗಳು ಇರುತ್ತವೆ. ಹೆಚ್ಚುವರಿಯಾಗಿ ಇಬ್ಬರು ಪರಿಶಿಷ್ಟ ಜಾತಿಯ ಪ್ರತಿನಿಧಿಗಳಿಂದಲೋ ಅಥವಾ ಆಂಗ್ಲೋ ಇಂಡಿಯನ್ ಸದಸ್ಯರೊಬ್ಬರು ಕಡಿಮೆ ಇರುವುದರಿಂದಲೋ, ಆಗುವ ವ್ಯತ್ಯಾಸವೇನು ನಮಗೇನೂ ತೋಚುತ್ತಿಲ್ಲ. ಡಾ. ಅಂಬೇಡ್ಕರ್, ಶ್ರೀ ಆಂಥಣಿಯವರಂಥ ಯೋಗ್ಯರು, ಸಮರ್ಥರು ಇದ್ದರೆ, ಅರ್ಧ ಡಜನ್‌ಗಿಂತಲೂ ಹೆಚ್ಚು ಸದಸ್ಯರಿದ್ದಂತೆ. ಇಂತಹ ವಿಷಯಗಳಲ್ಲಿ, ಅವರ ಚೈತನ್ಯದಾಯಕ ಸ್ಫೂರ್ತಿಯಷ್ಟೇ ಮುಖ್ಯವಾಗುತ್ತದೆ. ಈ ಸಮಿತಿಯು ಕಾರ್ಯೋನ್ಮುಖವಾದಾಗ, ಆ ರೀತಿಯ ವಿಷಾದಕ್ಕೆ ಅವಕಾಶವಿರಲಾರದೆಂದು ನಂಬುತ್ತೇನೆ. ಸಮಿತಿ ತನಗೆ ವಹಿಸಿದ ಜವಾಬ್ದಾರಿಯನ್ನು ತೃಪ್ತಿಕರವಾಗಿ ನಿರ್ವಹಿಸಿದಾಗ, ಅದನ್ನು ಅಭಿನಂದಿಸುವಲ್ಲಿ ಎಲ್ಲರೂ ಒಂದಾಗೋಣ.

**ಮಾನ್ಯ ಅಧ್ಯಕ್ಷರು :** ಪಂಡಿತ್ ಪಂತ್, ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಪ್ರಸ್ತಾವಿಸಿದ ತಿದ್ದುಪಡಿಯ ಬಗ್ಗೆ ತಾವೇನೂ ಹೇಳಲಿಲ್ಲ.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್ :** ನಾನು ಆ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ನಿಲುವಳಿಯು ಪ್ರಸ್ತಾವಿಸಲ್ಪಟ್ಟಿದೆ. ನಂತರ ತಿದ್ದುಪಡಿಗಳನ್ನು ಮಂಡಿಸಿದ ಪ್ರಸ್ತಾವಕರು ಅವುಗಳನ್ನು ಅಂಗೀಕರಿಸಿದ್ದಾರೆ. ಹಾಗಾಗಿ, ತಿದ್ದುಪಡಿಯಾದ ನಿಲುವಳಿಯು ಈಗ ಈ ರೀತಿ ಇರುತ್ತದೆ:

೧೯೪೬ರ ಮೇ ೧೬ರ ಕ್ಯಾಬಿನೆಟ್ ಮಿಷನ್ ಹೇಳಿಕೆಯಂತೆ ೨೦ನೇ ಖಂಡಿಕೆಯ ಮೇರೆಗೆ, ಕೆಳಗೆ ವಿವರಿಸಿರುವಂತೆ ಸಲಹಾ ಸಮಿತಿಯೊಂದನ್ನು ರಚಿಸುವಂತೆ ಸಭೆ ನಿರ್ಣಯಿಸುತ್ತದೆ.

೧.(ಎ). ಸಲಹಾ ಸಮಿತಿಯಲ್ಲಿ ೭೨ಕ್ಕೆ ಮೀರದಂತೆ ಸದಸ್ಯರಿರುತ್ತಾರೆ. ಅವರು, ಸಭೆಯ ಸದಸ್ಯರಲ್ಲದವರನ್ನು ಸೇರಿಸಿಕೊಳ್ಳಬಹುದು.

ಬಿ. ಪ್ರಾರಂಭದಲ್ಲಿ ಮುಂದೆ ಕಾಣಿಸುವ ಸದಸ್ಯರಿರುತ್ತಾರೆ.

೧. ಶ್ರೀ ಜಯರಾಮ್‌ದಾಸ್ ದೌಲತ್‌ರಾಮ್
೨. ಗೌರವಾನ್ವಿತ ಶ್ರೀ ಮೆಹರ್‌ಚಂದ್ ಖನ್ನ
೩. ಡಾ. ಗೋಪಿಚಂದ್ ಭಾರ್ಗವ
೪. ಭಕ್ಷಿ ಸರ್ ಟೇಕ್‌ಚಂದ್
೫. ಡಾ. ಪ್ರಫುಲ್ಲ ಚಂದ್ರ ಘೋಷ್
೬. ಶ್ರೀ ಸುರೇಂದ್ರ ಮೋಹನ್ ಘೋಷ್
೭. ಡಾ. ಶ್ಯಾಮಪ್ರಸಾದ್ ಮುಖರ್ಜಿ
೮. ಶ್ರೀ ಪೃಥ್ವಿಸಿಂಗ್ ಆಜ಼ಾದ್
೯. ಶ್ರೀ ಧರ್ಮಪ್ರಕಾಶ್
೧೦. ಶ್ರೀ ಎಚ್.ಜೆ. ಖಾಂಡೇಕರ್
೧೧. ಗೌರವಾನ್ವಿತ ಶ್ರೀ ಜಗಜೀವನ ರಾಂ
೧೨. ಶ್ರೀ ಪಿ.ಆರ್. ಠಾಕುರ್
೧೩. ಡಾ. ಬಿ.ಆರ್. ಅಂಬೇಡ್ಕರ್
೧೪. ಶ್ರೀ ವಿ.ಎ. ಮುನಿಸ್ವಾಮಿ ಪಿಳ್ಳೈ
೧೫. ಸರ್ದಾರ್ ಜೋಗೇಂದ್ರ ಸಿಂಗ್
೧೬. ಗೌರವಾನ್ವಿತ ಸರ್ದಾರ್ ಬಲದೇವ್ ಸಿಂಗ್
೧೭. ಸರ್ದಾರ್ ಪ್ರತಾಪ್ ಸಿಂಗ್
೧೮. ಸರ್ದಾರ್ ಹರ್‌ನಾಮ್ ಸಿಂಗ್
೧೯. ಸರ್ದಾರ್ ಉಜ್ಜಲ್ ಸಿಂಗ್
೨೦. ಗ್ಯಾನಿ ಕರ್ತಾರ್ ಸಿಂಗ್
೨೧. ಡಾ. ಎಚ್.ಸಿ. ಮುಖರ್ಜಿ
೨೨. ಡಾ. ಆಲ್‌ಬನ್ ಡಿ'ಸೋಜಾ
೨೩. ಶ್ರೀ ಸಾಲ್ವೆ
೨೪. ಶ್ರೀ ರೋಚೆ ವಿಕ್ಟೋರಿಯಾ
೨೫. ಶ್ರೀ ಎಸ್.ಎಚ್. ಪ್ರೇಟರ್
೨೬. ಶ್ರೀ ಫ್ರಾಂಕ್ ರೆಜಿನಾಲ್ಡ್ ಆಂಥಣಿ
೨೭. ಶ್ರೀ ಎಂ.ವಿ.ಎಚ್. ಕಾಲಿನ್ಸ್
೨೮. ಸರ್. ಹೋಮಿ ಮೋದಿ
೨೯. ಶ್ರೀ ಎಂ.ಆರ್. ಮಸಾನಿ
೩೦. ಶ್ರೀ ಆರ್.ಕೆ. ಸಿಧ್ವಾ

೩೧. ಶ್ರೀ ರೂಪ್‌ನಾಥ್ ಬ್ರಹ್ಮ
೩೨. ಖಾನ್ ಅಬ್ದುಲ್ ಗಫಾರ್ ಖಾನ್
೩೩. ಖಾನ್ ಅಬ್ದುಸ್ ಸಮದ್ ಖಾನ್
೩೪. ಗೌರವಾನ್ವಿತ ರೆವರೆಂಡ್ ಜೆ.ಜೆ.ಎಂ. ನಿಕೋಲ್ಸ್ ರಾಯ್
೩೫. ಶ್ರೀ ಮಯಂಗ್ ಮೋಕ್ಚ
೩೬. ಶ್ರೀ ಫೂಲ್‌ಭಾನ್ ಷಾ
೩೭. ಶ್ರೀ ದೇವೇಂದ್ರನಾಥ್ ಸಮಂತ
೩೮. ಶ್ರೀ ಜೈಪಾಲ್ ಸಿಂಗ್
೩೯. ಆಚಾರ್ಯ ಜೆ.ಬಿ. ಕೃಪಲಾನಿ
೪೦. ಗೌರವಾನ್ವಿತ ಮೌಲಾನಾ ಅಬುಲ್ ಕಲಾಂ ಆಜ಼ಾದ್
೪೧. ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್
೪೨. ಗೌರವಾನ್ವಿತ ಶ್ರೀ ಸಿ. ರಾಜಗೋಪಾಲಾಚಾರಿಯರ್
೪೩. ರಾಜಕುಮಾರಿ ಅಮೃತ್ ಕೌರ್
೪೪. ಶ್ರೀಮತಿ ಹಂಸ ಮೆಹ್ತಾ
೪೫. ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್
೪೬. ಗೌರವಾನ್ವಿತ ಶ್ರೀಯುತ ಗೋಪೀನಾಥ್ ಬರ್ಡೋಲೋಯಿ
೪೭. ಗೌರವಾನ್ವಿತ ಶ್ರೀ ಪುರುಷೋತ್ತಮದಾಸ್ ಟಂಡನ್
೪೮. ದಿವಾನ್ ಬಹಾದುರ್ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್
೪೯. ಶ್ರೀ ಕೆ.ಟಿ. ಷಾ
೫೦. ಶ್ರೀ ಕೆ.ಎಂ. ಮುನ್ಷಿ

ಸಿ) ೨೨ ಸದಸ್ಯರಿಗೆ ಮೀರದಂತೆ ಸದಸ್ಯರನ್ನು, ಅಧ್ಯಕ್ಷರು ಯಾವಾಗಲಾದರೂ ಅಥವಾ ಬೇರೆ ಬೇರೆ ಸಂದರ್ಭಗಳಲ್ಲಿ ನಾಮನಿರ್ದೇಶನ ಮಾಡಬಹುದು. ಅವರ ಪೈಕಿ ೭ ಮಂದಿ ಮುಸ್ಲಿಮರು, ಮದರಾಸು, ಬಾಂಬೆ, ಸಂಯುಕ್ತ ಪ್ರಾಂತ್ಯಗಳು, ಬಿಹಾರ್, ಕೇಂದ್ರ ಪ್ರಾಂತ್ಯಗಳು ಒರಿಸ್ಸ ಮತ್ತು ಅಸ್ಸಾಂ ಪ್ರಾಂತ್ಯಗಳನ್ನು ಪ್ರತಿನಿಧಿಸುತ್ತಾರೆ.

೨. ವಾಯವ್ಯ ಬುಡಕಟ್ಟು ಪ್ರದೇಶಗಳು, ಈಶಾನ್ಯ ಬುಡಕಟ್ಟು ಪ್ರದೇಶಗಳು, ಹೊರಗುಳಿದ ಹಾಗೂ ಭಾಗಶಃ ಹೊರಗುಳಿದ ಪ್ರದೇಶಗಳ ಆಡಳಿತ ನಿರ್ವಹಣೆಗಾಗಿ ಯೋಜನೆಗಳನ್ನು ನಿರೂಪಿಸಲು, ಉಪಸಮಿತಿಗಳನ್ನು, ಸಲಹಾ ಸಮಿತಿ ರಚಿಸಬೇಕು. ಆಯಾ ಕಾಲದಲ್ಲಿ ತನ್ನ ಪರಿಶೀಲನೆಗೆ ಒಳಪಟ್ಟ, ನಿರ್ದಿಷ್ಟ ಬುಡಕಟ್ಟು ಪ್ರದೇಶದಲ್ಲಿ, ಆ ಪ್ರದೇಶಕ್ಕೆ ಸಂಬಂಧಿಸಿದ ಕೆಲಸಕ್ಕೆ ನೆರವಾಗಲು ಇಬ್ಬರಿಗಿಂತ ಮೀರದಂತೆ, ಸ್ಥಳೀಯ ಸಹಸದಸ್ಯರನ್ನು ಉಪಸಮಿತಿ ನೇಮಿಸಿಕೊಳ್ಳಬಹುದು.

೩. ಸಲಹಾ ಸಮಿತಿಯು ತನ್ನ ಅಗತ್ಯಕ್ಕೆ ತಕ್ಕಂತೆ ಆಗಿಂದಾಗ್ಗೆ ಇತರ ಉಪಸಮಿತಿಗಳನ್ನು ನೇಮಿಸಿಕೊಳ್ಳಬಹುದು.

೩.ಎ. ಒಮ್ಮೆ ಸಮಿತಿಯು ಸೇರುವಾಗ ಅಥವಾ ಉಪಸಮಿತಿಯು ಸೇರುವಾಗ, ಕನಿಷ್ಠ ಅದರ ಮೂರನೆ ಒಂದು ಭಾಗ ಕೋರಂ ಇರಬೇಕು.

ಈ ನಿಲುವಳಿ ಅಂಗೀಕೃತವಾದ ದಿನಾಂಕದಿಂದ ಮೂರು ತಿಂಗಳ ಒಳಗೆ ಸಲಹಾ ಸಮಿತಿಯು ಕೇಂದ್ರ ಸಂವಿಧಾನ ರಚನಾಸಭೆಗೆ ವರದಿಯನ್ನು ಸಲ್ಲಿಸಬೇಕು. ಈ ನಡುವೆ. ಸಲಹಾ ಸಮಿತಿಯ ಮಧ್ಯಾಂತರ ವರದಿಗಳನ್ನು ಸಲ್ಲಿಸುತ್ತಿರಬೇಕು; ಆದರೆ ಮೂಲಭೂತ ಹಕ್ಕುಗಳನ್ನು ಕುರಿತ ಮಧ್ಯಾಂತರ ವರದಿಯನ್ನು ೬

ವಾರದೊಳಗೆ ಸಲ್ಲಿಸಬೇಕು. ಅಲ್ಪಸಂಖ್ಯಾತ ಹಕ್ಕುಗಳನ್ನು ಕುರಿತ ಮಧ್ಯಾಂತರ ವರದಿಯನ್ನು ೧೦ ವಾರಗಳ ಒಳಗೆ ಸಲ್ಲಿಸಬೇಕು.

೫. ಸಲಹಾ ಸಮಿತಿಯಲ್ಲಿ ಸ್ಥಾನಗಳು ತೆರವಾದರೆ, ಅಧ್ಯಕ್ಷರ ನಾಮನಿರ್ದೇಶನದಂತೆ ಕೂಡಲೆ ಆ ಸ್ಥಾನಗಳನ್ನು ಭರ್ತಿ ಮಾಡಬೇಕು.

೬. ಸಮಿತಿಯ ವ್ಯವಹಾರಗಳನ್ನು ನಡೆಸುವ ಬಗ್ಗೆ, ಅಧ್ಯಕ್ಷರು ಸ್ಥಾಯಿ ಆದೇಶ ನೀಡಬಹುದು.

ಈಗ, ತಿದ್ದುಪಡಿಯಾದ ನಿಲುವಳಿಯನ್ನು ಮತಕ್ಕೆ ಹಾಕುತ್ತೇವೆ.

ನಿಲುವಳಿಯು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕೃತವಾಯಿತು.

**ಮಾನ್ಯ ಅಧ್ಯಕ್ಷರು :** ಮಧ್ಯಾಹ್ನ ೩ ಘಂಟೆಗೆ ನಾವು ಮತ್ತೆ ಸೇರೋಣ. ಆ ವೇಳೆ ಆಯವ್ಯಯ ಪತ್ರದ ಚರ್ಚೆಯನ್ನು ಸಮಿತಿಯ ಸಭೆಯಲ್ಲಿ ನಡೆಸೋಣ. ಆದುದರಿಂದ, ಆಗಂತುಕರು ಮಧ್ಯಾಹ್ನದ ಅಧಿವೇಶನದಲ್ಲಿ ಹಾಜರಿರುವ ಅಗತ್ಯವಿರಲಾರದು.

ನಂತರ ಸಭೆಯು ಭೋಜನಕ್ಕಾಗಿ ಮಧ್ಯಾಹ್ನ ೩ ಘಂಟೆಯವರೆಗೆ ಮುಂದೂಡಲ್ಪಟ್ಟಿತು.

ಸಂವಿಧಾನ ರಚನಾಸಭೆ, ಸಮಿತಿಯೊಡನೆ, ಭೋಜನ ವಿರಾಮದ ನಂತರ ಮಧ್ಯಾಹ್ನ ೩ ಘಂಟೆಗೆ ಸಮಾವೇಶಗೊಂಡಿತು.

...........

ಆಯವ್ಯಯ ಅಂದಾಜುಪತ್ರ ಕುರಿತ ಚರ್ಚೆ ಪರಿಸಮಾಪ್ತಿಗೊಂಡಿತು.
ಸಂವಿಧಾನ ರಚನಾಸಭೆಯ, ಸರ್ವಸದಸ್ಯರ ಅಧಿವೇಶನ
ಮಧ್ಯಾಹ್ನ ೩ ಘಂಟೆ ೫೫ ನಿಮಿಷಕ್ಕೆ ಪ್ರಾರಂಭವಾಯಿತು.
ಸಂವಿಧಾನ ರಚನಾಸಭೆಯ ಆಯವ್ಯಯ ಅಂದಾಜು.

**ಮಾನ್ಯ ಅಧ್ಯಕ್ಷರು :** ಮಿ। ಗಾಡ್ಗಿಲ್ ಅವರು ಔಪಚಾರಿಕವಾಗಿ ನಿಲುವಳಿಯನ್ನು ಪ್ರಸ್ತಾವಿಸುತ್ತಾರೆ.

**ಮಿ। ಎನ್.ವಿ. ಗಾಡ್ಗಿಲ್ :** (ಬಾಂಬೆ-ಸಾಮಾನ್ಯ) : ನಾನು ಔಪಚಾರಿಕವಾಗಿ ನಿಲುವಳಿಯನ್ನು ಪ್ರಸ್ತಾವಿಸುತ್ತೇನೆ. ವಾಸ್ತವವಾಗಿ, ಅದನ್ನು ಸರ್ವಸದಸ್ಯರ ಅಧಿವೇಶನದಲ್ಲಿ ಮಂಡಿಸಲಾಗಿತ್ತು. ಅದು ಔಪಚಾರಿಕವಾಗಿ ಪ್ರಸ್ತಾವಿಸಲ್ಪಟ್ಟ ನಂತರ ಸದನವು ಸಮಿತಿ ಸಭೆಯಲ್ಲಿ ಚರ್ಚಿಸುವ ನಿರ್ಣಯ ಕೈಗೊಂಡಿತು.

**ಓರ್ವ ಗೌರವಾನ್ವಿತ ಸದಸ್ಯರು :** ನಾನು ಅದನ್ನು ಅನುಮೋದಿಸುತ್ತೇನೆ.

**ಮಾನ್ಯ ಅಧ್ಯಕ್ಷರು :** ನಿಲುವಳಿಯು ಔಪಚಾರಿಕವಾಗಿ ಪ್ರಸಾವಿಸಲ್ಪಟ್ಟು ಅನುಮೋದಿಸಲ್ಪಟ್ಟಿದೆ.

"೧೯೪೬-೪೭ ಮತ್ತು ೧೯೪೭-೪೮ ನೆಲ ಸಾಲಿನಲ್ಲಿ ಸಭೆಯ ಆಯವ್ಯಯ ಅಂದಾಜುಪತ್ರಕ್ಕೆ ಸಭೆ ಮಂಜೂರಾತಿ ನೀಡುವಂತೆ ನಿರ್ಣಯ ಕೈಗೊಳ್ಳಲಾಗಿದೆ. ಅಂದಾಜು ವಿವರಪತ್ರವನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸಿಬ್ಬಂದಿ ವರ್ಗ ಮತ್ತು ಹಣಕಾಸು ಸಮಿತಿಯ ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ೫೦(೧)ನೇ ನಿಯಮದ ಮೇರೆಗೆ ಸಿದ್ಧಪಡಿಸಿವೆ".

"ಸಂವಿಧಾನ ರಚನಾಸಭೆಯ ನಿಯಮಗಳನ್ನು ೫೧(೧)ನೇ ನಿಯಮದಂತೆ ಸಭೆಯ ಸದಸ್ಯರ ಭತ್ಯೆಯನ್ನು, ಸಭೆ ಗೊತ್ತು ಪಡಿಸುವಂತೆ ನಿರ್ಣಯ ಕೈಗೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿದ ಪರಿಶಿಷ್ಟವನ್ನು ಇದರೊಂದಿಗೆ ಲಗತ್ತಿಸಲಾಗಿವೆ. ಸಿಬ್ಬಂದಿ ವರ್ಗ ಮತ್ತು ಹಣಕಾಸು ಸಮಿತಿ, ವಿವರಪತ್ರವನ್ನು ಸಿದ್ಧಪಡಿಸಿವೆ."

ನಾನು ಇಡೀ ಪರಿಶಿಷ್ಟವನ್ನು ಓದುವ ಅಗತ್ಯವಿಲ್ಲ. ಸದಸ್ಯರಿಗೆ ಪರಿಶಿಷ್ಟದ ಬಗ್ಗೆ ತಿಳಿದಿದೆ.

ಆಯವ್ಯಯ ಪತ್ರವನ್ನು ಅಂಗೀಕರಿಸಲಾಯಿತು.

ಆಯವ್ಯಯವನ್ನು ಅಳವಡಿಸಲಾಯಿತು.

**ಮಾನ್ಯ ಅಧ್ಯಕ್ಷರು :** ಇಲ್ಲಿಗೆ ಈ ದಿನದ ನಮ್ಮ ವ್ಯವಹಾರ ಸಮಾಪ್ತಿಗೊಂಡಿದೆ.

**ಮಿ। ದೇಶಬಂಧು ಗುಪ್ತ :** ಸ್ವಾಮಿ, ನಾನೊಂದು ಪ್ರಶ್ನೆ ಕೇಳಬಹುದೆ? ಸರ್ಕಾರಿ ಸೇವಾ ನಿಯಮಗಳು,

ಸಂವಿಧಾನ ರಚನಾಸಭೆಯ ಸೇವಕರಿಗೆ ಅನ್ವಯವಾಗುತ್ತವೆಯೇ ಎಂಬ ಬಗ್ಗೆ ಏನಾದರೂ ತೀರ್ಮಾನ ಕೈಗೊಳ್ಳಲಾಗಿದೆಯೆ?

**ಮಾನ್ಯ ಅಧ್ಯಕ್ಷರು :** ಯಾವುದೂ ತಿರ್ಮಾನವಾಗಿಲ್ಲ, ನಮ್ಮ ಸೇವಕರು ಸರ್ಕಾರಿ ನೌಕರರಲ್ಲ.

**ಮಿ| ದೇಶಬಂಧು ಗುಪ್ತ :** ಸರ್ಕಾರಿ ಸೇವಾ ನಿಯಮಗಳು ಅವರಿಗೆ ಅನ್ವಯವಾಗುತ್ತವೆಯೇ ಇಲ್ಲವೆ?

**ಮಾನ್ಯ ಅಧ್ಯಕ್ಷರು :** ನಾವು ನಮ್ಮದೆ ನಿಯಮಗಳನ್ನು ರೂಪಿಸಬಹುದು. ಸರ್ಕಾರಿ ಸೇವಾ ನಿಯಮಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ. ಸರ್ಕಾರದಿಂದ ಸಾಲ ಪಡೆದವರು ತಮ್ಮದೆ ರೀತಿಯಲ್ಲಿ ವಿಧೇಯತೆ ಹಾಗೂ ಬದ್ಧತೆಯನ್ನು ತೋರಬಹುದು. ನಾಳೆ ಮತ್ತೆ ಸರ್ವಸದಸ್ಯರ ಸಭೆ ಸೇರೋಣ. ಕೆಲವು ನಿಲುವಳಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಸಭೆಯನ್ನು ನಾಳೆ ಬೆಳಗ್ಗೆ ೧೧ ಘಂಟೆಯವರೆಗೆ ಮುಂದೂಡಲಾಗುವುದು.

ಸಭೆಯ ನಂತರ ಶನಿವಾರ, ಜನವರಿ ೨೫, ೧೯೪೭ರ ಬೆಳಗ್ಗೆ ೧೧ ಘಂಟೆಗೆ ಮುಂದೂಡಲ್ಪಟ್ಟಿತು.